21 ಸೆಪ್ಟೆಂಬರ್ 2025 ಭಾನುವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 193 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಜನಮನದ ದನಿ


# ಪ್ರಜೋದಯ

ದಿನಪತ್ರಿಕೆ


ಸಂಪಾದಕ : ಜೆ.ಆರ್. ಕೆಂಚೇಗೌಡ



ಮಲಯಾಳಂ ಖ್ಯಾತ ನಟ ಮೋಹನ್ ಲಾಲ್ ಅವರಿಗೆ ಪ್ರತಿಷ್ಠಿತ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ಕೇಂದ್ರ ಸರ್ಕಾರ ಶನಿವಾರ ಘೋಷಿಸಿದೆ.



ಅರೆಗಿವುಡರ ಬಾಳು ಬೆಳಗಿದ ಡಿಜಿಟಲ್ ಶ್ರವಣ ಸಾಧನಗಳು » 2



ಬಡ ರೋಗಿಗಳೇ ಯಾಕೆ ಬ್ರೈನ್ ಡೆಡ್ ಆಗುತ್ತಾರೆ ? » 3



ತಿಂಗಳ ಮೊದಲ ಶನಿವಾರ ಕುಂದುಕೊರತೆ ಸಭೆ ನಡೆಸಿ » 4

# ಜಾತಿಗಣತಿ ಪ್ರತಿಫಲ ಕಾಂಗ್ರೆಸ್ ಅನುಭವಿಸುತ್ತೆ

## ಸಮೀಕ್ಷೆಯಲ್ಲಿ ಅನ್ಯಾಯವಾದರೆ ಹೋರಾಟ: ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಎಚ್ಚರಿಕೆ

• ಪ್ರಜೋದಯ ವರದಿ

**ಬೆಂಗಳೂರು:** ಜಾತಿಗಣತಿ ಮೂಲಕ ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಬೆಂಕಿ ಹಚ್ಚಲು ಏನು ಬೇಕೋ ಅದನ್ನು ಮಾಡಿದೆ. ಅದರ ಪ್ರತಿಫಲ ವನ್ನು ಕಾಂಗ್ರೆಸ್ ಭವಿಷ್ಯದಲ್ಲಿ ಅನುಭವಿಸಲಿದೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಆಕ್ರೋಶ ವ್ಯಕ್ತಪಡಿಸಿದರು.

ಜಾತಿಗಣತಿ ಕುರಿತು ಒಕ್ಕಲಿಗ ಸಮುದಾಯದ ಜಾಗೃತಿ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಮುದಾಯದ ಸ್ವಾಮೀಜಿಗಳ ನೇತೃತ್ವದಲ್ಲಿ ಸಭೆ ಮಾಡಿದ್ದೇವೆ. ಸರ್ಕಾರದಿಂದ ಸಮೀಕ್ಷೆಯಲ್ಲಿ ಅನ್ಯಾಯವಾದರೆ ಸ್ವಾಮೀಜಿಗಳ ನೇತೃತ್ವದಲ್ಲಿ ಮುಂದಿನ ಹೋರಾಟದ ರೂಪುರೇಷೆ ಬಗ್ಗೆ ಚರ್ಚೆ ಮಾಡಿದ್ದೇವೆ. ಇದು ಸಣ್ಣ ಮಟ್ಟದ ಸಭೆಯಷ್ಟೇ, ಸಾಧಕ-ಬಾಧಕಗಳ ಬಗ್ಗೆ ಚರ್ಚೆ ಮಾಡಿದ್ದು, ಉಪಮುಖ್ಯಮಂತ್ರಿ ಡಿ.ಕೆ.ಶಿವ ಕುಮಾರ್ ಅವರು ಎಲ್ಲಾ ಸಮಸ್ಯೆ ಬಗೆಹರಿಸುವ ಬಗ್ಗೆ ಜವಾಬ್ದಾರಿ ತೆಗೆದುಕೊಂಡಿದ್ದಾರೆಂದು ಹೇಳಿದರು.

ಸಾಮಾಜಿಕ ಹಾಗು ಶೈಕ್ಷಣಿಕ ಸಮೀಕ್ಷೆ ಹೆಸರಿನಲ್ಲಿ ರಾಜ್ಯ ಸರ್ಕಾರ ಆತುರಾತುರ ವಾಗಿ ಜಾತಿ ಗಣತಿ ಮಾಡುತ್ತಿದ್ದು, ಭವಿಷ್ಯದಲ್ಲಿ ಇದು ದೊಡ್ಡ ಸಮಸ್ಯೆಗೆ ಕಾರಣವಾಗಲಿದೆ. ಈಗಾಗಲೇ ಕಾಂತರಾಜ್ ಆಯೋಗ, ಜಯಪ್ರಕಾಶ್ ಹೆಗಡೆ ಆಯೋಗ ಆಯಿತು. ಈಗ ಮೂರನೇ ಆಯೋಗ ರಚನೆಯಾಗಿದೆ. ಈ ರೀತಿಯ ಆಯೋಗ ರಚನೆ ಮಾಡಬೇಕಾದರೆ ಏನೆಲ್ಲಾ ಮಾನದಂಡಗಳನ್ನು



ಅನುಸರಿಸಿದ್ದಾರೆ ಎನ್ನುವುದನ್ನು ನೋಡಬೇಕು. ಸುಮ್ಮನೆ ಆಯೋಗ ರಚನೆ ಮಾಡಲು ಸಾಧ್ಯವಿಲ್ಲ. ಸಮೀಕ್ಷೆಗೆ 15 ದಿನಗಳ ಅವಕಾಶ ಕೊಟ್ಟಿದ್ದಾರೆ. ಅದರಲ್ಲಿ 9 ದಿನ ನವರಾತ್ರಿ ಬರುತ್ತದೆ, ಉಳಿದ 6 ದಿನಗಳಲ್ಲಿ ಆಯೋಗ ಏನು ವರದಿ ಕೊಡಲು ಸಾಧ್ಯ? ಹಾಗಾದರೆ ಅವರು ಕಾಂತರಾಜ್ ವರದಿಯನ್ನೇ ಭಟ್ಟಿ ಇಳಿಸುತ್ತಾರೆಂದು ಪ್ರಶ್ನಿಸಿದರು.

ಜಾತಿ ವಿಚಾರದಲ್ಲಿ ಒಕ್ಕಲಿಗರಿಗೆ ದೊಡ್ಡಮಟ್ಟದ ಪೆಟ್ಟು ಬಿದ್ದಿದೆ. ಬೆಂಗಳೂರಿನಲ್ಲಿ ಹೆಚ್ಚು ಭೂಮಿಯನ್ನು ಕಳೆದುಕೊಂಡಿದ್ದು ಒಕ್ಕಲಿಗರ ಸಮಾಜ. ಡಿ.ಕೆ.ಶಿವಕುಮಾರ್ ಎಲ್ಲಾ ಸಮಸ್ಯೆ ಬಗೆಹರಿಸಲು ಜವಾಬ್ದಾರಿ ತೆಗೆದುಕೊಂಡಿದ್ದಾರೆ. ಮುಂದೆ ನೋಡೋಣ, ಏನಾಗುತ್ತದೆ ಎಂದು. ಇದು ಇನ್ನೊಂದು ಕಾಂತರಾಜ್ ವರದಿ ಅಲ್ಲ, ಅದಕ್ಕಿಂತಲೂ ಕೆಟ್ಟದಾಗಿ ಇರುತ್ತದೆ ಎಂದು ದೂರಿದರು.

### ಪಕ್ಷಭೇದ ಮರೆತು ಒಂದಾದರು

ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಿಪಕ್ಷ ನಾಯಕ ಆರ್.ಅಶೋಕ್, ಅಶ್ವಥ್ ನಾರಾಯಣ್, ಮಾಜಿ ಸಿಎಂ ಡಿ.ವಿ. ಸದಾನಂದಗೌಡ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಸೇರಿ ಪ್ರಮುಖರು ಭಾಗಿಯಾದರು.

ಸಭೆ ಬಳಿಕ ಮಾತನಾಡಿದ ನಿರ್ಮಲಾನಂದನಾಥ ಶ್ರೀ ಯಾವುದೇ ಕಾರಣಕ್ಕೂ ಕ್ರಿಶ್ಚಿಯನ್ ಜೊತೆ ಒಕ್ಕಲಿಗರನ್ನು ಸೇರಿಸಬಾರದು. ಜಾತಿಗಣತಿ ಸಮೀಕ್ಷೆ ಪಟ್ಟಿಯಲ್ಲಿ ಧರ್ಮ ಹಿಂದೂ, ಜಾತಿ ಒಕ್ಕಲಿಗ ಬರೆಸಲು ನಿರ್ಣಯ ಕೈಗೊಳ್ಳಲಾಯಿತು ಎಂದು ತಿಳಿಸಿದರು.

ಜಾತಿ ಸಮೀಕ್ಷೆಯನ್ನು 45 ದಿನಗಳ ಕಾಲ ಮುಂದೂಡಬೇಕು. ನವರಾತ್ರಿಯ ಸಂಭ್ರಮದಲ್ಲಿ ಸಮೀಕ್ಷೆ ಮಾಡಲು ಹೊರಟರೆ ಪೂರ್ಣ ಫಲಿತಾಂಶ ಸಿಗಲು ಸಾಧ್ಯವಿಲ್ಲ. ಹೆಚ್ಚಿನವರು ಈ ರಜೆಯ ಸಂದರ್ಭದಲ್ಲಿ ಪ್ರವಾಸ ಹೋಗುತ್ತಾರೆ. ಈ ಹಿಂದಿನ ರೀತಿ ಆದರೆ ಸಮೀಕ್ಷೆ ಮತ್ತೊಂದು ಮಜಲಿಗೆ ಹೋಗಬಹುದು. ಹೀಗಾಗಿ ಸಮೀಕ್ಷೆಯನ್ನು 45 ದಿನಗಳ ಕಾಲ ಮುಂದೂಡಬೇಕು. 60 ದಿನಗಳ ಕಾಲ ಸಮೀಕ್ಷೆ ನಡೆಸಬೇಕು. ಪ್ರಜ್ಞಾವಂತ ಸರ್ಕಾರ ಇದನ್ನು ಪರಿಗಣಿಸಿ ಸಮೀಕ್ಷೆ ಮುಂದೂಡಬೇಕೆಂದರು.


### ಉಪಜಾತಿ ಪರಿಶೀಲಿಸಿ: ರಾಜ್ಯಪಾಲ

ಕ್ರೈಸ್ತ ಧರ್ಮಕ್ಕೆ ಹಿಂದೂ ಉಪಜಾತಿಗಳ ಸೇರ್ಪಡೆ ಕುರಿತು ತೀವ್ರ ವಿವಾದ ಸೃಷ್ಟಿಸಿದೆ. ಇದರ ಮಧ್ಯೆ ವಿವಾದ ಕುರಿತಂತೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಮಧ್ಯ ಪ್ರವೇಶಿಸಿ ಕ್ರೈಸ್ತ ಧರ್ಮಕ್ಕೆ ಹಿಂದೂ ಉಪಜಾತಿಗಳ ಸೇರ್ಪಡೆ ಕುರಿತಂತೆ ಮರುಪರಿಶೀಲಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ. ಕ್ರೈಸ್ತ ಬ್ರಾಹ್ಮಣ, ಒಕ್ಕಲಿಗ, ಕುರುಬ ಮೂಲಕ ಕ್ರೈಸ್ತ ಧರ್ಮಕ್ಕೆ ಹಿಂದೂ ಉಪಜಾತಿ ಸೇರ್ಪಡೆ ಮಾಡಲಾಗುತ್ತಿದೆ ಎಂದು ಆರೋಪಿಸಿ ರಾಜ್ಯ ಬಿಜೆಪಿ ನಾಯಕರ ನಿಯೋಗವು ರಾಜ್ಯಪಾಲರಿಗೆ ದೂರು ನೀಡಿತ್ತು. ಈ ಹಿನ್ನಲೆ ಸಿದ್ದರಾಮಯ್ಯಗೆ ಪತ್ರ ಬರೆದು ಕ್ರೈಸ್ತ ಧರ್ಮಕ್ಕೆ ಹಿಂದೂ ಉಪಜಾತಿಗಳ ಸೇರ್ಪಡೆ ಕುರಿತಂತೆ ಮರುಪರಿಶೀಲಿಸುವಂತೆ ಸೂಚಿಸಿದ್ದಾರೆ.

# ಧರ್ಮ ಗೊಂದಲ ನಡುವೆ ಹಾಸನಕ್ಕಿಂದು ಬಸವ ಸಂಸ್ಕೃತಿ ಅಭಿಯಾನ

## ಹಾಸನಾಂಬ ಕಲಾಕ್ಷೇತ್ರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ | ವಿದ್ಯಾರ್ಥಿಗಳೊಂದಿಗೆ ಸಂವಾದ

• ಪ್ರಜೋದಯ ವರದಿ



**ಹಾಸನ:** ವಿಶ್ವಗುರು ಬಸವಣ್ಣ ಅವರನ್ನು ಸಾಂಸ್ಕೃತಿಕ ನಾಯಕನೆಂದು ರಾಜ್ಯ ಸರ್ಕಾರ ಘೋಷಿಸಿ ಒಂದು ವರ್ಷ ಪೂರೈಸಿದ ಸವಿ ನೆನಪಿಗಾಗಿ ರಾಜ್ಯಾದ್ಯಂತ ಹಮ್ಮಿಕೊಂಡಿರುವ ಬಸವ ಸಂಸ್ಕೃತಿ ಅಭಿಯಾನ ರಥಯಾತ್ರೆ ಸೆ.21ರ ಭಾನುವಾರ ಹಾಸನಕ್ಕೆ ಆಗಮಿಸಲಿದೆ.

ಬಸವಣ್ಣ ಅವರ ವಿಚಾರಧಾರೆಗಳನ್ನು ನಾಡಿನ ಜನರಿಗೆ ತಿಳಿಸುವ ಉದ್ದೇಶದಿಂದ ಅಭಿಯಾನ ಹಮ್ಮಿಕೊಳ್ಳಲಾಗಿದೆಯೆಂದು ಆಯೋಜಕರು ಆರಂಭದಲ್ಲಿ ಹೇಳಿದ್ದರಾದರೂ ವಿವಿಧ ಜಿಲ್ಲೆಯ ವೇದಿಕೆಗಳಲ್ಲಿ ಪ್ರತ್ಯೇಕ ಲಿಂಗಾಯತ ಧರ್ಮದ ವಿಚಾರಗಳ ಮುನ್ನೆಲೆಗೆ ಬಂದು ಅಭಿಯಾನದ ಆಶಯ ಏನೆಂಬುದು ಗೊಂದಲಕ್ಕೆ ಎಡೆಮಾಡಿಕೊಟ್ಟಿದೆ. ಪಂಚಮಸಾಲಿಗಳು, ವಿರಕ್ತರು ಅಭಿ ಯಾನದ ಕುರಿತಾಗಿ ತಮ್ಮದೇಯಾದ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ.

ಸೆ.22 ರಿಂದ ನಡೆಯುತ್ತಿರುವ ಜಾತಿ ಗಣತಿಯಲ್ಲಿ ಲಿಂಗಾಯತ ಧರ್ಮ ಎಂದೇ ನಮೂದಿಸ ಬೇಕೆಂದು ಮಠಾಧೀಶರೇ ಕರೆ ಕೊಡುತ್ತಿರುವುದು ಸಮಾಜದ ಜನರಲ್ಲಿ ಗೊಂದಲ ಮೂಡಿಸಿದೆ. ಹಾಸನದಲ್ಲಿ ನಡೆಯುತ್ತಿರುವ ಕಾರ್ಯಕ್ರಮಕ್ಕೆ ಜಿಲ್ಲೆಯ ಕೆಲವು ಮಠಾಧೀಶರು ಸಹಮತ ವ್ಯಕ್ತಪಡಿಸಿದ್ದರೆ ಮತ್ತೆ ಕೆಲವರು ತಮ್ಮದೇಯಾದ ವಾದ ಮಂಡನೆ ಮೂಲಕ ಭಾನುವಾರದ ಕಾರ್ಯಕ್ರಮದಿಂದ ದೂರವುಳಿಯುವ ಸಾಧ್ಯತೆಯಿದೆ. ಚಿಕ್ಕಮಗಳೂರಿನಿಂದ ಬೆಳಿಗ್ಗೆ 10 ಗಂಟೆಗೆ ಹಾಸನದ ತಣ್ಣೀರುಹಳ್ಳ ಮಠಕ್ಕೆ ರಥ ಆಗಮಿಸಲಿದೆ. ಬೆಳಿಗ್ಗೆ 11 ಗಂಟೆಗೆ ಹಾಸನಾಂಬ ಕಲಾಕ್ಷೇತ್ರದಲ್ಲಿ ವಿದ್ಯಾರ್ಥಿಗಳ ಜೊತೆ ಸಂವಾದ ನಡೆಯಲಿದೆ. ಮಧ್ಯಾಹ್ನ 3 ಗಂಟೆಗೆ ತಣ್ಣೀರು ಹಳ್ಳ ಮಠದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆ ನಡೆಯಲಿದೆ. ಸಂಸದ ಶ್ರೇಯಸ್ ಪಟೇಲ್, ಶಾಸಕ ಹೆಚ್.ಪಿ. ಸ್ವರೂಪ್, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಸೇರಿ ಇತರರು ಬಸವ ರಥಯಾತ್ರೆಗೆ ಚಾಲನೆ ನೀಡು ವರು. ಸಂಜೆ 5 ಗಂಟೆಗೆ ಹಾಸನಾಂಬ ಕಲಾ ಕ್ಷೇತ್ರ ದಲ್ಲಿ ವೇದಿಕೆ ಕಾರ್ಯಕ್ರಮ, ರಾತ್ರಿ 8 ಗಂಟೆಗೆ ಜಂಗಮದಡಿಗೆ ಎಂಬ ನಾಟಕ ಪ್ರದರ್ಶನ ಕಾಣಲಿದೆ.

**ವೀರಶೈವರೋ-ಲಿಂಗಾಯತರೋ ಗೊಂದಲ:** ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಕಡ್ಡಾಯವಾಗಿ ಲಿಂಗಾಯತ ಧರ್ಮ ಎಂದೇ ಬರೆಸಲು ಒಂದು ಗುಂಪು ಕರೆ ನೀಡಿದ್ದರೆ ಮತ್ತೊಂದು ಗುಂಪು ಧರ್ಮದ ಕಾಲಂನಲ್ಲಿ ಹಿಂದೂ, ಜಾತಿ ಯಾಗಿ ವೀರಶೈವ ಅಥವಾ ಲಿಂಗಾಯತ ಬರೆಸಲು ಸೂಚಿಸಿದೆ. ಈ ಬಗ್ಗೆ ಸಾರ್ವಜನಿಕರಲ್ಲಿ ಗೊಂದಲ ಮುಂದು ವರಿದಿದೆ. ಆಲೂರು ತಾಲ್ಲೂಕಿನ ಕಾರ್ಜುವಳ್ಳಿ ಮಠದ ಶ್ರೀ ಸದಾಶಿವ ಸ್ವಾಮೀಜಿ, ನುಗ್ಗೇಹಳ್ಳಿ ಪುರ ವರ್ಗದ ಶ್ರೀ ಮಹೇ ಶ್ವರ ಸ್ವಾಮೀಜಿ ಅವರು ಲಿಂಗಾಯತರು ಹಿಂದೂ ಧರ್ಮದ ಭಾಗವಾಗಿದ್ದು ಲಿಂಗಾಯತ ಪ್ರತ್ಯೇಕ ಧರ್ಮ ಎಂಬ ಹೇಳಿಕೆಯೇ ತಪ್ಪು ಎಂದು ಪ್ರತಿಪಾದಿಸಿದ್ದಾರೆ. ಬಸವ ಸಂಸ್ಕೃತಿ ಅಭಿಯಾನದ ಮೂಲ ಉದ್ದೇಶ ವಿಶ್ವಗುರುವಿನ ತತ್ವಾದರ್ಶಗಳನ್ನು ಜನರಿಗೆ ತಿಳಿಸುವುದಾಗಿದೆ. ಅದನ್ನು ಬಿಟ್ಟು ಬೇರೆ ಎಲ್ಲಾ ಕೆಲಸ ಮಾಡ ಲಾಗುತ್ತಿದೆಂದು ಅವರು ಅಸಮಾಧಾನ ಹೊರಹಾಕಿದ್ದಾರೆ. ಜಿಲ್ಲೆಯ 22 ಮಠಾಧೀಶರನ್ನು ಅಭಿಯಾನಕ್ಕೆ ಆಹ್ವಾನಿಸಿದ್ದು ಯಾರ್ಯಾರು ಭಾಗವಹಿಸುತ್ತಾರೆಂಬುದು ಕುತೂಹಲಕ್ಕೆ ಕಾರಣವಾಗಿದೆ.

**ಜಂಗಮರ ಅಸಮಾಧಾನ:** ಕಲಬುರಗಿಯಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ಸಾಣೇನಹಳ್ಳಿ ಮಠದ ಡಾ. ಪಂಡಿತಾರಾಧ್ಯ ಸ್ವಾಮೀಜಿ ಜಂಗಮ ಶ್ರೀಗಳ ಕುರಿತು ಹಗುರವಾಗಿ ಮಾತನಾಡಿದ್ದಕ್ಕೆ ಜಂಗಮರು ವಿರೋಧ ವ್ಯಕ್ತಪಡಿಸಿದ್ದಾರೆ. ಜಿಲ್ಲೆಯಲ್ಲಿ ಜಂಗಮ ಪಂಗಡಕ್ಕೆ ಸೇರಿದ ಜನಸಂಖ್ಯೆ ಹೆಚ್ಚಿದ್ದು ಅವರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಸಾಧ್ಯತೆ ಕಡಿಮೆಯಿದೆ.

# ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷೆ ಚೈತ್ರಾ ನಾಯಕರಹಳ್ಳಿಗೆ ಅಭಿನಂದನೆ

• ಪ್ರಜೋದಯ ವರದಿ

**ಹಾಸನ:** ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಚೈತ್ರಾ ನಾಯಕರಹಳ್ಳಿ ಅವರಿಗೆ ಶನಿವಾರ ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗಿತ್ತು.

ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಜಿಲ್ಲಾ ವಚನ ಸಾಹಿತ್ಯ ಪರಿಷತ್, ಕನ್ನಡ ಸಾಹಿತ್ಯ ಬಳಗ, ಕನ್ನಡ ಸಾಹಿತ್ಯ ಪರಿಷತ್ ಮಾಜಿ ಗೌರವಾಧ್ಯಕ್ಷ ರವಿ ನಾಕಲಗೂಡು ಆತ್ಮೀಯರ ಬಳಗ ಹಾಗು ವಿವಿಧ ಸಂಘ ಸಂಸ್ಥೆಗಳ ವತಿಯಿಂದ ಸಮಾರಂಭ ನಡೆಯಿತು. ಚೈತ್ರಾ ನಾಯಕರಹಳ್ಳಿ ಅವರ ಹಿತೈಷಿಗಳು, ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಶುಭಾಶಯ ಕೋರಿದರು.

ಕಾರ್ಯಕ್ರಮ ಉದ್ಘಾಟಿಸಿದ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಕೆ.ಎನ್. ಬಲರಾಮ್ ಅವರು ಮಾತನಾಡಿ, ಉತ್ತಮ ಸಂಘಟಕಿ, ಮಕ್ಕಳ ಬಗ್ಗೆ ವಿಶೇಷ ಕಾಳಜಿ ಹೊಂದಿ ರುವ ಚೈತ್ರಾ ನಾಯಕರಹಳ್ಳಿ ಅವರು ಸಂಘದ ಬೆಳವಣಿಗೆಗೆ ಶಕ್ತಿ ಮೀರಿ ಶ್ರಮಿಸಲಿ. ಶಿಕ್ಷಕರ ಆಶೋತ್ತರಗಳಿಗೆ ಸ್ಪಂದಿಸುವ ಜೊತೆಗೆ ಮಕ್ಕಳ ಕಲಿಕೆಗೆ ಆದ್ಯತೆ ನೀಡಲಿಯೆಂದು ಹಾರೈಸಿದರು.



ಚೈತ್ರಾ ಅವರ ತಂದೆಯು ಶಿಕ್ಷಕರಾಗಿದ್ದರು. ಸಂಘಟನೆ, ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವ ಚಾತುರ್ಯ ಹಾಗು ಹುದ್ದೆ ನಿಭಾಯಿಸುವ ಸಾಮರ್ಥ್ಯ ಚೈತ್ರಾ ಅವರಿಗಿದೆ. ಉತ್ತಮ ಬೋಧನೆ ಮೂಲಕ ಮಕ್ಕಳ ಪ್ರೀತಿ ಗಳಿಸಿದ್ದಾರೆ. ಅವರು ಶಿಕ್ಷಕರು- ಕಚೇರಿ ನಡುವೆ ಸೌಹಾರ್ದತೆಯಿಂದ ಇರುತ್ತಾರೆ. ಸಂಘದ ಬೆಳವಣಿಗೆ ದೃಷ್ಟಿಯಿಂದ ನಾವು ಅವರಿಗೆ ಸಹಕಾರ ನೀಡುತ್ತೇವೆಂದರು.

ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿ ಹೆಚ್.ಬಿ. ಮದನಗೌಡ ಅವರು ಮಾತನಾಡಿ, ವೃತ್ತಿಯಲ್ಲಿ ಶಿಕ್ಷಕರಾಗಿ ವಚನ ಸಾಹಿತ್ಯ ಪರಿಷತ್ ಅನ್ನು ಬೆಳೆಸಿದ್ದು ಚೈತ್ರಾ ಮಂಜೇಗೌಡರ ಹೆಗ್ಗಳಿಕೆ. ಈ ಹುದ್ದೆಯಲ್ಲಿ ಅವರು ಉತ್ತುಂಗಕ್ಕೆ ಏರಲಿ. ಶಿಕ್ಷಕರ ಸಮಸ್ಯೆಗೆ ಸ್ಪಂದಿಸಲಿ. ಅವರ ಬದುಕು ಉಜ್ವಲವಾಗಲಿ ಎಂದರು.

ಆಶಯ ನುಡಿಗಳನ್ನಾಡಿದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಗೌರವಾಧ್ಯಕ್ಷ ರವಿ ನಾಕಲಗೂಡು, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದ ಮೊದಲ ಮಹಿಳೆ ಚೈತ್ರಾ ನಾಯಕರಹಳ್ಳಿ. ಸಂಘಟನಾತ್ಮಕವಾಗಿ ಪ್ರಬಲವಾಗಿರುವ ಅವರು ಶಿಕ್ಷಕರ ದು:ಖ ದುಮ್ಮಾನಗಳಿಗೆ ಕಿವಿಯಾಗಿದ್ದಾರೆ. ಶಿಕ್ಷಕರ ಸಂಘದ ಎಲ್ಲಾ ಸದಸ್ಯರ ಪ್ರೀತಿಯಿಂದ ಹುದ್ದೆ ಅಲಂಕರಿಸಿದ್ದಾರೆಂದರು.

ರಾಜ್ಯ ಪ್ರಾಥಮಿಕ ಶಿಕ್ಷಕರ ಸಂಘದ ಗೌರವಾಧ್ಯಕ್ಷ ಅಣ್ಣಪ್ಪ ಅವರು ಮಾತನಾಡಿ, ಈ ಹುದ್ದೆ ಪಡೆಯಲು ಚೈತ್ರಾ ಸಾಕಷ್ಟು ಹೋರಾಟ ಮಾಡಿದ್ದಾರೆ. ಎದುರಾದ ಸಮಸ್ಯೆಗಳನ್ನು ದಿಟ್ಟವಾಗಿ ಎದುರಿಸಿದ್ದಾರೆ. ಅದನ್ನು ಹಿಮ್ಮೆಟ್ಟಿಸುವ ಧೈರ್ಯವನ್ನು ಅವರು ತೋರಿದ್ದಾರೆಂದರು.

ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಿ.ಕೃಷ್ಣೇಗೌಡ, ಜಿಲ್ಲಾ ಮತ್ತು ಪ್ರಾದೇಶಿಕ ಸಣ್ಣ ಪತ್ರಿಕೆಗಳ ಒಕ್ಕೂಟ ರಾಜ್ಯಾಧ್ಯಕ್ಷ ಜೆ.ಆರ್.ಕೆಂಚೇಗೌಡ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಎಸ್. ಬಸವರಾಜು ಮಾತನಾಡಿದರು.

ಶಿಕ್ಷಕರ ಸಂಘದ ಪದಾಧಿಕಾರಿಗಳಿಗೆ ಅಭಿನಂದನಾ ಪತ್ರ ವಿತರಿಸಲಾಯಿತು. ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದವರಿಗೆ ಸನ್ಮಾನಿಸ ಲಾಯಿತು.

ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ರಂಗನಾಥ್, ಜನಪ್ರಿಯ ಆಸ್ಪತ್ರೆ ಮುಖ್ಯಸ್ಥ ಡಾ|| ಅಬ್ದುಲ್ ಬಷೀರ್, ಭಾರತ ಸೇವಾದಳ ಜಿಲ್ಲಾ ಸಂಘಟಕಿ ವಿ.ಎಸ್. ರಾಣಿ, ಜಯಲಕ್ಷ್ಮಿ, ರಾಜಣ್ಣ, ರಾಜೇಂದ್ರ, ದ್ಯಾವೇಗೌಡ, ಡಾ||ದಿನೇಶ್, ಕಟ್ಟಾಯ ಶಿವಕುಮಾರ್ ಮತ್ತಿತರರಿದ್ದರು.

# ಭವ್ಯ ಮೆರವಣಿಗೆಯೊಂದಿಗೆ ಪೆಂಡಾಲ್ ಗಣಪತಿ ವಿಸರ್ಜನೆ

## ಗಣೇಶೋತ್ಸವ ಮೆರುಗು ಹೆಚ್ಚಿಸಿದ ಜಾನಪದ ಕಲಾ ಪ್ರದರ್ಶನ | ದೇವಿಗೆರೆಯಲ್ಲಿ ವಿಜೃಂಭಣೆಯ ತೆಪ್ಪೋತ್ಸವ

• ಪ್ರಜೋದಯ ವರದಿ

**ಹಾಸನ:** ನಗರದ ಗಣಪತಿ ಪೆಂಡಾಲ್‌ನಲ್ಲಿ ಪ್ರತಿಷ್ಠಾಪಿಸಿದ್ದ ಗಣೇಶ ಮೂರ್ತಿಯನ್ನು ಶನಿವಾರ ಹಲವು ಸಾಂಸ್ಕೃತಿಕ ಕಲಾತಂಡಗಳ ಮೆರಗಿನೊಂದಿಗೆ ಪ್ರಮುಖ ರಸ್ತೆಗಳಲ್ಲಿ ವಿಜೃಂಭ ಣೆಯ ಮೆರವಣಿಗೆ ನಡೆಸಿ ವಿಸರ್ಜಿಸಲಾಯಿತು.

ಬೆಳಿಗ್ಗೆ 11 ಗಂಟೆ ಸುಮಾರಿಗೆ ನಗರದ ಗಣಪತಿ ಪೆಂಡಾಲ್ ಮುಂಭಾಗದಿಂದ ಆರಂಭವಾದ 71ನೇ ವರ್ಷದ ವಿಸರ್ಜನಾ ಮಹೋತ್ಸವ ಮೆರವಣಿಗೆ ಸಂಸದ ಶ್ರೇಯಸ್ ಪಟೇಲ್, ಶಾಸಕ ಹೆಚ್.ಪಿ.ಸ್ವರೂಪ್, ಮೇಯರ್ ಗಿರೀಶ್ ಚನ್ನವೀರಪ್ಪ, ಗಣಪತಿ ಸೇವಾ ಸಮಿತಿ ಅಧ್ಯಕ್ಷ ಡಾ.ಹೆಚ್.ನಾಗರಾಜು ಮತ್ತಿತರರು ಚಾಲನೆ ನೀಡಿದರು. ಅದಕ್ಕೂ ಮೊದಲು ಗಣೇಶ ಮೂರ್ತಿಗೆ ವಿಶೇಷ ಪೂಜೆ, ಮಹಾಮಂಗಳಾರತಿ ನೆರವೇರಿಸಲಾಯಿತು.

ವಿಶೇಷವಾಗಿ ಹೂವಿನ ಮಂಟಪದಿಂದ ಅಲಂಕಾರ ಮಾಡಿದ್ದ ರಥದಲ್ಲಿ ಗೌರಿ-ಗಣಪತಿ ಮೂರ್ತಿ ಜೊತೆ ಶಿವ, ನಂದಿ, ಶ್ರೀರಾಮ, ಹನುಮಂತನ ಪ್ರತಿಮೆಗಳು ಗಮನಸೆಳೆದವು. ಮೆರವಣಿಗೆಯಲ್ಲಿ ವೀರಗಾಸೆ, ನಂದಿಧ್ವಜ ಕುಣಿತ, ಡೊಳ್ಳು ಕುಣಿತ, ಚಮನ ಕುಣಿತ, ಬ್ಯಾಂಡ್ ಸೆಟ್, ಕೀಲು ಕುದುರೆ, ಬೆದರು ಬೊಂಬೆ ಪ್ರದರ್ಶನ, ಹುಲಿವೇಷ, ಕುರುಬನವೇಷ, ಉದ್ದನೆಯ ಮನುಷ್ಯ, ಮಹಿಳೆಯ ರಿಂದ ಡೊಳ್ಳು ಕುಣಿತ, ಕೊಡಗಿನ ನೃತ್ಯ, ಬೆಂಕಿಯಲ್ಲಿ ಸಾಹಸ ಸೇರಿ 30 ವಿವಿಧ ಸಾಂಸ್ಕೃತಿ ಮತ್ತು ಜಾನಪದ ಕಲಾ ತಂಡಗಳು ಭಾಗವಹಿಸಿ ಮೆರವಣಿಗೆಗೆ ಮೆರಗು ನೀಡುವ ಮೂಲಕ ಸಾರ್ವಜನಿಕರ ಗಮನ ಸೆಳೆದವು. ಸಾರ್ವಜನಿಕರು, ಯುವಕ- ಯುವತಿ ಯರು ಮೆರವಣಿಗೆ ಉದ್ದಕ್ಕೂ ಕುಣಿದು ಕುಪ್ಪಳಿಸಿದರು. » 4ನೇ ಪುಟದಲ್ಲಿ



### ಪೊಲೀಸ್ ಬಂದೋಬಸ್ತ್

ಉತ್ಸವದ ವೇಳೆ ಯಾವುದೇ ಅಹಿತಕರ ಘಟನೆ ಸಂಭವಿಸಿದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು. ಭದ್ರತೆಗಾಗಿ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ತಮ್ಮಯ್ಯ, ವೆಂಕಟೇಶ್ ರೆಡ್ಡಿ, ಡಿವೈಎಸ್‌ಪಿ ಮುರುಳಿಧರ್ ನೇತೃತ್ವದಲ್ಲಿ 300ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗಿತ್ತು. ಮೆರವಣಿಗೆ ಗಣಪತಿ ಪೆಂಡಾಲ್‌ನಿಂದ ಹೊರಟು ಶಿವನಂಜಪ್ಪ ವೃತ್ತ, ಗಾಂಧಿ ಬಜಾರ್, ಹಾಸನಾಂಬ ವೃತ್ತ, ಸಂತೆಪೇಟೆ, ಹೊಸಲೈನ್ ರಸ್ತೆ, ಅರಳೇಪೇಟೆ ರಸ್ತೆ, ಸಾಲಗಾಮೆ ರಸ್ತೆ, ಪಾರ್ಕ್ ರಸ್ತೆ, ಸ್ಲೇಟರ್ಸ್ ವೃತ್ತ, ದೊಡ್ಡಿ ರೋಡ್, ಮಹಾವೀರ ವೃತ್ತ ಸೇರಿ ಪ್ರಮುಖ ರಸ್ತೆಗಳಲ್ಲಿ ಸಾಗಿತು. ನಂತರ ನಗರದ ದೇವಿಗೆರೆಯಲ್ಲಿ ತೆಪ್ಪೋತ್ಸವ ನಡೆಸಿ ರಾತ್ರಿ 8 ಗಂಟೆ ಸುಮಾರಿಗೆ ಗೌರಿ-ಗಣೇಶ ಮೂರ್ತಿಯನ್ನು ವಿಸರ್ಜನೆ ಮಾಡಲಾಯಿತು.

### ನಿವಾಸಿಗಳಿಂದ ಅನ್ನ ಸಂತರ್ಪಣೆ

ಗಣಪತಿ ವಿಸರ್ಜನೆ ಮೆರವಣಿಗೆ ಹಿನ್ನಲೆ ನಗರದ ಅರಳೇಪೇಟೆ ರಸ್ತೆ ನಿವಾಸಿಗಳು ಪ್ರಸಾದ ರೂಪದಲ್ಲಿ ಸಾವಿರಾರು ಜನರಿಗೆ ಅನ್ನದಾನ ಮಾಡಿದರು. 2017 ರಿಂದ ನಿರಂತರವಾಗಿ ನಗರದ ಸ್ಥಳೀಯ ನಿವಾಸಿಗಳು ಸೇರಿ ಅನ್ನಸಂತರ್ಪಣೆ ಏರ್ಪಡಿಸುತ್ತಿದ್ದಾರೆ. ಬಸವೇಶ್ವರ ಕಲ್ಯಾಣ ಮಂಟಪ ಬಳಿ, ಸಹ್ಯಾದ್ರಿ ವೃತದಲ್ಲಿ ಸೇರಿ ಹಲವು ಕಡೆ ಅನ್ನ ಸಂತರ್ಪಣೆ ನಡೆಯಿತು.



# ಜ್ಞಾನದ ಹಸಿವು ನೀಗಿಸಿದ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ



• ಪ್ರಜೋದಯ ವರದಿ

**ಸಕಲೇಶಪುರ:** ಮಠ ಕಟ್ಟುವ ಮೊದಲು ಶಾಲೆ ಕಟ್ಟಿ ಜ್ಞಾನದ ಹಸಿವು ನೀಗಿಸಿದವರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಜಿಯೆಂದು ಶಿವಗಂಗೆಯ ಶ್ರೀ ಮೇಲಣಗವಿ ವೀರಸಿಂಹಾಸನ ಮಠದ ಡಾ.ಶ್ರೀ ಮಲಯ ಶಾಂತಮುನಿ ಸ್ವಾಮೀಜಿ ಅವರು ಹೇಳಿದರು.

ಪಟ್ಟಣದ ಗುರುವೇಗೌಡ ಕಲ್ಯಾಣ ಮಂಟಪದಲ್ಲಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಮಲೆ ನಾಡು ವೀರಶೈವ ಸಮಾಜ ಹಾಗು ಅಂಗಸಂಸ್ಥೆಗಳ ನೇತೃತ್ವದಲ್ಲಿ ನಡೆದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಶತೋತ್ತರ ದಶ ಮಾನೋತ್ಸವದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಶತಮಾನದ ಹಿಂದೆಯೇ ಶಿಕ್ಷಣದ ಅನಿವಾರ್ಯತೆ ಅರಿತಿದ್ದ ಶ್ರೀಗಳು ಜಾತಿ, ಮತ, ಪಂಥ ತಾರತಮ್ಯವಿಲ್ಲದೆ ವಿದ್ಯೆ ನೀಡುವ ಮೂಲಕ ಕೋಟ್ಯಾಂತರ ಜನರ ಬಾಳಿಗೆ ಬೆಳಕಾದರು. ಅನಕ್ಷರತೆಯನ್ನು ಮೆಟ್ಟಿನಿಲ್ಲುವ ನಿಟ್ಟಿನಲ್ಲಿ ತಮ್ಮ ಬದುಕು ಸವೆಸಿದ ಶ್ರೀಗಳು ಅನವಶ್ಯಕವಾಗಿ ಎಂದು ಮಾತನಾಡಿದವರಲ್ಲ, ಮಾತನಾಡುವ ಅನಿವಾರ್ಯತೆ ಸೃಷ್ಟಿಯಾದರೆ ಮಾತ್ರ ಮಾತನಾಡಬೇಕು. ಅದರಿಂದ ಗೌರವ ಹೆಚ್ಚಲಿದೆ. ಮೌನಕ್ಕೆ ಇರುವ ಬೆಲೆ ಮತ್ತೊಂದಕ್ಕೆ ಇಲ್ಲ, ಮಾಡುವ ಕೆಲಸದ ಬಗ್ಗೆ ಏಕಾಗ್ರತೆ ಹೊಂದಿದ್ದವರು ಮಾತ್ರ ಹೆಚ್ಚಿನ ಸಾಧನೆ ಮಾಡಲು ಸಾಧ್ಯ. ಮನಸ್ಸು ನಿಗ್ರಹಿಸುವ ಶಕ್ತಿ ಬೆಳೆಸಿಕೊಳ್ಳುವುದು ಅಗತ್ಯವೆಂದರು.

ನಮಗೆ ಗೌರವ ದಕ್ಕುವುದು ನಾವು ಮಾಡುವ ಸಾಧನೆಯಿಂದ ಹೊರತು ಹಾಕುವ ಬಟ್ಟೆ ಯಿಂದಲ್ಲ. ಅನ್ಯರಿಗೆ ಸಹಾಯ ಮಾಡುವುದರಿಂದ ಮಾತ್ರ ಶತಮಾನಗಳ ಕಾಲ ತಮ್ಮ ಹೆಸರು ಚಿರಸ್ಥಾಯಿಯಾಗಲಿದೆ. ಮೂರು ವರ್ಷದ ವಿದ್ಯೆ ನೂರು ವರ್ಷದ ವರೆಗೆ ಬಾಳಿಕೆ ಬರಲಿದೆ. ಆದ್ದರಿಂದ ಶಿಕ್ಷಣದ ಸಮಯದಲ್ಲಿ ಏಕಾಗ್ರತೆಯಿಂದ ವಿದ್ಯೆ ಕಲಿಯಬೇಕು. ವಿದ್ಯಾವಂತರನ್ನು ಹಣ ಹುಡುಕಿಕೊಂಡು ಬರಲಿದೆ. ಕಷ್ಟಕಾಲದಲ್ಲಿ ಸಹಾಯಕ್ಕೆ ಬರುವುದು ವಿದ್ಯೆ ಮಾತ್ರವೆಂದರು.

ಶಾಸಕ ಸಿಮೆಂಟ್ ಮಂಜು ಅವರು ಮಾತನಾಡಿ, ಮಾತು ಸಾಧನೆಯಾಗಬಾರದು-ಸಾಧನೆ ಮಾತಾಗಬೇಕು. ಈ ವಿಚಾರದಲ್ಲಿ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅನುಕರಣೆಯ. ವಿದ್ಯಾಭ್ಯಾಸದ ಪರಿಕಲ್ಪನೆ ಇಲ್ಲದ ವೇಳೆ ಅಕ್ಷರ ಕಲಿಸುವ ದೀಕ್ಷೆ ತೊಟ್ಟ ಶ್ರೀಗಳು ಪ್ರಪಂಚ ಇರುವವರೆಗೂ ಆದರ್ಶವಾಗಿರುತ್ತಾರೆ. ವೀರಶೈವ ಮಠಗಳು ಒಂದು ಸರ್ಕಾರ ಮಾಡಲಾಗದ ಕೆಲಸಗಳನ್ನು ಮಾಡುತ್ತಿವೆ. ವಿದ್ಯೆ ಎಲ್ಲಾ ಪದವಿಗಿಂತ ಮಿಗಿಲು. ವಿದ್ಯೆ ಒಂದಿದ್ದರೆ ಬಡತನ ಬರಲಾರದು ಎಂದರು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೆರವೇರಿಸಲಾಯಿತು. ಸಕಲೇಶ್ವರಸ್ವಾಮಿ ದೇವಸ್ಥಾನದಿಂದ ಸಭಾಭವನದವರೆಗೆ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಭಾವ ಚಿತ್ರ ಮೆರವಣಿಗೆ ನಡೆಸಲಾಯಿತು. ಅಧ್ಯಕ್ಷತೆಯನ್ನು ಮಲೆನಾಡು ವೀರಶೈವ ಸಮಾಜ ಅಧ್ಯಕ್ಷ ಮೂಗಲಿ ಧರ್ಮಣ್ಣ ವಹಿಸಿದ್ದರು.

ವೀರಶೈವ ಸಮಾಜದ ಮುಖಂಡರಾದ ಬಿ.ಡಿ.ಬಸವಣ್ಣ, ನಾರ್ವೆ ಶಿವಪ್ರಸಾದ್, ವಿದ್ಯಾಶಂಕರ್, ಯುವ ಘಟಕದ ಅಧ್ಯಕ್ಷ ಶಶಿಕುಮಾರ್, ಲೋಹಿತ್ ಕೌಡಳ್ಳಿ, ಜೆಎಸ್‌ಎಸ್ ಶಾಲೆಯ ಪ್ರಾಂಶುಪಾಲ ನಂಜುಡಪ್ಪ, ಸಂಯೋಜಕ ಆರ್. ಮಂಜುನಾಥ್ ಮುಂತಾದವರಿದ್ದರು.

# ರಸ್ತೆಯಲ್ಲಿ ಅಂಗಡಿ: ಸಮುದಾಯ ಸೇವೆಗೆ ಕೋರ್ಟ್ ಸೂಚನೆ

• ಪ್ರಜೋದಯ ವರದಿ

**ಸಕಲೇಶಪುರ:** ರಸ್ತೆಗೆ ಅಡ್ಡಲಾಗಿ ತರಕಾರಿ ಅಂಗಡಿ ಹಾಕಿಕೊಂಡು ಸಾರ್ವಜನಿಕರ ಓಡಾಟಕ್ಕೆ ಅಡ್ಡಿಯುಂಟು ಮಾಡಿದ್ದ ಪ್ರಕರಣವೊಂದರಲ್ಲಿ ಆರೋಪಿಗೆ ಸಮುದಾಯ ಸೇವೆ ಮಾಡುವಂತೆ ಹಿರಿಯ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ತೀರ್ಪು ಪ್ರಕಟಿಸಿದೆ.

ಬಾಳೆಗದ್ದೆಯ ಹಯಾತ್ ಖಾನ್ ಎಂಬುವವರು ಶಿಕ್ಷೆಗೆ ಗುರಿಯಾದವರು. ಸೆ.18 ರಂದು ಪಟ್ಟಣದ ಹಳೆಯ ಬಸ್ ನಿಲ್ದಾಣ ಸಮೀಪ ಸಾರ್ವಜನಿಕರು ಓಡಾಡುವ ರಸ್ತೆಯಲ್ಲಿ ಅಡ್ಡಾದಿಡ್ಡಿ ಅಂಗಡಿ ಹಾಕಿಕೊಂಡು ತರಕಾರಿ ಮತ್ತು ಸೊಪ್ಪು ಮಾರಾಟ ಮಾಡುತ್ತಿದ್ದರು. ಈ ಬಗ್ಗೆ ಸಾರ್ವ ಜನಿಕರಿಂದ ದೂರು ಬಂದ ಹಿನ್ನಲೆಯಲ್ಲಿ ನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿ ಆರೋಪಿಯನ್ನು ನ್ಯಾಯಾಲಯಕ್ಕೆ ಒಪ್ಪಿಸಿದ್ದರು.



ಸೆ.19 ರಂದು ಹಯಾತ್ ಖಾನ್‌ಗೆ ದಂಡದ ರೂಪವಾಗಿ 4 ದಿನಗಳ ಕಾಲ ಪ್ರತಿದಿನ 2 ಗಂಟೆ ನಗರ ಪೊಲೀಸ್ ಠಾಣೆಯಲ್ಲಿ ಕಸ ಗುಡಿಸುವುದು ಮತ್ತು ಸ್ವಚ್ಛತಾ ಕೆಲಸ ಮಾಡಬೇಕೆಂದು ಆದೇಶಿಸಿದೆ. ಸೇವೆ ಸಮರ್ಪಕವಾಗಿಲ್ಲವೆಂದು ಕಂಡುಬಂದರೆ ಮತ್ತೆ ನಾಲ್ಕು ದಿನಗಳವರೆಗೆ ವಿಸ್ತರಿಸಲಾಗುವುದೆಂದು ಆದೇಶದಲ್ಲಿ ತಿಳಿಸಲಾಗಿದೆ.

ಆದೇಶದ ಪ್ರತಿಯನ್ನು ಪೊಲೀಸ್ ಠಾಣಾಧಿಕಾರಿಗೆ ಕಳುಹಿಸಲಾಗಿದ್ದು, ಸೇವೆಯ ಪಾಲನೆ ಮತ್ತು ಮೇಲ್ವಿಚಾರಣೆ ಮಾಡಿ ವರದಿ ಸಲ್ಲಿಸಲು ಸೂಚಿಸಲಾಗಿದೆ.

# ಜಾಗತಿಕ ವಿಜ್ಞಾನಿಗಳ ಪಟ್ಟಿಯಲ್ಲಿ ಎಂಸಿಇ ಪ್ರಾಧ್ಯಾಪಕರು

• ಪ್ರಜೋದಯ ವರದಿ

**ಹಾಸನ:** ನಗರದ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದ ಸಂಶೋಧನಾ ವಿಭಾಗದ ಡೀನ್ ಡಾ. ಪಿ.ಮಧು ಹಾಗು ಅಸೋಸಿಯೇಟ್ ಡೀನ್ ಡಾ. ಕೆ.ಜಿ.ಯಶಸ್‌ಗೌಡ ಅವರು ವಿಶ್ವದ ವಿಜ್ಞಾನಿಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.





ನೆದರ್‌ಲ್ಯಾಂಡ್ ಮೂಲದ ಎಲ್ಸ್‌ವಿಯರ್ ಎಂಬ ಪ್ರಕಾಶನ ಸಂಸ್ಥೆಯ ಪತ್ರಿಕೆಯಲ್ಲಿ ವಿಶ್ವದ ಶೇ.2 ವಿಜ್ಞಾನಿಗಳ ಪಟ್ಟಿಯಲ್ಲಿ ಸ್ಥಾನ ಗಿಟ್ಟಿಸಿಕೊಂಡಿದ್ದಾರೆ. ಕಾಂಪೋಸಿಟ್ಸ್ ಕ್ಷೇತ್ರದಲ್ಲಿ ಸಂಶೋಧನೆ ನಡೆಸುತ್ತಿರುವ ಡಾ.ಪಿ.ಮಧು ಅವರ 110ಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳು ಅಂತರರಾಷ್ಟ್ರೀಯ ಮನ್ನಣೆ ಪಡೆದ ಸಂಶೋಧನಾ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ತಮ್ಮ ಸಂಶೋಧನಾ ಕ್ಷೇತ್ರಕ್ಕೆ ಸಂಬಂಧಿಸಿದ 4 ಪುಸ್ತಕ ರಚಿಸಿದ್ದಾರೆ. ಈ ಪಟ್ಟಿಯಲ್ಲಿ ಕಳೆದ ನಾಲ್ಕು ವರ್ಷಗಳಿಂದ ಸ್ಥಾನ ಪಡೆಯುತ್ತಿದ್ದಾರೆ. ಥೈಲ್ಯಾಂಡ್‌ನ ಕಿಂಗ್ ಮಾಂಗ್‌ಕುಟ್ ತಾಂತ್ರಿಕ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪದವಿ ಪಡೆದಿ ರುವ ಡಾ.ಕೆ.ಜಿ.ಯಶಸ್‌ಗೌಡ ಅವರು, ಪಾಲಿಮರ್ ಕಾಂಪೋಸಿಟ್ಸ್ ಕ್ಷೇತ್ರದಲ್ಲಿ ಸಂಶೋಧನೆ ನಡೆಸುತ್ತಿದ್ದಾರೆ. ಅವರ 35 ಸಂಶೋಧನಾ ಪ್ರಬಂಧಗಳು ಅಂತರರಾಷ್ಟ್ರೀಯ ಮನ್ನಣೆ ಪಡೆದ ಸಂಶೋಧನಾ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. 2 ಪುಸ್ತಕಗಳನ್ನು ಅವರು ಪ್ರಕಟಿಸಿದ್ದಾರೆ. ಕಳೆದ ಮೂರು ವರ್ಷಗಳಿಂದ ಈ ಪಟ್ಟಿಯಲ್ಲಿ ಸ್ಥಾನ ಭದ್ರವಾಗಿಸಿಕೊಂಡಿದ್ದಾರೆ.

|| ಶ್ರೀ ಚೆಲುವನಾರಾಯಣ ಸ್ವಾಮಿ ಪ್ರಸನ್ನ || ಶ್ರೀ ಮಳಲಿ ಲಕ್ಷ್ಮಿದೇವಿ ಕೃಪೆ ||

ಶ್ರೀ ಮಂಜುನಾಥಸ್ವಾಮಿ ಟೂರ್ ಆರ್ಗನೈಸರ್

ಇವರ ವತಿಯಿಂದ

2+2 AC Laxury Bus

8 ದಿನದ ಪ್ರವಾಸ

1 ಸೀಟಿಗೆ 20500/ರೂ

ಕಾಶಿ, ಅಯೋಧ್ಯೆ ಮತ್ತು ಶಿರಡಿ ಮಾರ್ಗ ಪ್ರವಾಸ

*ಕಾಶಿ ಜ್ಯೋತಿರ್ಲಿಂಗ *ಶನಿ ಸಿಂಗಾಪುರ *ಪಾರ್ಲಿ ವೈದ್ಯನಾಥೇಶ್ವರ (ಜ್ಯೋತಿರ್ಲಿಂಗ)

*ತ್ರಿವೇಣಿ ಸಂಗಮ *ಶಿರಡಿ

*ಅಯೋಧ್ಯೆ *ಉಜ್ಜಯಿನಿ (ಜ್ಯೋತಿರ್ಲಿಂಗ) *ಕಾಶಿ ಲೋಕಲ್

*ಕೂಡಲಸಂಗಮ

ಹೊರಡುವ ದಿನಾಂಕ : 02-10-2025 ನೇ ಗುರುವಾರ,

ಹೊರಡುವ ಸ್ಥಳ : ಹಾಸನ ಮಹಾನಗರ ಸಿಟಿ ಬಸ್ ನಿಲ್ದಾಣದಿಂದ

ಹಿಮವದ್ ಗೋಪಾಲಸ್ವಾಮಿ ಮಾರ್ಗ ಪ್ರವಾಸ

1 ದಿನದ ಪ್ರವಾಸ

* ಹಿಮವದ್ ಗೋಪಾಲಸ್ವಾಮಿ ಬೆಟ್ಟ
* ಶ್ರೀ ನಂಜುಂಡೇಶ್ವರ ಸ್ವಾಮಿ ದೇವಸ್ಥಾನ
* ಶ್ರೀ ವೇಣುಗೋಪಾಲ ಸ್ವಾಮಿ ದೇವಸ್ಥಾನ

ಕೆ.ಆರ್.ಎಸ್. ಡ್ಯಾಮ್ ಬ್ಯಾಕ್ ವಾಟರ್

1 ಸೀಟಿಗೆ 1200/ ರೂಗಳು ಮಾತ್ರ

ತಿಂಡಿ, ಊಟ ಸೇರಿದ KSRTC ಬಸ್ಸಿನ ಟೂರ್ ಪ್ಯಾಕೇಜ್ ಇದಾಗಿದೆ

ಹೊರಡುವ ದಿನಾಂಕ : 28-09-2025 ಭಾನುವಾರ, ಸಮಯ : ಬೆಳಗ್ಗೆ 8-00 ಗಂಟೆಗೆ

ಹೊರಡುವ ಸ್ಥಳ : ಹಾಸನ ಮಹಾನಗರ ಸಿಟಿ ಬಸ್ ನಿಲ್ದಾಣದಿಂದ

ಶಾಂತಿನಗರ ಸರ್ಕಲ್, ಬ್ಯೂಟೀಸ್ ಬ್ಯಾಂಗಲ್ ಸ್ಟೋರ್ ಎದುರು, ಅಣ್ಣಿಮನೆ ರಸ್ತೆ, ಹಾಸನ - 573 201.

ಸಂ:-: 9110409489, UPI No. 8892239888

# ಅರೆಗಿವುಡರ ಬಾಳು ಬೆಳಗಿದ ಡಿಜಿಟಲ್ ಶ್ರವಣ ಸಾಧನಗಳು

ಒಬ್ಬನ ಕಣ್ಣು ಪೂರ್ಣ ಕಾಣದಾದರೆ ಅವನು ಅಂಧನಾಗುತ್ತಾನೆ. ನಮ್ಮ ಸಮಾಜವು ಕುರುಡರನ್ನು ಸಹಾನುಭೂತಿಯಿಂದ ಕಾಣುವಷ್ಟು ಕಿವುಡರನ್ನು ಕಾಣುವುದಿಲ್ಲ. ಅರೆಗಿವುಡರನ್ನು ಹಾಸ್ಯ ಮಾಡುವ ನಾಟಕಗಳು ಹಾಗೂ ಚಲನಚಿತ್ರಗಳು ನಮ್ಮಲ್ಲಿ ಸಾಕಷ್ಟು ಇವೆ. ಅರೆಗಿವುಡರು ನಮ್ಮ ಸಮಾಜದ ನಡುವೇ ತಮ್ಮ ಅಪಹಾಸ್ಯವನ್ನು ನಗುನಗುತ್ತಲೇ ಸಹಿಸಿಕೊಂಡು ಬದುಕನ್ನು ನಡೆಸುವುದು ಅನಿವಾರ್ಯವಾಗಿರುತ್ತದೆ.

ನಾವು ನಮ್ಮ ಹೊರಜಗತ್ತಿನ ಅನುಭವವನ್ನು ಪ್ರಧಾನವಾಗಿ ಐದು ವಿಶೇಷ ಇಂದ್ರಿಯಗಳ ಮೂಲಕ ಪಡೆಯುತ್ತೇವೆ. ಕಣ್ಣು ದರ್ಶನೇಂದ್ರಿಯ, ದೃಶ್ಯ ರೂಪದ ಮಾಹಿತಿಯನ್ನು ಮಿದುಳಿಗೆ ದಾಖಲಿಸುತ್ತದೆ.

ಕಿವಿ ಶ್ರವಣೇಂದ್ರಿಯ, ಅದು ಆಲಿಸುವುದರ ಮೂಲಕ ಶಬ್ದ ಮಾಹಿತಿಯನ್ನು ಮಿದುಳಿಗೆ ರವಾನಿಸುತ್ತದೆ. ನಂತರದ್ದು ಚರ್ಮ, ಅದು ಸ್ಪರ್ಶೇಂದ್ರಿಯ. ನಾನಾ ರೀತಿಯ ಸ್ಪರ್ಶಜ್ಞಾನವನ್ನು ಒದಗಿಸುವುದರ ಜೊತೆಯಲ್ಲಿ, ನಮ್ಮ ಹಲವು ವಿಧದ ಕುಶಲ ಕಲಿಕೆಗೆ-ಅದು ಬರೆಯುವುದು ಆಗಿರಬಹುದು, ಚಿತ್ರ ಬಿಡಿಸುವುದಾಗಿರಬಹುದು, ಕ್ರಿಕೆಟ್‌ನಲ್ಲಿ ಬೌಲಿಂಗ್ ಮಾಡುವುದು ಆಗಿರಬಹುದು ಇಲ್ಲವೇ, ಶಸ್ತ್ರಕ್ರಿಯಾ ವೈದ್ಯ ಮಾಡುವ ಆಪರೇಶನ್ ಆಗಿರಬಹುದು.

ಈ ಎಲ್ಲಾ ಸ್ಪರ್ಶಾನುಭವಗಳನ್ನು ನಮ್ಮ ಚರ್ಮದಲ್ಲಿ ವಿಶೇಷ ಗ್ರಾಹಕಗಳು ಮಿದುಳಿಗೆ ಒದಗಿಸುತ್ತವೆ. ಹಾಗೆಯೇ ನಮ್ಮ ಘ್ರಾಣೇಂದ್ರಿಯ ಹಾಗೂ ರಸನೇಂದ್ರಿಯಗಳೂ ಸಹ ಕ್ರಮವಾಗಿ ವಾಸನೆ ಅಥವಾ ರುಚಿಯನ್ನು ಮಿದುಳಿಗೆ ತಿಳಿಸುತ್ತವೆ.

ಸಾಂಪ್ರದಾಯಿಕ ಜಗತ್ತಿನ ಈ ಐದೂ ಇಂದ್ರಿಯಗಳಲ್ಲದೆ, ಇನ್ನೂ ಹಲವು ಸೂಕ್ಷ್ಮಾತಿಸೂಕ್ಷ್ಮ ಇಂದ್ರಿಯಗಳು ನಮ್ಮ ಒಡಲಲ್ಲಿ ಇವೆ. ನಮ್ಮ ಯಶಸ್ವೀ ಬದುಕಿಗೆ ಈ ಐದೂ ಇಂದ್ರಿಯಗಳು ಕರಾರುವಾಕ್ಕಾಗಿ ಕೆಲಸವನ್ನು ಮಾಡಬೇಕು. ಆದರೆ ಯಾವುದಾದರೂ ಒಂದು ಕಾರಣದಿಂದ ಒಂದು ವಿಶೇಷ ಇಂದ್ರಿಯ ಅರೆಬರೆ ಕೆಲಸವನ್ನು ಮಾಡುವಂತಾದರೆ ಇಲ್ಲವೇ ಪೂರ್ಣ ಸ್ಥಗಿತವಾದರೆ ಅವರ ಬದುಕನ್ನು ಕಲ್ಪಿಸಿಕೊಳ್ಳಲು ದುಸ್ತರವಾಗುತ್ತದೆ.

ಒಬ್ಬನ ಕಣ್ಣು ಪೂರ್ಣ ಕಾಣದಾದರೆ ಅವನು ಅಂಧನಾಗುತ್ತಾನೆ. ನಮ್ಮ ಸಮಾಜವು ಕುರುಡರನ್ನು ಸಹಾನುಭೂತಿಯಿಂದ ಕಾಣುವಷ್ಟು ಕಿವುಡರನ್ನು ಕಾಣುವುದಿಲ್ಲ. ಅರೆಗಿವುಡರನ್ನು ಹಾಸ್ಯ ಮಾಡುವ ನಾಟಕಗಳು ಹಾಗೂ ಚಲನಚಿತ್ರಗಳು ನಮ್ಮಲ್ಲಿ ಸಾಕಷ್ಟು ಇವೆ. ಅರೆಗಿವುಡರು ನಮ್ಮ ಸಮಾಜದ ನಡುವೇ ತಮ್ಮ ಅಪಹಾಸ್ಯವನ್ನು ನಗುನಗುತ್ತಲೇ ಸಹಿಸಿಕೊಂಡು ಬದುಕನ್ನು ನಡೆಸುವುದು ಅನಿವಾರ್ಯವಾಗಿರುತ್ತದೆ. ಆದರೆ ಪೂರ್ಣ ಕಿವುಡರ ಪಾಡು ಹೇಳತೀರದು, ಏಕೆಂದರೆ ಸಹಜ ಸಾಮಾಜಿಕ ಬದುಕನ್ನು ನಡೆಸಬೇಕಾದರೆ ಸಂಭಾಷಣಾ ಸಾಮರ್ಥ್ಯವಿರಬೇಕಾಗುತ್ತದೆ.

ಮತ್ತೊಬ್ಬರು ಏನು ಹೇಳುತ್ತಿದ್ದಾರೆ ಎನ್ನುವುದನ್ನು ಕೇಳಲು ಆಗದಿದ್ದರೆ, ಅವರು ಏನು ತಾನೇ ಮಾತನಾಡಿಯಾರು? ಹಾಗಾಗಿ ಅವರು ಏಕಾಂಗಿಗಳಾಗಿ ಸಂಪೂರ್ಣ ಮೌನಕ್ಕೆ ಶರಣಾಗಬೇಕಾಗುತ್ತದೆ, ಸಮಾಜದಿಂದ ವಿಮುಖರಾಗಬೇಕಾಗುತ್ತದೆ. ಅರೆಗಿವುಡರ ಬದುಕನ್ನು ಸಾಧ್ಯವಾದಷ್ಟು ಸುಗಮಗೊಳಿಸುವ ಪ್ರಯತ್ನಗಳು ಇತಿಹಾಸದಲ್ಲಿ ಸಾಕಷ್ಟು ನಡೆದಿವೆ.

ಈ ದಿಶೆಯಲ್ಲಿ ಮೊದಲ ಪ್ರಯತ್ನವು 1600ರ ಯೂರೋಪಿನಲ್ಲಿ ನಡೆಯಿತು. ಅರೆಗಿವುಡರು ತಮ್ಮ ಅಂಗೈಯನ್ನು ಕಿವಿಯ ಹಾಲೆಯ ಹಿಂದೆ ಇಟ್ಟುಕೊಂಡು, ಮಾತನಾಡುವವರ ಧ್ವನಿಯನ್ನು ಸಂಗ್ರಹಿಸಲು ಅವರ ಕಡೆಗೆ ತುಸು ಬಾಗಿದರು. ಬಹುಶಃ ಅರೆಗಿವುಡುತನಕ್ಕೆ ನಮ್ಮ ಹಿರಿಯರು ರೂಪಿಸಿದ ಮೊದಲ ಪರಿಹಾರ. ನಂತರ ದನದ ಇಲ್ಲವೇ ಟಗರಿನ ಕೊಂಬನ್ನು ತೆಗೆದುಕೊಂಡರು.

ಅದರ ಚೂಪುತುದಿಯನ್ನು ಸವರಿ ನಯಗೊಳಿಸಿದರು. ಅದನ್ನು ತಮ್ಮ ಕಿವಿಯೊಳಗೆ ಇಟ್ಟುಕೊಂಡು, ಮಾತನಾಡುವವರ ಕಡೆಗೆ ಕೊಂಬಿನ ಮತ್ತೊಂದು ತುದಿಯನ್ನು ತಿರುಗಿಸಿದರು. ಮಾತನಾಡುವವರ ಶಬ್ದವನ್ನು ಸಂಗ್ರಹಿಸುವುದು ಸುಲಭವಾಯಿತು. ಕಿವಿಯು ಸ್ವಲ್ಪ ಚೆನ್ನಾಗಿ ಕೇಳಲಾರಂಭಿಸಿತು. ಕೂಡಲೇ ಶ್ರೀಮಂತ ಅರೆಗಿವುಡರು ಬೆಳ್ಳಿ ಇಲ್ಲವೇ ಚಿನ್ನದಿಂದ ಮಾಡಿದ ಆಲಿಕೆಯಾಕಾರದ ತುತ್ತೂರಿಗಳನ್ನು ಹೋಲುವ ಟ್ರಂಪೆಟ್ ಸಂಗ್ರಾಹಕ ಶ್ರವಣ ಸಾಧನಗಳನ್ನು ಬಳಸಲು ಆರಂಭಿಸಿದರು. ಈ ವೈಯುಕ್ತಿಕ ತುತ್ತೂರಿ ಶ್ರವಣ ಸಾಧನವು ಎರಡು ಸಮಸ್ಯೆಗಳನ್ನು ಒಳಗೊಂಡಿತ್ತು.

ಮೊದಲನೆಯದು ಇದು ಸುತ್ತಮುತ್ತಲಿನ ಎಲ್ಲ ಶಬ್ದಗಳನ್ನು ಸಂಗ್ರಹಿಸಿ ಕಿವಿಗೆ ಊಡುತ್ತಿದ್ದ ಕಾರಣ, ಎಲ್ಲ ಗದ್ದಲದ ನಡುವೆ ಎದುರು ಮಾತನಾಡುತ್ತಿದ್ದವರ ಮಾತುಗಳು ಸ್ಪಷ್ಟವಾಗಿ ಕೇಳುತ್ತಿರಲಿಲ್ಲ. ಎರಡನೆಯದು ಆಂ!... ಕೇಳಿಸಲಿಲ್ಲ. ಸ್ವಲ್ಪ ಜೋರಾಗಿ ಮಾತನಾಡಿ ಎಂದು ಪದೇ ಪದೇ ಬಿನ್ನವಿಸಿ ಕೊಳ್ಳಬೇಕಾಗಿತ್ತು. ಇದು ಬಹುಶಃ ಅರೆಗಿವುಡುತನ ಪರಿಹಾರಕ್ಕೆ ನಮ್ಮ ಹಿರಿಯರು ನಡೆಸಿದ ಮೊದಲ ಪ್ರಾಮಾಣಿಕ ಪ್ರಯತ್ನ.

ಇದೇ ತತ್ತ್ವದ ಮೇಲೆ, ವಿಶ್ವದ ಮೊದಲನೆಯ ಮಹಾ ಯುದ್ಧದಲ್ಲಿ, ಬೃಹತ್ ಶ್ರವಣ ಟ್ರಂಪೆಟ್‌ಗಳನ್ನು ಸ್ಥಾಪಿಸಿ, ಶತ್ರುಗಳ ವಿಮಾನವು ಬರುತ್ತಿರುವುದನ್ನು ಪತ್ತೆಹಚ್ಚಬಲ್ಲ ಶಬ್ದ ಸಂಗ್ರಾಹಕ ರಡಾರನ್ನೂ ರೂಪಿಸಿ ಬಳಸಿದರು. ಲಡ್ವಿಗ್ ವಾನ್ ಬೀಥೋವೆನ್ (1770-1827), ಬಹುಶಃ ಈ ಜಗತ್ತು ಕಂಡ ಅತ್ಯಂತ ಪ್ರತಿಭಾನ್ವಿತ ಸಂಗೀತ ಸಂಯೋಜಕರಲ್ಲಿ ಒಬ್ಬ. ಅವನು ಪಿಯಾನೋ ವಾದಕನಾಗಿರುವುದರ ಜೊತೆಯಲ್ಲಿ ಅರೆಗಿವುಡನಾಗಿದ್ದ.

ಸಂಗೀತ ತಜ್ಞನಿಗೆ ಅತ್ಯಂತ ಮುಖ್ಯವಾಗಿ ಬೇಕಾದದ್ದು ಸೂಕ್ಷ್ಮ ಶ್ರವಣ ಸಾಮರ್ಥ್ಯ. ಅದುವೇ ಅವನಿಗೆ ಇರಲಿಲ್ಲ. ಅವನು ನಾನಾ ರೀತಿಯ ತುತ್ತೂರಿ ಶ್ರವಣ ಸಾಧನಗಳನ್ನು ಬಳಸಿದ. ಅವು ಅವನಿಗೆ ತೃಪ್ತಿಯನ್ನು ನೀಡಲಿಲ್ಲ. ಕೊನೆಗೆ ಅವನು ಶಬ್ದದ ವಿಶಿಷ್ಟ ಪ್ರತಿಫಲಿಸುವ ಗುಣವನ್ನು ಗಮನಿಸಿದ. ಹಾಗಾಗಿ ವಿವಿಧ ಗಾತ್ರದ ಕೋಣೆಗಳಲ್ಲಿ, ಕೇಳುತ್ತಿದ್ದ ಶಬ್ದಗಳ ಸ್ಪಷ್ಟತೆ ಭಿನ್ನವಾಗಿರುತ್ತಿತ್ತು.

ಹಾಗಾಗಿ ತನಗೆ ಚೆನ್ನಾಗಿ ಕೇಳಿಸಬಹುದಾದ ಕೋಣೆಯಲ್ಲಿ ಅವನು ಸಂಗೀತ ಸಂಯೋಜನೆಯನ್ನು ನಡೆಸಲಾರಂಭಿಸಿದ. ಕೊನೆಗೆ ಅವನನ್ನು ಕಿವುಡುತನವು ಪೂರ್ಣವಾಗಿ ಆವರಿಸಿತು. ಆಗ ಅವನು ಶಬ್ದವನ್ನು ವರ್ಧಿಸುವ ಎಲ್ಲ ಕೃತಕ ಪ್ರಯತ್ನಗಳನ್ನು ಬಿಟ್ಟು ಸಂಪೂರ್ಣ ಮೌನ ಜಗತ್ತಿನಲ್ಲಿಯೇ ಸಂಗೀತ ಸಂಯೋಜನೆಯನ್ನು ಮಾಡಲಾರಂಭಿಸಿದ. ಅವನ ಸಂಯೋಜನೆಗಳು ಇಂದಿಗೂ ಜಗತ್ತಿನ ಸರ್ವಶ್ರೇಷ್ಠ ಸಂಯೋಜನೆಗಳಲ್ಲಿ ಒಂದಾಗಿವೆ.

1800ರ ಕೊನೆಯ ವರ್ಷಗಳು. ವಿದ್ಯುತ್ ಅನೇಕ ಪವಾಡಗಳ ಭರವಸೆಯನ್ನು ನೀಡಿತ್ತು. ಮಿಲ್ಲರ್ ರೀಸ್ ಹಚಿನ್ಸನ್ (1876-1944) ಎಂಬ ಅಮೆರಿಕದ ಎಲೆಕ್ಟ್ರಿಕಲ್ ಇಂಜಿನಿಯರ್. ಇವನು ಅಕೌ ಫೋನ್ ಎಂಬ ಜಗತ್ತಿನ ಮೊದಲ ವಿದ್ಯುತ್ ಚಾಲಿತ ಶ್ರವಣ ಸಾಧನವನ್ನು ರೂಪಿಸಿದ.



ಇದರಲ್ಲಿ ಒಂದು ಮೈಕ್ರೋಫೋನ್, ಒಂದು ಶ್ರವಣ ವರ್ಧಕ ಅಥವ ಆಂಪ್ಲಿಯೈಯರ್ ಹಾಗೂ ಒಂದು ಹೆಡ್ ಫೋನ್ ಇರುತ್ತಿದ್ದವು. ಮೈಕ್ರೋಫೋನ್ ಶಬ್ದವನ್ನು ಗ್ರಹಿಸಿದರೆ, ಆಂಪ್ಲಿಫೈಯರ್ ಅದನ್ನು ವರ್ಧಿಸುತ್ತಿತ್ತು. ವರ್ಧಿಸಿದ್ದನ್ನು ಹೆಡ್ ಫೋನ್ ಕೇಳಿಸುತ್ತಿತ್ತು. ಇದು ಬ್ಯಾಟರಿಯ ನೆರವಿನಿಂದ ಕೆಲಸ ಮಾಡುತ್ತಿತ್ತು. ಆಗ ಮೇಜಿನ ಮೇಲೆ ಇಡಬಹುದಾದ ದೊಡ್ಡ ಸಾಧನದಿಂದ ಹಿಡಿದು, ಅಂಗಿಯ ಕಿಸೆಯಲ್ಲಿ ಇಟ್ಟುಕೊಳ್ಳಬಹುದಾದಂತಹ ಸಂಚಾರಿ ಸಾಧನವೂ ರೂಪುಗೊಂಡಿತು.

ದೊಡ್ಡ ತುತ್ತೂರಿಗಳನ್ನು ತಮ್ಮೊಡನೆ ಒಯ್ಯುತ್ತಿದ್ದವರಿಗೆ ಈ ಆದಿ ಶಬ್ದ ವರ್ಧಕವು ಒಂದು ಮಹಾನ್ ಕೊಡುಗೆಯಾಗಿ ಕಂಡುಬಂದಿತು. ಇವು ಶಬ್ದಗಳನ್ನು ಸಂಗ್ರಹಿಸುವುದರ ಜೊತೆಯಲ್ಲಿ, ಅವನ್ನು ವರ್ಧಿಸುತ್ತಿತ್ತು. ಹಾಗಾಗಿ ಆಲಿಸುವ ಗುಣಮಟ್ಟ ಉತ್ತಮವಾಗಿತ್ತು. ಹಾಗಾಗಿ ಅತ್ಯಲ್ಪ ಕಾಲದಲ್ಲಿಯೇ ಅದು ಜನಪ್ರಿಯವಾಯಿತು.

1920-1930ರ ದಶಕ. ನೌಕಾಸೇನೆಯ ಇಂಜಿನಿಯರ್ ಅರ್ಲ್ ಹ್ಯಾನ್ಸನ್ ಮೊದಲ ವ್ಯಾಕ್ಯೂಂ ಟ್ಯೂಬ್‌ಗಳನ್ನು ಆವಿಷ್ಕರಿಸಿದ. ಇವನು ಟೆಲಿಫೋನುಗಳಲ್ಲಿ ಬಳಸುವ ಶಬ್ದ ಪ್ರೇಷಕ (ಟ್ರಾನ್ಮಿಟರ್) ಹಾಗೂ ಶಬ್ದ ಗ್ರಾಹಕಗಳನ್ನು (ರಿಸೀವರ್) ಸೂಕ್ಷ್ಮ ರೂಪದಲ್ಲಿ ಬಳಸಿ ವಕ್ಟೂಫೋನ್ ಎಂಬ ಶ್ರವಣ ಸಾಧನವನ್ನು ರೂಪಿಸಿ, ಆಲಿಸುವ ಗುಣಮಟ್ಟವನ್ನು ಸುಧಾರಿಸಿದ.

ಆನಂತರ ಬಂದ ಸಾಧನ ಟಿ-ಕಾಯಿಲ್ ಅಥವ ಟೆಲಿಕಾಯಿಲ್. ಚರ್ಚುಗಳಲ್ಲಿ ಹಾಗೂ ರಂಗ ಮಂದಿರದಲ್ಲಿ ಹಿಯರಿಂಗ್ ಲೂಪ್ ಅಳವಡಿಸಿದರು. ಇವು ಮಾತನಾಡುವವರ ಧ್ವನಿಯನ್ನು ಅಯಸ್ಕಾಂತೀಯ ಅಲೆಗಳ ರೂಪದಲ್ಲಿ ಹೊರಡಿಸುತ್ತಿದ್ದವು. ಆ ಅಲೆಗಳು ಶ್ರವಣ ಸಾಧನವನ್ನು ಧರಿಸುವವರ ಕಿವಿಯನ್ನು ನೇರವಾಗಿ ತಲುಪುತ್ತಿತ್ತು.

ಆಗ ಮಾತನಾಡುವವರ ಧ್ವನಿಯು ಅವರಿಗೆ ಸ್ಪಷ್ಟವಾಗಿ ಕೇಳುತ್ತಿತ್ತು. ಹಿನ್ನೆಲೆಯ ಇತರ ಶಬ್ದಗಳು ಕೇಳಿಸುತ್ತಿರಲಿಲ್ಲ. 1952ರಲ್ಲಿ ಮೊತ್ತ ಮೊದಲ ಟ್ರಾನ್ಸಿಸ್ಟರನ್ನು ರೂಪಿಸಿದರು. ದೊಡ್ಡ ವ್ಯಾಕ್ಯೂಮ್ ಟ್ಯೂಬ್‌ಗಳ ಸ್ಥಾನವನ್ನು ಆಕ್ರಮಿಸಿದ ಟ್ರಾನ್ಸಿಸ್ಟರ್ ಚಿಕ್ಕದಾಗಿ ಹಾಗೂ ಅಡಕವಾಗಿಯೂ ಇದ್ದವು. ವಿಜ್ಞಾನಿಗಳು ಟ್ರಾನ್ಸಿಸ್ಟರ್ ಬಳಸಿ ರೇಡಿಯೊವನ್ನು ರೂಪಿಸುವ ಮೊದಲು ಶ್ರವಣ ಸಾಧನವನ್ನು ರೂಪಿಸಿದರು.

ಸೋನೋಟೋನ್-1010 ಎಂಬ ಸಾಧನದಲ್ಲಿ ಎರಡು ಮಿನಿವ್ಯಾಕ್ಯೂಂ ಟ್ಯೂಬ್‌ಗಳ ಜೊತೆಯಲ್ಲಿ ಟ್ರಾನ್ಸಿಸ್ಟರ್ ಬಳಸಿ ಮಾರುಕಟ್ಟೆಗೆ ಬಿಟ್ಟರು. ಅದು ಅಪಾರ ಜನಪ್ರಿಯತೆಯನ್ನು ಗಳಿಸಿತು. ನಂತರ ಸಂಪೂರ್ಣ ಟ್ರಾನ್ಸಿಸ್ಟರಿಂದ ಶ್ರವಣ ಸಾಧನಗಳನ್ನು ರೂಪಿಸಿದರು. ಇದು ಅತ್ಯಂತ ಪುಟ್ಟ ಶ್ರವಣ ಸಾಧನ. ಅದರೊಳಗೆಯೇ ಇತ್ತು ಬ್ಯಾಟರಿ. ಹೆಚ್ಚು ಸ್ಪಷ್ಟವಾಗಿ ಕೇಳಿಸುತ್ತಿತ್ತು. ಇಂತಹದ್ದನ್ನು ಯಾರ ಕಣ್ಣಿಗೂ ಕಾಣದಂತೆ, ಕಿವಿಯ ಹಾಲೆಯ ಹಿಂದೆ ಕೂರಿಸಬಹುದಾಗಿತ್ತು. ಇನ್ನು ಕೆಲವು ನಮೂನೆಗಳನ್ನು ಕನ್ನಡಕದ ಫ್ರೇಮಿನ ಒಳಗಡೆಯೇ ಅಳವಡಿಸಿದರು. 1970ರ ದಶಕ. ಮೈಕ್ರೋ ಪ್ರೊಸೆಸರನ್ನು ರೂಪಿಸಿದರು.

ಎಡ್ಗರ್ ವಿಲ್ಲೂರ್ (1917-2011) ಒಂದು ಮಲ್ಟಿಚಾನಲ್ ಅನಲಾಗ್ ಆಂಪ್ಲಿಟ್ಯೂಡ್ ಕಂಪ್ರೆಶನ್ ಡಿವೈಸ್ ರೂಪಿಸಿದ. ಇದು ಶಬ್ದ ಸಂಜ್ಞೆಗಳನ್ನು ಅವುಗಳ ತರಂಗಾಂತರಕ್ಕೆ ಅನುಗುಣವಾಗಿ ಪ್ರತ್ಯೇಕಿಸಿ, ವರ್ಧಿಸುತ್ತಿದ್ದವು. ಇದು ಹಿನ್ನೆಲೆ ಶಬ್ದಗಳನ್ನು ಕಡಿಮೆ ಮಾಡಿ, ಮಾತನಾಡುವವರ ಶಬ್ದಗಳು ಮಾತ್ರ ಸ್ಪಷ್ಟವಾಗಿ ಕೇಳುವಂತೆ ಮಾಡಿತು. ಶಬ್ದ ತರಂಗಗಳು ಗಾಳಿಯ ಮೂಲಕ ನಮ್ಮ ಕಿವಿಯನ್ನು ಸೇರುವಂತೆ, ನಮ್ಮ ಮುಖದ ಮೂಳೆಗಳು ಅವನ್ನು ವರ್ಧಿಸಿ ಕಿವಿಗೆ ಕೇಳಿಸುತ್ತವೆ.

ಇದನ್ನು ಗಮನಿಸಿದ ಸ್ವೀಡಿಶ್ ಶಸ್ತ್ರವೈದ್ಯ ಆಂಡರ್ಸ್ ಜೆಲ್‌ಸ್ಟ್ರಾಮ್ 1977ರಲ್ಲಿ ಕಿವಿಯ ಹಿಂಭಾಗದಲ್ಲಿರುವ ಸ್ತನರೂಪಿ ಮೂಳೆಯಲ್ಲಿ (ಮ್ಯಾಸ್ಟಾಯ್ಡ್) ಶಸ್ತ್ರಚಿಕಿತ್ಸೆಯ ಮೂಲಕ ಒಂದು ಸ್ಪಂದಕವನ್ನು (ವೈಬ್ರೇಟರ್) ಅಳವಡಿಸಿ, ಮಾತುಗಳು ಚೆನ್ನಾಗಿ ಕೇಳಿಸುವಂತೆ ಮಾಡಿದ. ಇದನ್ನು ಅಸ್ಥಿಸ್ಥಾಪಿತ ಶ್ರವಣ ಸಾಧನ (ಬಾಹಾ=ಬೋನ್ ಆಂಕರ್ಡ್ ಹಿಯರಿಂಗ್ ಏಡ್) ಎಂದು ಕರೆದರು. ಈ ಶ್ರವಣ ಸಾಧನಗಳು ಉತ್ತಮ ಗುಣಮಟ್ಟದ ಆಲಿಸುವ ಸಾಮರ್ಥ್ಯವನ್ನು ನೀಡಿದರೂ ಸಹ, ಶಸಚಿಕಿತ್ಸೆಯನ್ನು ಮಾಡಿಸಿಕೊಳ್ಳಲು ಜನರು ಹಿಂದೇಟು ಹಾಕಿದ ಕಾರಣ, ಅಷ್ಟು ಜನಪ್ರಿಯವಾಗಲಿಲ್ಲ.

ಕೊನೆಗೆ 1996ರಲ್ಲಿ ವೈಡೆಕ್ಸ್ ಸಂಸ್ಥೆಯು ಸೆನ್ಸೋ ಎಂಬ ಸಂಪೂರ್ಣ ಡಿಜಿಟಲ್ ಶ್ರವಣ ಸಾಧನವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿತು. ಇದು ನಿಜವಾದ ಅರ್ಥದಲ್ಲಿ ಕ್ರಾಂತಿಯನ್ನು ಉಂಟು ಮಾಡಿತು. ಇದುವರೆಗೂ ಬಂದ ಎಲ್ಲ ಶ್ರವಣ ಸಾಧನಗಳು ತಲೆಗೆಲ್ಲ ಒಂದೇ ಮಂತ್ರ ಎಂಬಂತೆ ಎಲ್ಲ ರೀತಿಯ ಶಬ್ದಗಳನ್ನು ಕಿವಿಯೊಳಗೆ ರವಾನಿಸುತ್ತಿದ್ದವು.

ಈ ಸಾಧನವನ್ನು ಮೊದಲ ಬಾರಿಗೆ ವ್ಯಕ್ತಿಗತವಾಗಿ ರೂಪಿಸಲು ಸಾಧ್ಯವಾಯಿತು. ಶ್ರವಣ ತಜ್ಞನು (ಆಡಿಯಾಲಜಿಸ್ಟ್) ವ್ಯಕ್ತಿಯ ಶ್ರವಣ ಸಾಮರ್ಥ್ಯವನ್ನು ಪರೀಕ್ಷಿಸಿ, ಯಾವ ಯಾವ ಶಬ್ದ ಆವರ್ತನಗಳು (ಫ್ರೀಕ್ವೆನ್ಸಿ) ವ್ಯಕ್ತಿಗೆ ಕೇಳಿಸುತ್ತಿಲ್ಲ ಎನ್ನುವುದರ ಮೌಲ್ಯ ಮಾಪನವನ್ನು ಮಾಡಿ, ಆ ಆವರ್ತನಗಳಿಗೆ ಹೊಂದುವ ರೀತಿಯಲ್ಲಿ ಡಿಜಿಟಲ್ ಶ್ರವಣ ಸಾಧನವನ್ನು ಹೊಂದಿಸಿ ನೀಡಿದರು. ಇದು ಅತ್ಯುತ್ತಮ ಗುಣಮಟ್ಟದ ಆಲಿಸುವಿಕೆಯ ಅನುಭವವನ್ನು ನೀಡಲಾರಂಭಿಸಿತು.

ಇದನ್ನು ಕಿವಿಯ ಹಾಲೆಯ ಹಿಂಭಾಗದಲ್ಲಿ ಅಳವಡಿಸಬಹುದಾಗಿತ್ತು. ಕಿವಿಯ ಒಳಗೆ ತೂರಿಸಬಹುದಾದಂತಹ ಪುಟ್ಟ ಸಾಧನಗಳೂ ಮಾರುಕಟ್ಟೆಗೆ ಬಂದವು 2014ರಲ್ಲಿ ಜಿಎನ್ ರಿಸೌಂಡ್ ಸಂಸ್ಥೆಯು ಲಿಂಕ್ಸ್ ಶ್ರವಣ ಸಾಧನವನ್ನು ಬಿಡುಗಡೆಮಾಡಿತು. ಇದನ್ನು ವ್ಯಕ್ತಿ ಬಳಸುವ ಐಫೋನ್ ಜೊತೆಯಲ್ಲಿ ಸಮೀಕರಿಸಿದ್ದರು. ಹಾಗಾಗಿ ಐಫೋನಿಗೆ ಬರುವ ಕರೆಗಳೆಲ್ಲ ನೇರವಾಗಿ ಶ್ರವಣ ಸಾಧನಗಳಿಗೆ ರವಾನೆಯಾದವು. ಹಾಗಾಗಿ ಅತ್ಯುತ್ತಮ ಗುಣಮಟ್ಟದ ಶಬ್ದಗಳು ಕೇಳಲಾರಂಭಿಸಿದರು.

ಐಫೋನಿನ ಸಂಗೀತವು ನೇರವಾಗಿ ಕಿವಿಗಳಿಗೆ ರವಾನೆಯಾಗಲಾರಂಭಿಸಿದವು. ಯಾವುದೇ ರೀತಿಯ ಡಾಂಗಲ್ ಆಗಲಿ, ನೆಕ್ ಲೂಪ್ ಆಗಲಿ ಅಗತ್ಯವಿರಲಿಲ್ಲ, ಅರೆಗಿವುಡರ ಬದುಕನ್ನು 99%ರಷ್ಟು ಸುಧಾರಿಸಿದವು. ಅಮೆರಿಕದ ಎಫ್ ಡಿಎ, 2022ರಿಂದ ಶ್ರವಣಸಾಧನಗಳನ್ನು ವೈದ್ಯರ ನೆರವಿಲ್ಲದೆ ಕೊಳ್ಳಲು ಅನುಕೂಲತೆಯನ್ನು ಮಾಡಿ ಕೊಟ್ಟಿತು. ಸೌಮ್ಯ ಅಥವಾ ಮಧ್ಯಮ ಪ್ರಮಾಣದ ಶ್ರವಣ ವೈಕಲ್ಯ ಉಳ್ಳವರು ಅಂಗಡಿಗೆ ಹೋಗಿ ತಮಗೆ ಅಗತ್ಯವಾದ ಸಾಧನವನ್ನು ಕೊಳ್ಳುವುದು ಸುಲುಭವಾಯಿತು. ಕೊನೆಗೆ 2024ರಲ್ಲಿ ಎಫ್ ಡಿಎ ಓಟಿಸಿ ಹಿಯರಿಂಗ್ ಏಡ್ ಸಾಫ್ಟ್ ವೇರನ್ನು ಬಿಡುಗಡೆ ಮಾಡಿತು. ಈ ಸಾಫ್ಟ್ ವೇರನ್ನು ಆಪಲ್ ಏರ್-ಪಾಡ್‌ಗಳಲ್ಲಿ ಅಳವಡಿಸಬಹುದಾಗಿತ್ತು. ಏರ್ ಪಾಡುಗಳು ಸಂಗೀತವನ್ನೇ ಕೇಳಲೆಂದೇ ರೂಪಿಸಿರುವ ವೈಯಕ್ತಿಕ ಶ್ರವಣ ಸಾಧನಗಳು. ಇವುಗಳಲ್ಲಿ ಈ ಸಾಫ್ಟ್ ವೇರನ್ನು ಅಳವಡಿಸಿದರೆ, ಸಂಗೀತದ ಜೊತೆಯಲ್ಲಿ ಎಲ್ಲ ಟೆಲಿಫೋನ್ ಕರೆಗಳನ್ನು ನೇರವಾಗಿ ಏರ್ ಪಾಡುಗಳ ಮೂಲಕವೇ ಸ್ವೀಕರಿಸಬಹುದು. ಎಷ್ಟೇ ಗದ್ದಲಮಯ ಪರಿಸರದಲ್ಲಿಯೂ, ಫೋನಿನಲ್ಲಿ ಮಾತನಾಡುತ್ತಿರುವವರ ಶಬ್ದವು ಸ್ಪಷ್ಟವಾಗಿ ಕೇಳಿಸುತ್ತದೆ.

ಇವು ಸ್ವಲ್ಪ ದುಬಾರಿಯಾದರೂ ಸರಿ, ಅರೆಗಿವುಡರ ಬದುಕನ್ನು ಬಂಗಾರನ್ನಾಗಿಸಿದೆ ಎಂದರೆ ಅದು ಅತಿಶಯೋಕ್ತಿಯಾಗಲಾರದು. ಈಗ ಮಾರುಕಟ್ಟೆಯಲ್ಲಿ ರಿ-ಸೌಂಡ್ ಶ್ರವಣ ಸಾಧನಗಳನ್ನು ತಮ್ಮ ಮೊಬೈಲ್ ಫೋನಿನಲ್ಲಿರುವ ಬ್ಲೂಟೂತಿಗೆ ಸರಿಹೊಂದಿಸಿ, ಕರೆಗಳನ್ನು ನೇರವಾಗಿ ಸ್ವೀಕರಿಸಬಹುದಾದ ಸರಳ, ಹೆಚ್ಚು ಖರ್ಚಿಲ್ಲದ ಹಾಗೂ ಪರಿಣಾಮಕಾರಿಯಾದ ಅನುಕೂಲತೆಯೂ ದೊರೆಯುತ್ತಿದೆ, ಹಾಗಾಗಿ ಅರೆವುಡುತನವು ಇಂದು ಖಂಡಿತ ಒಂದು ಶಾಪವಲ್ಲ ಎನ್ನಬಹುದು.

**- ಡಾ.ನಾ.** ಸೋಮೇಶ್ವರ

## 21-9-2025 ದಿನ ಭವಿಷ್ಯ

**ಮೇಷ:** ಯಾವುದಾದರೂ ಸೃಜನಾತ್ಮಕ ಕೆಲಸದಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ. ಸೋಮಾರಿಯಾಗಿ ಕುಳಿತುಕೊಳ್ಳುವ ನಿಮ್ಮ ಅಭ್ಯಾಸ ಮಾನಸಿಕ ಶಾಂತಿಗೆ ಮಾರಣಾಂತಿಕವಾಗಬಹುದು. ಸಂಶಯಾಸ್ಪದ ಹಣಕಾಸು ವ್ಯವಹಾರಗಳಲ್ಲಿ ಸಿಲುಕಿಕೊಳ್ಳದಂತೆ ಎಚ್ಚರಿಕೆ ವಹಿಸಿ. ನೀವು ಕಾಳಜಿ ವಹಿಸುವ ಯಾರಾದರ ಜೊತೆಗಿನ ಸಂವಹನದ ಕೊರತೆ ನಿಮಗೆ ಖಿನ್ನತೆಯನ್ನು ಉಂಟುಮಾಡುತ್ತದೆ.

**ವೃಷಭ:** ನಿಮ್ಮ ಕೋಪ ಕಡ್ಡಿಯನ್ನು ಗುಡ್ಡ ಮಾಡಬಹುದು-ಇದು ನಿಮ್ಮ ಕುಟುಂಬದ ಸದಸ್ಯರ ಅಸಮಾಧಾನಕ್ಕೆ ಕಾರಣವಾಗುತ್ತದೆ. ಕೋಪವನ್ನು ನಿಯಂತ್ರಣದಲ್ಲಿಡುವುದನ್ನು ಕಲಿತ ಆ ಮಹಾನ್ ಆತ್ಮಗಳೇ ಅದೃಷ್ಟಶಾಲಿಗಳು. ನಿಮ್ಮ ಕೋಪ ನಿಮ್ಮನ್ನು ಸುಡುವ ಮೊದಲು ನೀವೇ ಅದನ್ನು ಸುಟ್ಟುಬಿಡಿ.

**ಮಿಥುನ:** ನಿಮ್ಮ ಮನಸ್ಸಿನಲ್ಲಿ ಸಕಾರಾತ್ಮಕ ಆಲೋಚನೆಗಳನ್ನು ತನ್ನಿ. ಇಂದು ಮನೆಯಿಂದ ಹೊರಗೆ ಹಿರಿಯರ ಆಶೀರ್ವಾದವನ್ನು ತೆಗೆದುಕೊಂಡು ಹೋಗಿ, ಇದರಿಂದ ನೀವು ಹಣದ ಲಾಭವನ್ನು ಪಡೆಯಬಹುದು. ನಿಮ್ಮ ಮಗುವಿನಂಥ ಮತ್ತು ಮುಗ್ಧ ವರ್ತನೆ ಕುಟುಂಬದ ಸಮಸ್ಯೆಯನ್ನು ಪರಿಹರಿಸುವಲ್ಲಿ ಒಂದು ಪ್ರಮುಖ ಪಾತ್ರ ವಹಿಸುತ್ತದೆ.

**ಕರ್ಕಾಟಕ:** ನಿಮ್ಮ ಬಗ್ಗೆ ನಿಮಗೇ ಉತ್ತಮ ಅಭಿಪ್ರಾಯ ಬರಲು ಕೆಲಸಗಳನ್ನು ಮಾಡಲು ಒಂದು ಅದ್ಭುತ ದಿನ. ಹೊಸ ಆರ್ಥಿಕ ಒಪ್ಪಂದ ಕುದುರಿಸಲಾಗುತ್ತದೆ ಮತ್ತು ಹೊಸ ಹಣ ಬರುತ್ತದೆ. ಕುಟುಂಬದ ಸದಸ್ಯರು ನಿಮ್ಮ ನಿರೀಕ್ಷೆಗಳನ್ನು ಪೂರೈಸದಿರಬಹುದು. ಅವರು ನಿಮ್ಮ ಇಷ್ಟಾನಿಷ್ಟಗಳ ಪ್ರಕಾರ ಕೆಲಸ ಮಾಡುತ್ತಾರೆಂದು ನಿರೀಕ್ಷಿಸಬೇಡಿ...

**ಸಿಂಹ:** ನಿಮ್ಮ ದೊಡ್ಡ ಆಸ್ತಿಯೆಂದರೆ ನಿಮ್ಮ ಹಾಸ್ಯಪ್ರಜ್ಞೆಯಾಗಿದೆ ಇದನ್ನು ನಿಮ್ಮ ಅನಾರೋಗ್ಯ ಗುಣಪಡಿಸಲು ಬಳಸಲು ಪ್ರಯತ್ನಿಸಿ. ನಿಮ್ಮ ಸಹೋದರ-ಸಹೋದರಿಯರಲ್ಲಿ ಒಬ್ಬರು ಇಂದು ನಿಮ್ಮಿಂದ ಹಣವನ್ನು ಎರವಲು ಪಡೆಯಬಹುದು, ನೀವು ಅವರಿಗೆ ಹಣವನ್ನು ಸಾಲವಾಗಿ ಕೊಡುತ್ತೀರಿ ಆದರೆ ಇದರಿಂದ ನಿಮ್ಮ ಆರ್ಥಿಕ ಪರಿಸ್ಥಿತಿ ಹದಗೆಡಬಹುದು.

**ಕನ್ಯಾ:** ಸಂತಸದ ಪ್ರಯಾಣ ಮತ್ತು ಸಾಮಾಜಿಕ ಕಾರ್ಯಕ್ರಮಗಳು ನಿಮಗೆ ಆರಾಮ ಮತ್ತು ಸಂತೋಷ ತರುತ್ತದೆ. ತಾತ್ಕಾಲಿಕ ಸಾಲಕ್ಕಾಗಿ ನಿಮ್ಮ ಬಳಿ ಬರುವವರನ್ನು ನಿರ್ಲಕ್ಷಿಸಿ. ನಿಮ್ಮ ಕುಟುಂಬದೊಂದಿಗೆ ಸಾಮಾಜಿಕ ಚಟುವಟಿಕೆ ಎಲ್ಲರನ್ನೂ ಆರಾಮವಾಗಿ ಮತ್ತು ಆಹ್ಲಾದಕರ ಮನಸ್ಥಿತಿಯಲ್ಲಿಡುತ್ತದೆ. ನಿಮ್ಮ ಪ್ರೇಮದ ಸಂಗಾತಿ ನಿಮ್ಮನ್ನು ಹೊಗಳಬಹುದು.

**ತುಲಾ:** ಆರೋಗ್ಯ ದೃಷ್ಟಿಯಿಂದ ಉತ್ತಮವಾದ ದಿನ. ನಿಮ್ಮ ಹರ್ಷಚಿತ್ತದ ಮನಸ್ಸು ರಾಜ್ಯದ ನೀವು ಬಯಸಿದ ಟಾನಿಕ್ ನೀಡುತ್ತದೆ ಮತ್ತು ನಿಮಗೆ ಆತ್ಮವಿಶ್ವಾಸ ತರುತ್ತದೆ. ಇಂದು ಮನೆಯಿಂದ ಹೊರಗೆ ಹಿರಿಯರ ಆಶೀರ್ವಾದವನ್ನು ತೆಗೆದುಕೊಂಡು ಹೋಗಿ, ಇದರಿಂದ ನೀವು ಹಣದ ಲಾಭವನ್ನು ಪಡೆಯಬಹುದು.

**ವೃಶ್ಚಿಕ:** ಇಂದು ನೀವು ಭರವಸೆಯ ಮಾಯಾಜಾಲದಲ್ಲಿದ್ದೀರಿ. ವ್ಯಾಪರದಲ್ಲಿ ಪ್ರಯೋಜನ ಇಂದು ಅನೇಕ ವ್ಯಾಪಾರಿಗಳ ಮುಖದ ಮೇಲೆ ಸಂತೋಷವನ್ನು ತರಬಹುದು. ನಿಮ್ಮ ಆಕರ್ಷಣೆ ಹಾಗೂ ವ್ಯಕ್ತಿತ್ವ ನೀವು ಹೊಸ ಸ್ನೇಹಿತರನ್ನು ಗಳಿಸಲು ಸಹಾಯ ಮಾಡುತ್ತದೆ. ರಹಸ್ಯ ಪ್ರಣಯಗಳು ನಿಮ್ಮ ಖ್ಯಾತಿಯನ್ನು ನಾಶಮಾಡಬಹುದು.

**ಧನು:** ಮನರಂಜನೆ ಮತ್ತು ಮೋಜಿನ ಒಂದು ದಿನ. ಇಂದು ನೀವು ಯಾತ್ರೆಯಲ್ಲಿ ಹೋಗುತ್ತಿದ್ದರೆ ನಿಮ್ಮ ಅಮೂಲ್ಯ ವಸ್ತುಗಳ ಬಗ್ಗೆ ಗಮನ ಹರಿಸಿ ಅವುಗಳನ್ನು ಕಡಿಯುವ ಸಧ್ಯತೆ ಇದೆ. ವಿಶೇಷವಾಗಿ ನಿಮ್ಮ ಹಣದಚೀಲವನ್ನು ಎಚ್ಚರಿಕೆಯಿಂದಿಡಿ. ತಂದೆಯ ಕಠಿಣ ನಡವಳಿಕೆ ನಿಮಗೆ ಸಿಟ್ಟು ಬರಿಸಬಹುದು. ನೀವು ವಿಷಯವನ್ನು ನಿಯಂತ್ರಣದಲ್ಲಿಡಲು ಶಾಂತರಾಗಿರುವ ಅಗತ್ಯವಿದೆ.

**ಮಕರ:** ಬಿಡುವಿರದ ಕಾರ್ಯಕ್ರಮದ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದೆ. ಹಣ ನಿಮಗೆ ಅಗತ್ಯವಾಗಿದೆ ಆದರೆ ನಿಮ್ಮ ಸಂಬಂಧಗಳನ್ನು ಹಾಳುಮಾಡುವಷ್ಟು ಹಣದ ಬಗ್ಗೆ ಗಂಭೀರವಾಗಬೇಡಿ. ನಿಮ್ಮ ಹವ್ಯಾಸಗಳನ್ನು ಮುಂದುವರಿಸುವ ಮತ್ತು ಕುಟುಂಬದ ಸದಸ್ಯರಿಗೆ ಸಹಾಯ ಮಾಡುವ ಮೂಲಕ ನೀವು ಸಮಯ ಕಳೆಯಬಹುದು.

**ಕುಂಭ:** ನಿಮ್ಮ ಹಾಸ್ಯಪ್ರಜ್ಞೆ ಇನ್ನೊಬ್ಬರಿಗೆ ಸಂತೋಷ ವಸ್ತುಗಳನ್ನು ಹೊಂದುವುದರಲ್ಲದೇ ನಮ್ಮೊಳಗೇ ಇದೆಯೆಂದು ಅರ್ಥ ಮಾಡಿಸುವುದರಿಂದ ಅವರು ಸ್ವತಃ ಈ ಕೌಶಲ್ಯವನ್ನು ಹೊಂದಲು ಪ್ರೋತಾಹಿಸಿದಂತಾಗುತ್ತದೆ. ಇಂದು ನೀವು ಸುಲಭವಾಗಿ ಬಂಡವಾಳ ಪಡೆಯಬಹುದು ಬಾಕಿಯಿರುವ ಸಾಲಗಳನ್ನು ಸಂಗ್ರಹಿಸಬಹುದು ಅಥವಾ ಹೊಸ ಯೋಜನೆಗಳಿಗೆ ಕೆಲಸ ಮಾಡಲು ಹಣ ಕೇಳಬಹುದು.

**ಮೀನ:** ಕೆಲಸದಲ್ಲಿ ಹಿರಿಯರಿಂದ ಒತ್ತಡ ಮತ್ತು ಮನೆಯಲ್ಲಿ ಅಪಶೃತಿ ನಿಮ್ಮ ಏಕಾಗ್ರತೆಗೆ ತೊಂದರೆ ತರಬಹುದು. ವ್ಯಾಪಾರ ಸಾಲಕ್ಕಾಗಿ ನಿಮ್ಮ ಬಳಿ ಬರುವವರನ್ನು ನಿರ್ಲಕ್ಷಿಸಿ. ಇಂದು ನೀವು ಹೆಚ್ಚು ಪ್ರಯತ್ನ ಮಾಡಬೇಕಾಗಿ ಬಂದರೂ ಕೂಡ ಮಕ್ಕಳ ಸಂಗದಲ್ಲಿ ನಿಮ್ಮ ಬಿಡುವಿನ ಸಮಯ ಕಳೆಯಲು ಪ್ರಯತ್ನಿಸಬೇಕು. ನಿಮ್ಮನ್ನು ಯಾರಾದರೂ ಆಕರ್ಷಿಸಲು ಪ್ರಯತ್ನಿಸಬಹುದಾದ್ದರಿಂದ ಎಚ್ಚರಿಕೆಯಿಂದಿರಿ.

## ಭೂಮಿ ಬಯಕೆ ತೀರಿಸುವ ಭೂಮಿ ಹುಣ್ಣಿಮೆ ಹಬ್ಬ

ಆಶ್ವಯುಜ ಮಾಸದಲ್ಲಿ ಬರುವ ಭೂಮಿ ಹುಣ್ಣಿಮೆಯ ಕುರಿತು ಹೇಳುತ್ತಿದ್ದೇನೆ. ಮಲೆನಾಡಿಗರ ಭಾಷೆಯಲ್ಲಿ ಇದು ಭೂಮಣಿ ಹಬ್ಬ. ಭೂಮಿಹುಣ್ಣಿಮೆ ಎಂದ ಕೂಡಲೇ ನನ್ನ ಮನ ನಿಲ್ಲದೆ ತೀರ್ಥಹಳ್ಳಿಯ ಸಮೀಪದ ನನ್ನ ಅಜ್ಜಿ ಮನೆಯೆಡೆಗೆ ಓಡುತ್ತದೆ. ನಮ್ಮ ಅಜ್ಜಿ ಈ ಹಬ್ಬವನ್ನು ತುಂಬಾ ಶ್ರದ್ಧೆಯಿಂದ ಆಚರಿಸುತ್ತಿದ್ದರು. ಹಬ್ಬದ ಮುನ್ನಾ ದಿನ ಗದ್ದೆಯ ಅಂಚಿನ ಒಂದು ಭಾಗವನ್ನು ಶುಚಿಗೊಳಿಸಿ, ಸಗಣಿ ಸಾರಿಸಿ, ಬಾಳೆಕಂಬ, ತೋರಣಗಳಿಂದ ಅಲಂಕರಿಸಿ ಬರುತ್ತಾರೆ. ಅಂದು ಮನೆಯ ಮಕ್ಕಳು ಒಂದು ಬುಟ್ಟಿ ಹಿಡಿದು ಸುತ್ತಮುತ್ತ ತಿರುಗಿ ಬಗೆಬಗೆಯ ಸೊಪ್ಪುಗಳನ್ನು ಆಯ್ದು ತರಬೇಕು.

ನವರಾತ್ರಿಯ ನವಧಾತ್ರಿಯ
ಈ ಶ್ಯಾಮಲ ವನಧಿಯಲಿ
ಹಸುರಾದುದೊ ಕವಿಯಾತ್ಮಂ
ರಸಪಾನ ಸ್ನಾನದಲಿ

ಎತ್ತೆತ್ತ ನೋಡಿದರತ್ತ ಹಸಿರ ಸಿರಿ ತುಂಬಿ ತುಳುಕುತಿರುವಾಗ ಭೂರಮೆಯ ಸೌಂದರ್ಯ ಕವಿಯ ಕಣ್ಮನಗಳ ತಣಿಸಿ, ಆತ್ಮವೂ ರಸಪಾನದಲಿ ಲೀನವಾಗಿ ಅದ್ವೈತ ಸ್ಥಿತಿ ತಲುಪುವ ಸುಂದರ ಅನುಭವವನ್ನು ಕವಿ ಕುವೆಂಪು ಅವರ ಹಸುರು ಪದ್ಯದ ಈ ಸಾಲುಗಳು ಹೃದ್ಯವಾಗಿ ಬಣ್ಣಿಸುತ್ತವೆ. ಇಂತಹ ಅನುಭವ ನಿಮಗೆ ನಿಜಕ್ಕೂ ಬೇಕೆಂದರೆ ನವರಾತ್ರಿಯ ಈ ಸಮಯದಲ್ಲಿ ಮಲೆನಾಡಿಗೆ ಬರಬೇಕು. ಮುಂಗಾರಿನ ಕಲರವದೊಂದಿಗೆ ಆರಂಭವಾದ ಭತ್ತದ ಗದ್ದೆಯ ನೆಟ್ಟಿ ಮುಗಿದು, ಬೆಳೆದ ಸಸಿಗಳಿಗೆ ಗೊಬ್ಬರ, ಔಷಧಿ ಒದಗಿಸಿ, ಕಳೆ ತೆಗೆದು ಆರೈಕೆ ಮಾಡಿದ ರೈತರ ಮೊಗದಲ್ಲಿ ನಗು ಮೂಡುವ ಸವಿ ಸಮಯವಿದು. ರೈತನ ಬೆವರಿಗೆ ಭೂಮಿ ತಾಯಿ ಹರಸಿ ಫಲ ನೀಡಲು ಅನುವಾಗಿದ್ದಾಳೆ. ಭತ್ತದ ಸಸಿಗಳು ತೆನೆಯಿಂದ ಸಿಂಗಾರಗೊಂಡು ಭೂಮಿಹಬ್ಬಕ್ಕೆ ರೈತಮಕ್ಕಳನ್ನು ಗದ್ದೆಗಳಲ್ಲಿ ಸ್ವಾಗತಿಸುತ್ತಿವೆ.

ಈ ಸಂಭ್ರಮವನ್ನು ಆಚರಿಸಲು ಮಲೆನಾಡಿನ ಮನೆಗಳಲ್ಲಿ ಸಿದ್ಧತೆ ಆರಂಭವಾಗಿದೆ. ಹೌದು ಆಶ್ವಯುಜ ಮಾಸದಲ್ಲಿ ಬರುವ ಭೂಮಿ ಹುಣ್ಣಿಮೆಯ ಕುರಿತು ಹೇಳುತ್ತಿದ್ದೇನೆ. ಮಲೆನಾಡಿಗರ ಭಾಷೆಯಲ್ಲಿ ಇದು ಭೂಮಣಿ ಹಬ್ಬ. ಭೂಮಿಹುಣ್ಣಿಮೆ ಎಂದ ಕೂಡಲೇ ನನ್ನ ಮನ ನಿಲ್ಲದೆ ತೀರ್ಥಹಳ್ಳಿಯ ಸಮೀಪದ ನನ್ನ ಅಜ್ಜಿ ಮನೆಯೆಡೆಗೆ ಓಡುತ್ತದೆ. ನಮ್ಮ ಅಜ್ಜಿ ಈ ಹಬ್ಬವನ್ನು ತುಂಬಾ ಶ್ರದ್ಧೆಯಿಂದ ಆಚರಿಸುತ್ತಿದ್ದರು. ಹಬ್ಬದ ಮುನ್ನಾ ದಿನ ಗದ್ದೆಯ ಅಂಚಿನ ಒಂದು ಭಾಗವನ್ನು ಶುಚಿಗೊಳಿಸಿ, ಸಗಣಿ ಸಾರಿಸಿ, ಬಾಳೆಕಂಬ, ತೋರಣಗಳಿಂದ ಅಲಂಕರಿಸಿ ಬರುತ್ತಾರೆ. ಅಂದು ಮನೆಯ ಮಕ್ಕಳು ಒಂದು ಬುಟ್ಟಿ ಹಿಡಿದು ಸುತ್ತಮುತ್ತ ತಿರುಗಿ ಬಗೆಬಗೆಯ ಸೊಪ್ಪುಗಳನ್ನು ಆಯ್ದು ತರಬೇಕು. ಒಟ್ಟು ನೂರೊಂದು ಕುಡಿ ಸೊಪ್ಪುಗಳನ್ನು ಸೇರಿಸಿ ಪಲ್ಯ ಮಾಡಲಾಗುತ್ತದೆ. ಇದಕ್ಕೆ ಬೆರಕೆ ಸೊಪ್ಪು ಎನ್ನುತ್ತಾರೆ. ಬಣ್ಣದ ಸೌತೆಕಾಯಿ, ಹೀರೇಕಾಯಿ ಮತ್ತು ಅಮಟೆಕಾಯಿಯನ್ನು ಈ ಬೆರಕೆ ಸೊಪ್ಪಿಗೆ ಹಾಕುತ್ತಾರೆ. ಇದು ಭೂಮಿ ತಾಯಿಗೆ ಅತಿ ಶ್ರೇಷ್ಠ ನೈವೇದ್ಯ. ಸ್ನಾನ ಮಾಡಿ, ಇಡೀ ರಾತ್ರಿ ನಿದ್ದೆ ಮಾಡದೆ ಮನೆಯ ಗೃಹಿಣಿಯರು ಭೂಮಿತಾಯಿಗೆ ವಿವಿಧ ಬಗೆಯ ಭಕ್ಷ್ಯಗಳನ್ನು ತಯಾರಿಸುತ್ತಾರೆ. ಹೀಗೆ ರಾತ್ರಿ ನಿದ್ದೆಗೆಡುವಾಗ ಅಕ್ಕಪಕ್ಕದ ಮನೆಯವರು ಬರುವುದು, ಮನರಂಜನೆಗೆ ಕೆಲವು ಆಟ ಆಡುವುದು ಇರುತ್ತದೆ.





ಮನೆಯವರನ್ನು ಮಾತನಾಡಿಸುವ ನೆಪದಲ್ಲಿ ಮಜ್ಜಿಗೆ ಕಡೆಯುವ ಕಡೆಗೋಲು, ಕಡೆಯುವ ಕಲ್ಲಿನ ಗುಂಡು ಕಲ್ಲು, ಹಾಲು ಕರೆಯುವ ಪಾತ್ರೆ, ಹೀಗೆ ಅತಿ ಅಗತ್ಯ ವಸ್ತುಗಳನ್ನು ತೆಗೆದುಕೊಂಡು ಹೋಗಿ ಮುಚ್ಚಿಡುವುದು, ಹಾಲು ಕುಡಿಯುವ ಕರುಗಳನ್ನು ತಾಯಿ ಹಸು ಬಳಿ ಬಿಡುವುದು ಹೀಗೆ ಮನೆಯವರಲ್ಲಿ ಗಡಿಬಿಡಿ ಮೂಡಿಸಿ ಮೋಜಿನ ಆಟವಾಡುತ್ತಾರೆ.

ಈ ಹಬ್ಬದಲ್ಲಿ ಹಳ್ಳಿ ತರಕಾರಿಗಳಿಗೆ ಆದ್ಯತೆ. ಗೆಡ್ಡೆ, ಗೆಣಸು, ಕೆಸುವಿನ ಎಲೆ, ಕೆಸುವಿನ ದಂಟು, ಅಮಟೆಕಾಯಿ, ಸೌತೆಕಾಯಿ, ಚೀನಿಕಾಯಿ, ಬಾಳೆದಿಂಡು ಇರಲೇಬೇಕು. ಒಟ್ಟು ಏಳು ಬಗೆಯ ತರಕಾರಿ ಪಲ್ಯಗಳು, ಪಾಯಸ, ಹೋಳಿಗೆ, ಕಜ್ಜಾಯ ಮೊದಲಾದ ಸಿಹಿ ಮಾಡುತ್ತಾರೆ. ಕೊಟ್ಟೆಕಡುಬು ವಿಶೇಷ ಖಾದ್ಯ. ಇದನ್ನು ಅಕ್ಕಿ ನೆನೆಸಿಟ್ಟು ಅದಕ್ಕೆ ಕೆಸುವಿನ ದಂಟನ್ನು ಹಾಕಿ ಕಡೆದು, ಬಾಳೆಲೆ ಕೊಟ್ಟೆಯಲ್ಲಿ ಹಾಕಿ ಕಟ್ಟಿ ಬೇಯಿಸುತ್ತಾರೆ. ಹಾಲು, ಮಜ್ಜಿಗೆ, ಜೀರಿಗೆ, ಬೆಲ್ಲ ಬೆರೆಸಿ ಮಾಡಿದ ಹಾಲಂಬಲಿ ಎಂಬ ವಿಶೇಷ ಖಾದ್ಯ ಕೂಡ ಇರುತ್ತದೆ.

ಮುಂಜಾನೆ ಕಾಗೆ ಕೂಗುವ ಮೊದಲೇ ಭೂಮಿತಾಯಿಗೆ ನೈವೇದ್ಯ ಪೂಜೆ ಸಲ್ಲಬೇಕೆಂಬ ನಂಬಿಕೆ ಇದೆ. ಬೆಳಿಗ್ಗೆ ನಾಲ್ಕು ಗಂಟೆಯಿಂದಲೇ ಮನೆಮಂದಿಯೆಲ್ಲಾ ಎದ್ದು ಸ್ನಾನ ಮಾಡಿ ಶುಭ್ರ ಉಡುಪು ಧರಿಸಿ ಮೊದಲ ರಾತ್ರಿ ಮಾಡಿದ ಭಕ್ಷ್ಯಗಳನ್ನು ಸಗಣಿ, ಕೆಮ್ಮಣ್ಣು ಬಳಿದು ಅಲಂಕರಿಸಿದ ಬುಟ್ಟಿಯಲ್ಲಿ ತುಂಬಿಕೊಂಡು ಗದ್ದೆಯೆಡೆಗೆ ಹೋಗುತ್ತಾರೆ. ಮನೆಯೊಡತಿಯ ಮಾಂಗಲ್ಯ ಸರವನ್ನು ಭೂಮಿ ಪೂಜೆಗೆ ಸಿದ್ಧ ಮಾಡಿದ ಸ್ಥಳದಲ್ಲಿ ಭೂಮಾತೆಗೆ ಹಾಕಿ ಶ್ರದ್ಧಾ ಭಕ್ತಿಯಿಂದ ಪೂಜಿಸುತ್ತಾರೆ. ಹಸಿರು ಬಳೆ ಅರ್ಪಿಸುತ್ತಾರೆ. ತಿನಿಸುಗಳನ್ನು ಬಾಳೆಲೆಗೆ ಬಡಿಸಿ ನೈವೇದ್ಯ ಮಾಡುತ್ತಾರೆ. ಬೆರಕೆ ಸೊಪ್ಪು ಅನ್ನದ ಮಿಶ್ರಣವನ್ನು ಗದ್ದೆಯ ಎಲ್ಲಾ ಭಾಗದಲ್ಲಿ ಚೆಲ್ಲುತ್ತಾರೆ. ಹೀಗೆ ಚೆಲ್ಲುವಾಗ ಹಾಲಂಬಲಿ, ಹಚ್ಚಂಬಲಿ ಬೇಲಿ ಮೇಲಿರುವ ದಾರಿ ಹೀರೇಕಾಯಿ ಗುಡ್ಡದ ಮೇಲಿನ ನೂರೊಂದು ಕುಡಿ ಭೂಮಿ ತಾಯಿಗೆ ಬಯಕೆ. ಬಯಕೆ. ಎಂದು ಕೂಗಿ ಹೇಳುವ ವಾಡಿಕೆ ಇದೆ.

ಕೊಟ್ಟೆಕಡುಬನ್ನು ಗದ್ದೆಯ ಒಂದೊಂದು ಭಾಗದಲ್ಲಿ ಹೂಳುತ್ತಾರೆ. ಹೀಗೆ ಹೂತ ಕಡುಬು ಗದ್ದೆ ಕೊಯ್ಲಿನ ಸಮಯದಲ್ಲಿ ಸಿಗುತ್ತದೆ. ಅದನ್ನು ತಂದು ಸುಗ್ಗಿ ಹಬ್ಬದ ಹೊಸತಿನಲ್ಲಿ ಪಾಯಸ ಮಾಡಿ ಹಿರಿಯರಿಗೆ ಎಡೆ ಇಡುತ್ತಾರೆ. ಭೂಮಿಪೂಜೆಯ ನಂತರ ಮನೆಗೆ ಬಂದು ಮಾಡಿದ ತಿನಿಸುಗಳನ್ನು ಹಿರಿಯರಿಗೂ ಎಡೆಮಾಡಿ ಪೂಜಿಸುತ್ತಾರೆ. ನಂತರ ಮನೆಯವರು ಊಟ ಮಾಡುತ್ತಾರೆ.

ಮನೆಮಗಳು ಗರ್ಭಿಣಿ ಇರುವಾಗ ಹೇಗೆ ಅವಳಿಗೆ ಸೀಮಂತ ಶಾಸ್ತ್ರ ಮಾಡಿ ಆಕೆಯ ಬಯಕೆಗಳನ್ನೆಲ್ಲಾ ತೀರಿಸುತ್ತಾರೋ ಹಾಗೆ ತೆನೆ ಧರಿಸಿದ ಭೂಮಿಗೂ ಬಯಕೆ ನೀಡುವ ವಿಶಿಷ್ಟ ಆಚರಣೆ ಇದಾಗಿದೆ. ಬೆರಕೆ ಸೊಪ್ಪಿಗೆ ಎಲೆಗಳನ್ನು ಆಯುವಾಗಲೂ ಯಾವುದೇ ನಂಜಿನ ಅಂಶವಿರುವ ಎಲೆಗಳನ್ನು ಕೊಯ್ಯುವುದಿಲ್ಲ. ಬಸುರಿಗೆ ನಂಜಾಗಬಾರದೆಂಬ ನಂಬಿಕೆಯೇ ಇಲ್ಲೂ ಇರುವುದು ವಿಶೇಷ. ಗದ್ದೆ, ತೋಟ, ಹಸಿರೇ ಉಸಿರಾದ ಮಲೆಯ ಮಕ್ಕಳು ಪ್ರಕೃತಿಯ ಕೂಸುಗಳೆಂದು ಅರಿವಾಗುವುದೇ ಇಂತಹ ಆಚರಣೆಗಳ ಹಿನ್ನೆಲೆ ಮತ್ತು ಮಹತ್ವವಾಗಿದೆ. ಪ್ರಕೃತಿ ಜಡವಲ್ಲ, ಚಿರನೂತನ ಚೈತನ್ಯದ ಸೆಲೆ. ಅದನ್ನು ಆರಾಧಿಸುವುದು ನಮ್ಮ ಸಂಪ್ರದಾಯ ಮತ್ತು ಸಂಸ್ಕೃತಿ.

ಹಳ್ಳಿಗಳಿಂದ ನಗರಗಳಿಗೆ ವಲಸೆ ಹೋಗುವವರ ಸಂಖ್ಯೆ ಹೆಚ್ಚಾಗಿ, ರೈತಾಪಿ ಕೆಲಸಗಳನ್ನು ಮಾಡುವವರೇ ಕಡಿಮೆಯಾಗುತ್ತಿರುವ ಇಂದಿನ ದಿನಗಳಲ್ಲಿ ಭೂಮಿ ಹುಣ್ಣಿಮೆಯಂತಹ ಹಸಿರು, ಭೂಮಿಯ ಆರಾಧನೆ ಯುವಮನಸ್ಸುಗಳನ್ನು ಮರಳಿ ಮಣ್ಣಿಗೆ ಕರೆತರುವಂತಾಗಲಿ ಎಂಬುದೇ ಆಶಯ.

**- ಭವ್ಯ** ಟಿ.ಎಸ್

## ರುದ್ರರಮಣೀಯ ಕಲ್ಲತ್ತಿಗಿರಿ ಜಲಪಾತ

ಕೆಮ್ಮಣ್ಣುಗುಂಡಿಯಿಂದ 10 ಕಿ.ಮೀ. ದೂರದಲ್ಲಿದೆ. ಚಿಕ್ಕಮಗಳೂರಿನ ಕಲ್ಲತ್ತಿಗಿರಿ ತನ್ನ ಸೌಂದರ್ಯವನ್ನು ಸ್ವಾಭಾವಿಕವಾಗಿ ಪಡೆದುಕೊಂಡು ಬಂದಿದೆ. 150 ಅಡಿ ಎತ್ತರದಿಂದ ಧುಮ್ಮಿಕ್ಕುವ ಈ ಜಲಪಾತ ಹಾರೆಯಂತೆ ಹರಿಯುತ್ತದೆ. ಇಲ್ಲಿ ಗುಹೆಯಲ್ಲಿರುವ ವೀರಭದ್ರೇಶ್ವರ ದೇವರನ್ನು ಪೂಜಿಸಲಾಗುತ್ತದೆ. ಇದನ್ನು ಕೃಷ್ಣದೇವರಾಯನ ಆಳ್ವಿಕೆ ಕಾಲದಲ್ಲಿ ನಿರ್ಮಿಸಲಾಗಿದೆ ಎಂದು ನಂಬಲಾಗಿದೆ.

ತರೀಕೆರೆ ತಾಲೂಕಿನ ಕಲ್ಲತ್ತಿಗಿರಿ ಫಾಲ್ಸ್ ಕೂಡ ರಮಣೀಯವಾಗಿದೆ. ಸುಮಾರು 122 ಮೀ. ಎತ್ತರದಿಂದ ಧುಮ್ಮಿಕ್ಕುವ ಈ ಜಲಧಾರೆ ವಿವಿಧ ಹಂತಗಳಲ್ಲಿ ಧುಮ್ಮಿಕ್ಕುವುದನ್ನು ಟ್ರೆಕ್ಕಿಂಗ್ ಮೂಲಕವೂ ವೀಕ್ಷಿಸಬಹುದು. ಕೆಮ್ಮಣ್ಣುಗುಂಡಿಯಿಂದ ಕೇವಲ 8 ಕಿ.ಮೀ. ಅಂತರದಲ್ಲಿರುವ ಹೆಬ್ಬೆ ಫಾಲ್ಸ್ ಕೂಡ ಅತ್ಯಾಕರ್ಷಕ. ಸುಮಾರು 300 ಅಡಿ ಎತ್ತರದಿಂದ 2 ಹಂತಗಳಲ್ಲಿ ಜಲಪಾತ ಧುಮ್ಮಿಕ್ಕುತ್ತದೆ. ಇನ್ನು 800ಕ್ಕೂ ಹೆಚ್ಚು ವರ್ಷ ಇತಿಹಾಸ ಹೊಂದಿರುವ ಅಮೃತಾಪುರದಲ್ಲಿ ಹೊಯ್ಸಳ ಅರಸ 2ನೇ ಬಲ್ಲಾಳ ನಿರ್ಮಿಸಿದ ಅಮೇತೇಶ್ವರ ದೇಗುಲ ಕಲಾವೈಭವಕ್ಕೆ ತಾಣ ಸಾಕ್ಷಿಯಾಗಿದೆ. ಚಿಕ್ಕಮಗಳೂರಿನಿಂದ 67 ಕಿ.ಮೀ. ಅಂತರದಲ್ಲಿದೆ.

ಜಿಲ್ಲೆಯನ್ನು ನಿತ್ಯಹರಿದ್ವರ್ಣವಾಗಿಸಿರುವುದು ಇಲ್ಲಿನ ದಟ್ಟಾರಣ್ಯ. ಚಿಕ್ಕಮಗಳೂರಿನಿಂದ 38 ಕಿ.ಮೀ. ದೂರದಲ್ಲಿರುವ ಭದ್ರಾ ಅಭಯಾರಣ್ಯವನ್ನು ಅನೇಕ ಗಿರಿಶೃಂಗಗಳು ಆವರಿಸಿವೆ. ಭದ್ರಾ ನದಿ ಹರಿಯುವ ಈ ಪ್ರದೇಶದಲ್ಲಿ ಬಗೆಬಗೆಯ ಪಕ್ಷಿ, ಮೃಗಗಳು ಸ್ವಚ್ಛಂದವಾಗಿ ಸುಳಿದಾಡುತ್ತಿವೆ. ಸರಿಸುಮಾರು 1968 ಕಿ.ಮೀ. ವಿಸ್ತಾರವಿರುವ ವನ್ಯಧಾಮದಲ್ಲಿ ಸುಮಾರು 150 ಕಿ.ಮೀ. ವರೆಗೆ ಸಂಚರಿಸಿ ವನ್ಯಜೀವಿಗಳನ್ನು ವೀಕ್ಷಿಸಲು ಅವಕಾಶವಿದೆ. ಕೆಲವು ನಿಷೇಧಿತ ಪ್ರದೇಶಗಳಿಗೆ ಅನುಮತಿ ಕಡ್ಡಾಯ. ಚಿಕ್ಕಮಗಳೂರು ಜಿಲ್ಲೆ ತರಿಕೆರೆ ತಾಲೂಕಿನ ಭದ್ರಾ ಜಲಾಶಯಕ್ಕೂ ಭೇಟಿ ನೀಡಿದರೆ ಮುದವುಣ್ಣಬಹುದು.



ದಕ್ಷಿಣ ಭಾರತದಲ್ಲಿ ಅದ್ವೈತ ಸಿದ್ಧಾಂತ ಪ್ರತಿಪಾದಿಸಿದ ಶಂಕರಾಚಾರ್ಯರು ನೆಲೆಸಿದ ಶೃಂಗೇರಿ ಪುರಾತನ ಶಾರದಾಂಬೆ ದೇಗುಲ ಭಕ್ತಿಪ್ರಧಾನ ಪುಣ್ಯಕ್ಷೇತ್ರ. ಇಲ್ಲಿನ ಶಾರದಾ ಪೀಠ ಮಠದಲ್ಲಿ ಸಂಸ್ಕೃತ ವೇದಾಧ್ಯಯನ ಹಾಗೂ ಸಂಸ್ಕೃತಿ ಕುರಿತ ಪಾಠ ಪ್ರವಚನಗಳನ್ನು ಪ್ರಧಾನವಾಗಿ ನಿರ್ವಹಿಸಲಾಗುತ್ತಿದೆ. ಪುರಾತನ ಶ್ರೀ ಶಾರದಾಂಬೆ ದೇಗುಲ, ಪಕ್ಕದಲ್ಲೇ ಹರಿಯುವ ತುಂಗೆಯಲ್ಲಿ ತುಳುಕಾಡುವ ಮತ್ಸ್ಯಗಳ ಸಮೂಹ ವಿಶೇಷ ಆಕರ್ಷಣೆ. ಮೈಸೂರು ಒಡೆಯರ್, ಹೊಯ್ಸಳ, ವಿಜಯನಗರ ಅರಸರು, ಮುಸ್ಲಿಂ ದೊರೆಗಳ ಇತಿಹಾಸದ ಮೇಲೂ ಶೃಂಗೇರಿ ಕ್ಷೇತ್ರ ಬೆಳಕು ಚೆಲ್ಲಿದೆ. ಆದಿಗುರು ಶಂಕರಾಚಾರ್ಯರು ಸ್ಥಾಪಿಸಿದ ಕಾಲಭೈರವ ದೇಗುಲ, ದುರ್ಗಾ ದೇಗುಲ, ಆಂಜನೇಯ ಮತ್ತು ಕಾಳಿಕಾಂಬ ದೇಗುಲಗಳು ಇಲ್ಲಿನ ಆಕರ್ಷಣೆ.

ವಿದ್ಯಾತೀರ್ಥ ಮಹಾಸ್ವಾಮೀಜಿ ಅವರು ದೇಗುಲದ ಮಹಾಗೋಪುರ ನಿರ್ಮಾಣಕ್ಕೆ ಕಾರಣರಾದವರು. ಪ್ರತಿವರ್ಷ ದಸರೆ ಸಂದರ್ಭ 10 ದಿನಗಳ ಕಾಲ ಧಾರ್ಮಿಕ ಆಚರಣೆಗಳು ಇಲ್ಲಿ ಅದ್ದೂರಿಯಾಗಿ ನಡೆಯುವುದರಿಂದ ವಿವಿದೆಡೆಯಿಂದ ಭಕ್ತಸಮೂಹ ಹರಿದು ಬರುತ್ತದೆ. ಇಲ್ಲಿನ ಮಲ್ಲಪ್ಪ ಬೆಟ್ಟದಲ್ಲಿ ಅತ್ಯಂತ ಪುರಾತನವಾದ ಹಾಗೂ ದ್ರಾವಿಡ ಶೈಲಿಯಲ್ಲಿ ನಿರ್ಮಿಸಿದ ಮಲಹನಿಕರೇಶ್ವರ ದೇಗುಲವಿದೆ. ಸುಂದರ ದೇಗುಲದ ನಡುವೆ ಜಲಧಾರೆಗಳ ಓಡಾಟ. ಕಾನನದ ನಡುವೆ ವಿಹಂಗಮ ನೋಟ. ಸ್ವಚ್ಛಂದ ಪ್ರಕೃತಿಯ ನಡುವೆ ಮನಸ್ಸಿಗೆ ಉಲ್ಲಾಸ ನೀಡುವ ವಾತಾವರಣ ನೋಡಲು ಬಲು ಚಂದ ಬನ್ನಿ ಒಮ್ಮೆ. ಕಲ್ಲತ್ತಿಗಿರಿ ಫಾಲ್ಸ್ ನೋಡಲು..

**- ರಮೇಶ ನಾಯ್ಕ,** ಉಪ್ಪುಂದ, ಬೈಂದೂರು

## ಎಲ್ಲರ ಮನೆಯ ದೋಸೇನೂ....!?

ಎಲ್ಲರ ಮನೆಯ ದೋಸೇನೂ ತೂತು ಅಲ್ಲ ತಪ್ಪು, ಯಾಕೆ ಗೊತ್ತ ಕೆಲವರ ಮನೆಯ ದೋಸೆಗೆ ತೂತೇ ಇರಲ್ಲ ಯಾಕೆಂದರೆ ದೋಸೆ ಮಾಡುವ ಪದ್ಧತಿ ಪ್ರಕಾರ ಮಾಡಿದರೆ ತೂತಾಗಬಹುದು ಆದರೆ ಬೆಳಿಗೆ ದೋಸೇನೇ ಬೇಕೆಂದು ಹಟ ಮಾಡುವವರಿಗಾಗಿ ತಕ್ಷಣ ಮಾಡಬಹುದಾದ ದೋಸೆಗೆ ಇತ್ತೀಚೆಗೆ ತೂತೇ ಇರಲ್ಲ... ಎಲ್ಲರ ಮನೆಯ ಮನೆಯ ದೋಸೆಗೆ ತೂತು ಎಂಬ ಮಾತಿಗೂ ನಮ್ಮ ಬದುಕಿಗೂ ಅವಿನಾಭಾವ ಸಂಬಂಧ ಇದೆ. ಎಲ್ಲರ ಮನೆಯಲ್ಲೂ ಸಮಸ್ಯೆಗಳು ಇರುತ್ತವೆ ಸಮಸ್ಯೆ ಇಲ್ಲದ ಮನೆಯಿಲ್ಲ ತೂತು ಇಲ್ಲದ ದೋಸೆ ಇಲ್ಲ.


ಆದರೆ ಎಲ್ಲರ ಮನೆಯ ದೋಸೆ ಒಂದೇ ಆಕಾರ ಇರುವುದಿಲ್ಲ ಕೆಲವರ ಮನೆಯ ದೋಸೆ ತ್ರಿಕೋನ ಚೌಕ ಆಯತ ಹೀಗೆ ಹಲವಾರು ಆಕಾರದಲ್ಲಿ ಇರಬಹುದು. ವೃತ್ತಾಕಾರದಲ್ಲೇ ಇರಬೇಕೆಂಬ ನಿಯಮವಿಲ್ಲ..... ಅವರವರ ಮನೆಯ ಸಮಸ್ಯೆ ಒಂದೇ ಬಗೆ ಇರುವುದಿಲ್ಲ... ದೊಡ್ಡ ಸಮಸ್ಯೆ ಚಿಕ್ಕ ಸಮಸ್ಯೆ ಬಗೆಹರಿಯದ ಸಮಸ್ಯೆ ಬಗೆ ಹರಿದರೂ ಮತ್ತೆ ಮತ್ತೆ ಬರುವ ಸಮಸ್ಯೆ ಸಾಯುವವರೆಗೂ ತಪ್ಪದ ಸಮಸ್ಯೆ. ಹೀಗೆ... ಅದರಂತೆ ಎಲ್ಲರ ಮನೆಯ ದೋಸೆಯ ತೂತು ಕೂಡ ಒಂದೇ ಆಕಾರದಲ್ಲಿ ಇರುವುದಿಲ್ಲ. ಕೆಲವು ತೂತುಗಳು ಚಿಕ್ಕವು ದೊಡ್ಡವು ಇನ್ನೂ ಕೆಲವು ಮುಚ್ಚಿರುತ್ತವೆ. ಹಾಗಾಗಿ ಎಲ್ಲರ ದೋಸೆಗೆ ತೂತುಗಳಿದ್ದರೂ ಒಂದೇ ಬಗೆಯ ತೂತುಗಳು ಇರುವುದಿಲ್ಲ ಅಂದರೆ... ಮನೆಯಲ್ಲಿ ಇರುವವರ ಮನದಲ್ಲಿ ಇರಬಹುದಾದ ಆತಂಕ ಅಹಂಕಾರ ಪ್ರೀತಿ ಕರುಣೆ ಹೀಗೆ ಆದರೆ ಕೆಲವರಿಗೆ ಇದ್ಯಾವುದು ಇರುವುದಿಲ್ಲ ಇರಬೇಕೆಂಬ ನಿಯಮವೇನು ಇಲ್ಲ ಹಲವಾರು ಆಕಾರದ ದೋಸೆಗಳಿದ್ದು ತೂತುಗಳು ಇದ್ದರೂ ಇಲ್ಲದಿದ್ದರೂ ಸಾಕ್ಷಾತ್ಕಾರವೆಂಬ ಚಟ್ನಿ ಪಲ್ಯೆಯಿಂದ ಸವಿದರೆ ಬದುಕು ಸುಂದರ... ಎಲ್ಲರ ಮನೆಯಲ್ಲೂ ಇರುವ ಮುರ್ನಾಲ್ಕು ಜನರಲ್ಲಿ ಮನೆಯೊಂದು ಮೂರು ಬಾಗಿಲು ಮನೆಯಲ್ಲಿ ಮೂವರು ಸಾವಿರಾರು ಕಿಟಕಿ ಬಾಗಿಲುಗಳು ಇರುತ್ತವೆ... ಈ ದೋಸೆಯ ತೂತಿಗೂ ನಮ್ಮ ಸಂಸಾರಕ್ಕೂ ಸಾಮ್ಯತೆ ಇದೆ. ಅವರೂ ದೋಸೆ ಮಾಡ್ತಾರೆ ಇವರೂ ದೋಸೆಮಾಡ್ತಾರೆ ಅವರೂ ಮದುವೆ ಆಗ್ತಾರೆ ಇವರೂ ಮದುವೆ ಆಗ್ತಾರೆ ಆದರೆ ಅವರಿವರ ಮನೆಯ ದೋಸೆ ಒಂದೇ ಆಕಾರದಲ್ಲಿ ಇರುವುದಿಲ್ಲ ತೂತು ಕೂಡ ಒಂದೇ ಬಗೆ ಇರುವುದಿಲ್ಲ ಎಲ್ಲರ ಮನೆಯ ದೋಸೆ ತೂತೇ ಅಂದರೆ ಎಲ್ಲರ ಮನೆಯ ಸಮಸ್ಯೆ ಒಂದೇ ರೀತಿ ಇರುವುದಿಲ್ಲವೋ ಹಾಗೆ ಎಲ್ಲರ ಮನೆಯ ದೋಸೆ ಒಂದೇ ತರಹ ಹಾಗೂ ಎಲ್ಲರ ಮನೆಯ ದೋಸೆಯ ತೂತುಗಳು ಕೂಡ ಒಂದೇ ತರಹ ಇರಲು ಸಾಧ್ಯವಿಲ್ಲ ಬಗೆಬಗೆಯ ದೋಸೆಗಳು ಬಗೆಬಗೆಯ ಸಮಸ್ಯೆಗಳು ವಿಧವಿಧವಾದ ಭಾವನೆಗಳು ವಿಧವಿಧವಾದ ದೋಸೆಯ ತೂತುಗಳು... ಆದರೆ ನಮ್ಮ ಸಮಸ್ಯೆ ನಮ್ಮೊಳಗಿನ ಭಾವನೆಗಳು ಬೇರೆ ಯಾರಿಗೂ ತಿಳಿಯಬಾರದೆಂದು ಕೆಲವರು ಮುಖವಾಡ ಧರಿಸಿರುತ್ತಾರೆ ಹಾಗಾಗಿ ಇತ್ತೀಚಿಗೆ ತೂತುಗಳೇ ಇಲ್ಲದ ದೋಸೆ ಮಾಡಲು ಪ್ರಯತ್ನಿಸುತ್ತಿದ್ದಾರೆ. ಎಷ್ಟೇ ಪ್ರಯತ್ನ ಮಾಡಿದರೂ ದೋಸೆಗೆ ತೂತುಗಳು ಬಹಳಷ್ಟು ಇರದಿದ್ದರೂ ಕೆಲವಂದಿಷ್ಟಾದರೂ ಇರಲೇ ಬೇಕು ಇರುತ್ತವೆ ಕೂಡ. ತೂತೇ ಇಲ್ಲದ ದೋಸೆ ಇರಲು ಸಾಧ್ಯವಿಲ್ಲ ಎಂದಾದರೆ ಸಮಸ್ಯೆ ಇಲ್ಲದ ಬದುಕೇ ಇಲ್ಲ... ದೋಸೆಯ ಆಕಾರ ಬದುಕಿಗೆ ಹೋಲಿಕೆಯಾದರೆ ತೂತುಗಳು ಆ ಬದುಕಲ್ಲಿ ಬರುವ ಸಮಸ್ಯೆಗಳನ್ನು ತಿಳಿಸುತ್ತವೆ. ಒಂದು ಬದುಕು ಹಲವಾರು ಸಮಸ್ಯೆಗಳು ಒಂದು ದೋಸೆ ಅನೇಕ ತೂತುಗಳು ಸಾಧ್ಯವಾದಷ್ಟು ತೂತುಗಳು ಕಡಿಮೆ ಇರುವ ದೋಸೆ ಆಗಲಿ. ಅಂದರೆ ಸಮಸ್ಯೆಗಳು ಕಡಿಮೆ ಇರುವಂತೆ ನಮ್ಮ ಬದುಕನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಹಾಗಂತ ತೂತುಗಳೇ ಇಲ್ಲದ ದೋಸೆ ಸಾಧ್ಯವಿಲ್ಲ ಅದು ದೋಸೆ ಅನಿಸುವುದಿಲ್ಲ ಬದುಕು ಕೂಡ ಹಾಗೆನೆ...



**- ಮಧುನಾಯ್ಕ.** ಲಂಬಾಣಿ

# ಭಾವ ಲಹರಿ

# ಬಡ ರೋಗಿಗಳೇ ಯಾಕೆ ಬ್ರೈನ್ ಡೆಡ್ ಆಗುತ್ತಾರೆ?



- ನಗರಗಳಲ್ಲಿನ ದೊಡ್ಡ ಆಸ್ಪತ್ರೆಗಳಿಗೆ ತಲುಪುವ ವೇಳೆಗೆ ಸ್ಥಿತಿ ಗಂಭೀರವಾಗಿ, ಮೆದುಳು ಸಂಪೂರ್ಣ ನಿಶ್ಚೇಷ್ಟವಾಗುತ್ತದೆ. ಮಧ್ಯಮ ಮತ್ತು ಶ್ರೀಮಂತ ವರ್ಗದಲ್ಲಿ ಖಾಸಗಿ ಆಂಬ್ಯುಲೆನ್ಸ್, ವಿಮಾ ಸೌಲಭ್ಯ ಹಾಗೂ ತ್ವರಿತ ಚಿಕಿತ್ಸೆ ದೊರೆತರೂ, ಬಡವರಲ್ಲಿ ಅದು ಕಷ್ಟ. ಹೆಚ್ಚಿನ ಬಡ ಕುಟುಂಬಗಳಲ್ಲಿ ರಕ್ತದೊತ್ತಡ, ಮಧುಮೇಹ, ಹೃದಯ ಸಂಬಂಧಿ ಕಾಯಿಲೆಗಳಂತಹ ಅಪಾಯಕಾರಕ ಅಂಶಗಳು ಸಮಯಕ್ಕೆ ಪತ್ತೆಯಾಗುವುದಿಲ್ಲ.

ದೇಶದ ಕೆಲವು ಆಸ್ಪತ್ರೆಗಳಲ್ಲಿ ಬ್ರೈನ್ ಡೆಡ್ ಪ್ರಕರಣಗಳನ್ನು ತಪ್ಪಾಗಿ ಗುರ್ತಿಸಿ ಶ್ರೀಮಂತರಿಗೆ ಬದಲಿ ಅಂಗ ಒದಗಿಸುವ ದಂಧೆ ಆರಂಭವಾಗಿದೆ ಎನ್ನುವ ದೂರು ಸುಪ್ರೀಂ ಕೋರ್ಟ್‌ಗೆ ಬಂದಿದೆ. ಈ ಹಿನ್ನೆಲೆಯಲ್ಲಿ ಬ್ರೈನ್ ಡೆಡ್ ಟ್ರಾನ್ಸ್ ಪ್ಲಾಂಟೇಷನ್ ಆಫ್ ಆರ್ಗನ್ಸ್ ಅಂಡ್ ಟಿಶ್ಯೂಸ್ ಆಕ್ಟ್ (ಥೋಟಾ-1994) ಬಗ್ಗೆ ಹೊಸ ಚರ್ಚೆ ಆರಂಭವಾಗಿದೆ.

ಬ್ರೈನ್ ಡೆಡ್ ಅಥವಾ ಮೆದುಳು ಸಾಯುವ ಪರಿಸ್ಥಿತಿ ಒಂದು ವೈದ್ಯಕೀಯವಾಗಿ ಸಂಕೀರ್ಣ ಹಾಗೂ ಸಾಮಾಜಿಕವಾಗಿ ಸೂಕ್ಷ್ಮವಾದ ವಿಷಯ. ಜೀವಾವಶ್ಯಕ ಅಂಗಾಂಗಗಳ ಸಹಾಯವಿಲ್ಲದೆ ಮೆದುಳು ಸಂಪೂರ್ಣವಾಗಿ ಕಾರ್ಯನಿರ್ವಹಿಸದ ಸ್ಥಿತಿಯನ್ನು ಬ್ರೈನ್ ಡೆಡ್ ಎಂದು ಕರೆಯಲಾಗುತ್ತದೆ. ವೈದ್ಯಕೀಯ ದೃಷ್ಟಿಯಿಂದ ಇದು ಎಲ್ಲ ವರ್ಗದ ಜನರಲ್ಲಿ ಸಂಭವಿಸಬಹುದಾದರೂ, ಅನೇಕ ಅಂಕಿಅಂಶಗಳು ಮತ್ತು ಅನುಭವಗಳು ಬಡವರಲ್ಲಿ ಇದು ಹೆಚ್ಚು ಸಾಮಾನ್ಯವಾಗಿರುವುದನ್ನು ಸೂಚಿಸುತ್ತವೆ.

ಇದಕ್ಕೆ ವೈದ್ಯಕೀಯ ಕಾರಣ ಅಲ್ಲದೇ ಬಡತನ, ಸಾಮಾಜಿಕ-ಆರ್ಥಿಕ ಅಸಮಾನತೆ, ಆರೋಗ್ಯ ವ್ಯವಸ್ಥೆಯ ಅಸಮಾನತೆ ಮತ್ತು ಜೀವನ ಶೈಲಿಯ ಬಿಕ್ಕಟ್ಟುಗಳಲ್ಲಿದೆ. ಹೆಚ್ಚಿನ ಭಾರಿ ಬಡ ಜನರಿಗೆ ತುರ್ತು ವೈದ್ಯಕೀಯ ನೆರವು ತಕ್ಷಣ ಸಿಗುವುದಿಲ್ಲ. ರಸ್ತೆ ಅಪಘಾತ, ತೀವ್ರ ತಲೆಗಾಯ, ಅಥವಾ ಸ್ಟ್ರೋಕ್‌ಗಳಿಗೆ ತಕ್ಷಣ ಚಿಕಿತ್ಸೆ ದೊರೆಯದೇ ಹೋದರೆ ಮೆದುಳಿನ ಹಾನಿ ಶಾಶ್ವತವಾಗುತ್ತದೆ.

ನಗರಗಳಲ್ಲಿನ ದೊಡ್ಡ ಆಸ್ಪತ್ರೆಗಳಿಗೆ ತಲುಪುವ ವೇಳೆಗೆ ಸ್ಥಿತಿ ಗಂಭೀರವಾಗಿ, ಮೆದುಳು ಸಂಪೂರ್ಣ ನಿಶ್ಚೇಷ್ಟವಾಗುತ್ತದೆ. ಮಧ್ಯಮ ಮತ್ತು ಶ್ರೀಮಂತ ವರ್ಗದಲ್ಲಿ ಖಾಸಗಿ ಆಂಬ್ಯುಲೆನ್ಸ್, ವಿಮಾ ಸೌಲಭ್ಯ ಹಾಗೂ ತ್ವರಿತ ಚಿಕಿತ್ಸೆ ದೊರೆತರೂ, ಬಡವರಲ್ಲಿ ಅದು ಕಷ್ಟ. ಹೆಚ್ಚಿನ ಬಡ ಕುಟುಂಬಗಳಲ್ಲಿ ರಕ್ತದೊತ್ತಡ, ಮಧುಮೇಹ, ಹೃದಯ ಸಂಬಂಧಿ ಕಾಯಿಲೆಗಳಂತಹ ಅಪಾಯಕಾರಕ ಅಂಶಗಳು ಸಮಯಕ್ಕೆ ಪತ್ತೆಯಾಗುವುದಿಲ್ಲ.

ನಿಯಮಿತ ತಪಾಸಣೆ, ಔಷಧೋಪಚಾರ, ಆಹಾರ ನಿಯಂತ್ರಣ ಇಲ್ಲದಿದ್ದಾಗ ಇಂತಹ ಕಾಯಿಲೆಗಳು ತೀವ್ರ ರೂಪ ಪಡೆದು ಮೆದುಳಿನ ರಕ್ತಸ್ರಾವ ಅಥವಾ ಸ್ಟ್ರೋಕ್ ಉಂಟುಮಾಡುತ್ತವೆ. ಇದರಿಂದ ಬ್ರೈನ್ ಡೆಡ್ ಸಂಭವಿಸುವ ಸಾಧ್ಯತೆ ಹೆಚ್ಚುತ್ತದೆ.

ಭಾರತದಲ್ಲಿ, 1994 ನಲ್ಲಿ ರೋಗಿಯ ಬ್ರೈನ್ ಡೆಡ್ ಕುರಿತು ನಿರ್ಧಾರದ ಘೋಷಣೆಯ ಮಾನದಂಡಗಳನ್ನು ನಿಗದಿಪಡಿಸಲಾಗಿದೆ. ಕಾಯ್ದೆಯ ಸೆಕ್ಷನ್ 2(ಜ) ಬ್ರೈನ್ ಸ್ಟೆಮ್ ಡೆತ್‌ನ/ವ್ಯಾಖ್ಯಾನವನ್ನು ನೀಡುತ್ತದೆ ಮತ್ತು ಸೆಕ್ಷನ್ 3(6) ಪ್ರಕಾರ, ಸ್ಥಳೀಯ ವೈದ್ಯ, ಖಾಸಗಿ ವೈದ್ಯ, ನ್ಯೂರಾಲಜಿಸ್ಟ್/ನ್ಯೂರೋಸರ್ಜನ್ ಸೇರಿದಂತೆ ವೈದ್ಯರ ಮಂಡಲಿಯ ಮೂಲಕ ಘೋಷಿಸಬೇಕೆಂದು ಸೂಚಿಸಿದೆ.

ಈ ಪ್ರಕ್ರಿಯೆಯನ್ನು ಎರಡು ಬಾರಿ 6 ಗಂಟೆಗಳ ಅಂತರದಲ್ಲಿ ಪರಿಶೀಲಿಸಬೇಕಾಗುತ್ತದೆ. ನಿಕಟ ಬಂಧು ಅಲ್ಲದವರಿಗೆ ಜೀವಂತ ವ್ಯಕ್ತಿ ಅಂಗಾಂಗ ದಾನ ಮಾಡಲು ಜಿಲ್ಲಾಮಟ್ಟದ ಅಧಿಕೃತ ಸಮಿತಿಯಿಂದ ಅನುಮತಿ ಪಡೆಯಬೇಕು. ವಾಣಿಜ್ಯ ಉದ್ದೇಶಗಳನ್ನು ತಡೆಯುವುದೇ ಈ ನಿಯಮದ ಗುರಿ.

ಬ್ರೈನ್ ಡೆಡ್ ಟ್ರಾನ್ಸ್ ಪ್ಲಾಂಟೇಷನ್ ಆಫ್ ಆರ್ಗನ್ಸ್ ಅಂಡ್ ಟಿಶ್ಯೂಸ್ ಆಕ್ಟ್ ಥೋಟಾ-1994 ಕಾಯ್ದೆಯ ವಿಚಾರದಲ್ಲಿ ಇತ್ತೀಚೆಗೆ ಸುಪ್ರೀಂ ಕೋರ್ಟ್ ಮುಂದೆ ಬಂದ ಪ್ರಕರಣವೊಂದು ದೇಶದ ಗಮನ ಸೆಳೆದಿದೆ. ದೇಶದ ಕೆಲವು ಆಸ್ಪತ್ರೆಗಳಲ್ಲಿ ಬ್ರೈನ್ ಡೆಡ್ ಪ್ರಕರಣಗಳನ್ನು ತಪ್ಪಾಗಿ ಗುರ್ತಿಸಿ ಶ್ರೀಮಂತರಿಗೆ ಬದಲಿ ಅಂಗ ಒದಗಿಸುವ ದಂಧೆ ಆರಂಭವಾಗಿದೆ ಎನ್ನುವ ದೂರು ಸುಪ್ರೀಂ ಕೋರ್ಟ್‌ಗೆ ಬಂದಿದೆ.

ಸುಪ್ರೀಂ ಮೆಟ್ಟಿಲೇರಿರುವ ಕೇರಳದ ಡಾ. ಗಣಪತಿ ಎಂಬುವರು ಸದ್ಯ ಬಳಕೆಯಲ್ಲಿರುವ ತೋಟಾ ಕಾಯ್ದೆಯ ಸೆಕ್ಷನ್ 2 (ಡಿ) ಮತ್ತು 2 (ಇ) ಭಾರತದಲ್ಲಿರುವ ಸದ್ಯ ಬ್ರೈನ್ ಡೆಡ್ ಪರಿಕಲ್ಪನೆಗೆ ವಿರುದ್ಧ ಎಂದಿದ್ದಾರೆ. ಬೇರೆ ದೇಶಗಳಲ್ಲಿ ಬ್ರೈನ್‌ಸ್ಟೆಮ್‌ಡೆತ್ ನ ಅರ್ಥ ಮತ್ತು ವ್ಯಾಖ್ಯಾನ ಬೇರೆ ಎಂದು ಕೋರ್ಟ್‌ನ ಗಮನಕ್ಕೆ ತಂದಿದ್ದಾರೆ. ಯಾವ ಹಂತದಲ್ಲಿ ರೋಗಿಯನ್ನು ಬ್ರೈನ್‌ಸ್ಟೆಮ್‌ಡೆತ್ ಎಂದು ಚಿಕಿತ್ಸೆ ನೀಡುತ್ತಿರುವ ವೈದ್ಯರು ಘೋಷಿಸಬಹುದು ಎನ್ನುವ ಕುರಿತು ಥೋಟ ಕಾಯಿದೆಯ ಸೆಕ್ಷನ್ 2 (ಡಿ)ಯಲ್ಲಿ ವಿವರಣೆ ಇದೆ.


ದೇಹದ ಎಲ್ಲಾ ಕಾರ್ಯಗಳನ್ನು ನಿಯಂತ್ರಿಸುವ ಮೆದುಳು ಶಾಶ್ವತವಾಗಿ ಕೆಲಸ ಮಾಡುವುದನ್ನು ನಿಲ್ಲಿಸಿದೆ. ಮತ್ತೆ ಅದು ಪುನಹ ಕೆಲಸ ಮಾಡುವುದಿಲ್ಲ ಎನ್ನುವ ಹಂತ ತಲುಪಿದಾಗ ಸೆಕ್ಷನ್ 2(ಡಿ) ಗಮನಕ್ಕೆ ಬರುತ್ತದೆ. ಸೆಕ್ಷನ್ 2 (ಇ) ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಪಲ್ಮನರಿ ಸೆನ್ಸ್ ಕುರಿತಾಗಿ ಹೇಳುತ್ತದೆ. ರೋಗಿಯು ಕೋಮಾ ಸ್ಥಿತಿಯಲ್ಲಿದ್ದು ಆತ ಜೀವಂತವಾಗಿದ್ದಾನೆ ಎಂಬುದನ್ನು ವೈಜ್ಞಾನಿಕವಾಗಿ ಸಾಬೀತು ಪಡಿಸಬೇಕಾದ ಕಡೆ ವೈದ್ಯರು ಗಮನ ನೀಡಬೇಕು.

ಕಾಯ್ದೆಯ ಸೆಕ್ಷನ್ 2(ಜ) ಪ್ರಕಾರ ಬ್ರೈನ್ ಡೆಡ್ ಅನ್ನು ಕಾನೂನಾತ್ಮಕವಾಗಿ ಸಾವು ಎಂದು ಭಾರತದಲ್ಲಿ ಪರಿಗಣಿಸಲಾಗಿದೆ. ಇದರಿಂದ ಮೆದುಳು ಕಾರ್ಯ ನಿಲ್ಲಿಸಿದ ನಂತರ, ಆದರೆ ಹೃದಯ, ಶ್ವಾಸ ಕೋಶಗಳು ಯಂತ್ರದ ಸಹಾಯದಿಂದ ಕೆಲಸ ಮಾಡುವ ಸ್ಥಿತಿಯಲ್ಲಿಯೇ, ಅಂಗಾಂಗ ದಾನಕ್ಕೆ ಅವಕಾಶ ನೀಡಲಾಗಿದೆ. ಅರ್ಜಿದಾರರ ಪ್ರಕಾರ 2012ರಲ್ಲಿ ಕೇರಳದ ಹೈಟೆಕ್ ಆಸ್ಪತ್ರೆಗಳಲ್ಲಿ 9 ಬ್ರೈನ್ ಡೆಡ್ ಕೇಸುಗಳು ವರದಿಯಾಗಿತ್ತು. 2015ರಲ್ಲಿ ಅದರ ಸಂಖ್ಯೆ 76 ಕ್ಕೆ ಏರಿತ್ತು.

ಜೊತೆಗೆ ಹೆಚ್ಚಿನವರು ಅನಾಥರು, ಕಡುಬಡವರು, ಮತ್ತು ಅನಕ್ಷರಸ್ಥರಾಗಿದ್ದರು. ಇದಕ್ಕೆ ಬ್ರೈನ್ ಡೆಡ್ ಎಂಬ ಪದದ ವ್ಯಾಖ್ಯಾನ ಪರಿಪೂರ್ಣವಾಗಬೇಕಾದರೆ ಸಂಸತ್ತು ಈ ಸಂಬಂಧ ಕಾಯ್ದೆ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯ ಪಟ್ಟಿದೆ.

ವರದಿಗಳ ಪ್ರಕಾರ ಬಡ ಜನರು ಸಾಮಾನ್ಯವಾಗಿ ಅಪಾಯಕಾರಿ ಉದ್ಯೋಗಗಳಲ್ಲಿ ತೊಡಗಿರುತ್ತಾರೆ. ಕಟ್ಟಡ ಕಾಮಗಾರಿಗಳು, ಗಣಿ ಪ್ರದೇಶಗಳು, ಕಾರ್ಖಾನೆಗಳು, ಸಾರಿಗೆ ಕ್ಷೇತ್ರ. ಇಲ್ಲಿ ತಲೆಗಾಯ, ವಿದ್ಯುತ್ ಶಾಕ್, ಭಾರವಾದ ವಸ್ತು ಬೀಳುವುದು ಮುಂತಾದ ಅಪಘಾತಗಳು ಹೆಚ್ಚಾಗಿ ಸಂಭವಿಸುತ್ತವೆ.

ಸುರಕ್ಷತಾ ಮಾನದಂಡಗಳನ್ನು ಪಾಲಿಸಲು ಸಾಕಷ್ಟು ವ್ಯವಸ್ಥೆ ಇಲ್ಲದೆ ಇರುವುದರಿಂದ ಮೆದುಳಿಗೆ ಗಂಭೀರ ಗಾಯಗಳು ಆಗುತ್ತವೆ. ಗ್ರಾಮೀಣ ಮತ್ತು ಹಿಂದುಳಿದ ಪ್ರದೇಶಗಳಲ್ಲಿ ನ್ಯೂರೋಸರ್ಜರಿ, ಐಸಿಯು, ವೆಂಟಿಲೇಟರ್, ಸ್ಕ್ಯಾನ್‌ಗಳಂತಹ ಉನ್ನತ ಸೌಲಭ್ಯಗಳ ಕೊರತೆ ಇದೆ. ಈ ಕಾರಣದಿಂದ ರೋಗಿಯನ್ನು ದೊಡ್ಡ ನಗರಕ್ಕೆ ಕರೆದೊಯ್ಯುವ ಹೊತ್ತಿಗೆ ಜೀವಾಪಾಯ ಹೆಚ್ಚುತ್ತದೆ. ಮಿದುಳು ಜೀವಂತವಾಗಿಡುವ ಅವಕಾಶ ಕಡಿಮೆಯಾಗುತ್ತದೆ.



ಶ್ರೀಮಂತ ವರ್ಗದವರು ಐಸಿಯುಗಳಲ್ಲಿನ ಖರ್ಚುಗಳನ್ನು ದೀರ್ಘಕಾಲ ತಡೆದುಕೊಳ್ಳುತ್ತಾರೆ. ಆಧುನಿಕ ತಂತ್ರಜ್ಞಾನಗಳಿಂದ ಇವರ ಜೀವ ಉಳಿಸುವ ಪ್ರಯತ್ನ ಮುಂದುವರಿಯುತ್ತದೆ. ಇದರ ಫಲವಾಗಿ ಬ್ರೈನ್ ಡೆಡ್ ಸ್ಥಿತಿ ತಕ್ಷಣ ವರದಿಯಾಗುವುದಿಲ್ಲ. ಆದರೆ ಬಡವರಲ್ಲಿ ಚಿಕಿತ್ಸೆ ಸೀಮಿತವಾಗಿರುವುದರಿಂದ, ಇಂತಹ ಪ್ರಕರಣಗಳು ಹೆಚ್ಚಾಗಿ ದಾಖಲಾಗುತ್ತವೆ. ಇದರಿಂದ ಬಡವರಲ್ಲಿ ಇದು ಸಾಮಾನ್ಯವೆಂದು ಕಾಣುತ್ತದೆ ಎನ್ನುವ ವಾದವು ಸಹ ಇದೆ.

ಸಾರ್ವಜನಿಕ ಆಸ್ಪತ್ರೆಗಳಲ್ಲಿ ಬ್ರೈನ್ ಡೆಡ್ ದೃಢೀಕರಣ ಹೆಚ್ಚು ಪಾರದರ್ಶಕವಾಗಿ ನಡೆಯುವುದರಿಂದ ಅವರ ದೇಹದಿಂದ ಅಂಗಾಂಗಗಳನ್ನು ಪಡೆದುಕೊಳ್ಳಲಾಗುತ್ತದೆ. ಶ್ರೀಮಂತ ರೋಗಿಗಳಲ್ಲಿ ಕುಟುಂಬಗಳು ಹೆಚ್ಚಿನ ಒತ್ತಡ ತರುವುದರಿಂದ ಅಥವಾ ಖಾಸಗಿ ಆಸ್ಪತ್ರೆಗಳು ಸೂಕ್ಷ್ಮವಾಗಿ ವರ್ತಿಸುವುದರಿಂದ ಇದನ್ನು ಮುಚ್ಚಿಡಲಾಗುತ್ತದೆ ಎನ್ನುತ್ತಾರೆ ಕೆಲ ವೈದ್ಯರು.

ಗ್ರಾಮೀಣ ಪ್ರದೇಶಗಳು ಆರೋಗ್ಯ ಸೌಕರ್ಯದಲ್ಲಿ ಹಿಂದುಳಿದಿವೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲೇ ತುರ್ತು ನೆರವು ಸಿಗದಿದ್ದರೆ, ತುರ್ತು ಚಿಕಿತ್ಸೆಗೆ ಅವಲಂಬಿತವಾಗಿರುವ ಬಡ ಜನರು ಬ್ರೈನ್ ಡೆಡ್‌ಗೆ ಹೆಚ್ಚು ಬಲಿಯಾಗುತ್ತಾರೆ ಎನ್ನುತ್ತವೆ ಅಂಕಿ ಅಂಶಗಳು. ಒಬ್ಬ ಬಡ ಕುಟುಂಬದ ಸದಸ್ಯ ಬ್ರೈನ್ ಡೆಡ್ ಸ್ಥಿತಿಗೆ ತಲುಪಿದರೆ, ಅದು ಆ ಕುಟುಂಬಕ್ಕೆ ಕೇವಲ ವೈದ್ಯಕೀಯ ಸಮಸ್ಯೆಯಲ್ಲ, ಆರ್ಥಿಕ ಮತ್ತು ಸಾಮಾಜಿಕ ದುರಂತವೂ ಆಗುತ್ತದೆ.

ಚಿಕಿತ್ಸೆ ವೆಚ್ಚ ತಾಳಲಾರದ ಕುಟುಂಬ ಸಾಲಕ್ಕೆ ಜಾರುತ್ತದೆ. ಕೆಲವೊಮ್ಮೆ ದಾನಕ್ಕಾಗಿ ಅಂಗಾಂಗ ನೀಡುವ ಒತ್ತಡವೂ ಬಡ ಕುಟುಂಬವನ್ನು ಬಾಧಿಸುತ್ತದೆ. ಈಗಿರುವ 1994 (ಥೋಟಾ) ಕಾಯಿದೆಯಲ್ಲಿ ಏನು ಬದಲಾವಣೆಗಳು ಆಗಬೇಕು ಎನ್ನುವ ಕೂಗು ಎದ್ದಿದೆ. ಭಾರತದಲ್ಲಿ ಅಂಗಾಂಗ ದಾನವನ್ನು ಕಾನೂನುಬದ್ಧವಾಗಿ ನಿಯಂತ್ರಿಸಲು ರೂಪಿಸಲ್ಪಟ್ಟಿದ್ದು, ಇದರ ಮುಖ್ಯ ಗುರಿ ಅಕ್ರಮ ಅಂಗಾಂಗ ವ್ಯಾಪಾರವನ್ನು ತಡೆದು ಮೆದುಳು ಸಾಯುವಿಕೆಯನ್ನು ಕಾನೂನಾತ್ಮಕವಾಗಿ ಸಾವು ಎಂದು ಗುರುತಿಸಿ, ಅವಶ್ಯವಿದ್ದವರಿಗೆ ಅಂಗಾಂಗ ಜೋಡಿಸುವ ಪಾರದರ್ಶಕ ವ್ಯವಸ್ಥೆ ರೂಪಿಸುವುದಾಗಿದೆ.

ಆದರೆ ಮೂರು ದಶಕಗಳ 1994 (ಥೋಟಾ) ಕಾಯಿದೆಯ ಅನುಭವದಿಂದಾಗಿ ಕೆಲವು ತಿದ್ದುಪಡಿಗಳ ಅಗತ್ಯ ಇಂದು ಬಹಳ ಸ್ಪಷ್ಟವಾಗಿದೆ, ಉದಾಹರಣೆಗೆ ಬ್ರೈನ್-ಡೆಡ್ ಘೋಷಣೆಯ ಪ್ರಕ್ರಿಯೆಯಲ್ಲಿ ಪ್ರಸ್ತುತ ನಾಲ್ಕು ವೈದ್ಯರಿಂದ ಎರಡು ಹಂತದ ದೃಢೀಕರಣ ಕಡ್ಡಾಯವಾಗಿದ್ದರೂ ಈ ಸಂಬಂಧ ವಿವಿಧ ರಾಜ್ಯಗಳು ವಿವಿಧ ರೀತಿಯ ಮಾನದಂಡ ರೂಪಿಸಿಕೊಂಡಿವೆ.

ಇದನ್ನು ರದ್ದುಗೊಳಿಸಿ ರಾಷ್ಟ್ರೀಯ ಮಟ್ಟದ ಏಕೀಕೃತ ಮಾನದಂಡ ರೂಪಿಸಿ ವೀಡಿಯೋ ದಾಖಲೆ ಮತ್ತು ಡಿಜಿಟಲ್ ದಾಖಲಾತಿ ಕಡ್ಡಾಯಗೊಳಿಸುವುದು ಮತ್ತು ಸಾರ್ವಜನಿಕ ವೆಬ್‌ಸೈಟ್‌ನಲ್ಲಿ ಮಾಹಿತಿ ನೀಡುವುದು ಅಗತ್ಯ. ಜೊತೆಗೆ ಕುಟುಂಬ ಸದಸ್ಯರಿಗೆ ಸಂಪೂರ್ಣ ಮಾಹಿತಿ ಹಂಚಿಕೆ ಕಾನೂನುಬದ್ಧವಾಗಿ ಬಲಪಡಿಸಬೇಕಿದೆ.

ಏಕೆಂದರೆ ಅನಕ್ಷರಸ್ಥರು ಇನ್ನೂ ಬ್ರೈನ್ ಡೆತ್ ಅನ್ನು ನಂಬುವುದಿಲ್ಲ. ಭಾರತದಲ್ಲಿ ಈಗಿರುವ opt-in - ವ್ಯವಸ್ಥೆಗೆ ಬದಲಾಗಿ - ವ್ಯವಸ್ಥೆಯನ್ನು ಪರಿಗಣಿಸುವ ಅಗತ್ಯವಿದೆ ಎಂದು ತಜ್ಞರು ಅಭಿಪ್ರಾಯಪಡುತ್ತಿದ್ದು, ಇದರಿಂದ ಅಂಗಾಂಗ ದಾನದ ಸಂಖ್ಯೆಯನ್ನು ಹೆಚ್ಚಿಸಬಹುದು ಎನ್ನಲಾಗಿದೆ. ರಕ್ತ ಸಂಬಂಧಿಗಳು ಅಲ್ಲದೇ ಬೇರೆಯವರಿಗೆ ಅಂಗಾಂಗ ದಾನ ಮಾಡಲು ಅನುಮತಿ ಕಡ್ಡಾಯವಾಗಿದ್ದರೂ ಕೆಲವು ಕಡೆಗಳಲ್ಲಿ ಭ್ರಷ್ಟಾಚಾರ ಮತ್ತು ದುರುಪಯೋಗ ನಡೆದು ಬರುತ್ತಿರುವುದರಿಂದ ಡಿಎನ್‌ಎ/ ಜೈವಿಕ ಹೊಂದಾಣಿಕೆ ಆಡಿಟ್ ಹಾಗೂ ತಂತ್ರಜ್ಞಾನ ಆಧಾರಿತ ಪರಿಶೀಲನೆ ಕಡ್ಡಾಯ ಮಾಡಬೇಕು ಮತ್ತು ಕಠಿಣ ಶಿಕ್ಷೆ ವಿಧಿಸಬೇಕು ಎನ್ನುವ ಕೂಗು ಎದ್ದಿದೆ.

ಎಐ ತಂತ್ರಜ್ಞಾನ ಹೊಂದಿರುವ ಪ್ರತಿಯೊಂದು ಆಸ್ಪತ್ರೆಯೂ ಬ್ರೈನ್-ಡೆತ್ ಗುರುತಿಸುವ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕು ಮತ್ತು ಪಾಲಿಸದಿದ್ದರೆ ದಂಡ ವಿಧಿಸಬೇಕು. ಅಕ್ರಮ ಅಂಗಾಂಗ ಮಾರಾಟವನ್ನು ತಡೆಯಲು ವಿಶೇಷ ತನಿಖಾ ಘಟಕ, ವೇಗವಾದ ನ್ಯಾಯಾಲಯ ಮತ್ತು ಆಸ್ತಿ ವಶಪಡಿಸಿಕೊಳ್ಳುವಂತೆಯೂ ಕಠಿಣವಾದ ಶಿಕ್ಷೆಗಳು ಥೋಟಾ ಕಾನೂನಿನಲ್ಲಿ ಸೇರಬೇಕು. ಅಲ್ಲದೇ tissue donation regenerative medicine ಗಳಿಗೆ ಕಾನೂನುಬದ್ಧ ಮಾನ್ಯತೆ ನೀಡಬೇಕು.

ರಾಷ್ಟ್ರೀಯ ಮಟ್ಟದಲ್ಲಿ NOTTO ದಾಖಲಾತಿ ವ್ಯವಸ್ಥೆ ಇದ್ದರೂ ದತ್ತಾಂಶ ರಾಜ್ಯಮಟ್ಟದಲ್ಲಿ ಅಸಮರ್ಪಕವಾಗಿರುವುದರಿಂದ ಎಐ ಆಧಾರಿತ ರಿಜಿಸ್ಟರ್ ಪಾಲಿಸುವುದರ ಮೂಲಕ ದೇಶಾದ್ಯಂತ ಸ್ಪಷ್ಟ ನಿಯಮ ರೂಪಿಸಬೇಕು. ದಾನ ಮಾಡಿದ ಕುಟುಂಬಗಳಿಗೆ monetary benefit ಇಲ್ಲದ ಕಾರಣ ಅಂತವರಿಗೆ ಆರೋಗ್ಯ ವಿಮೆ ಅಥವಾ ಶಿಕ್ಷಣ ನೆರವುಗಳಂತಹ ಸಾಮಾಜಿಕ ಭದ್ರತಾ ಪ್ಯಾಕೇಜುಗಳನ್ನು ಒದಗಿಸಬೇಕು ಥೋಟಾ ಕಾಯ್ದೆಯಲ್ಲಿ ಜನಜಾಗೃತಿಗೆ ಬಲವಾದ ಪ್ರಾಧಾನ್ಯ ಇಲ್ಲದ ಕಾರಣ ಶಾಲಾ ಪಠ್ಯಕ್ರಮದಲ್ಲೂ ಮತ್ತು ಸಾರ್ವಜನಿಕ ಅಭಿಯಾನಗಳಲ್ಲಿ ಅಂಗಾಂಗ ದಾನದ ಮಹತ್ವವನ್ನು ಕಡ್ಡಾಯವಾಗಿ ಸೇರಿಸಬೇಕು.

ಹೀಗೆ ಕಾಯ್ದೆಯು ಭಾರತದಲ್ಲಿ ಬಲವಾದ ಕಾನೂನು ಆಧಾರವನ್ನು ಕೊಟ್ಟಿದ್ದರೂ ಪಾರದರ್ಶಕತೆ, ಜನರ ವಿಶ್ವಾಸ, ತಂತ್ರಜ್ಞಾನ ಆಧಾರಿತ ನಿಯಂತ್ರಣ, ಅಂಗಾಂಗ ಕಳ್ಳ ಸಾಗಾಣಿಕೆ ತಡೆಯುವ ಜಾಗೃತಿಗಳ ಮೂಲಕ ಥೋಟಾ ಕಾಯಿದೆಯನ್ನು ಇನ್ನಷ್ಟು ಪರಿಣಾಮಕಾರಿ, ಮಾನವೀಯ ಮತ್ತು ನ್ಯಾಯಸಮ್ಮತ ವ್ಯವಸ್ಥೆಯನ್ನಾಗಿ ತಿದ್ದಿಕೊಳ್ಳುವ ಅವಶ್ಯಕತೆ ಇದೆ.

**- ಡಾ.ಡಿ.ಸಿ.**ನಂಜುಂಡ

## ಕನ್ನಡ ಕವನಗಳು ★★★★★★

### ಕುಕ್ಕಬಹುದು ಪಾರಿವಾಳ..

ಇಲ್ಲಿ ಇಂಥದ್ದೆಲ್ಲ ನಡೆಯಬಾರದಿತ್ತು
ಕಡ್ಡಿಯನ್ನು ಗುಡ್ಡ ಮಾಡಬಾರದಿತ್ತು
ಸಹಜ ಸಂವಾದಕ್ಕೆ ಎಡೆಯೇ ಇಲ್ಲವೇ
ಕಾನೂನಿನ ಗುಮ್ಮ ತೋರಿಸಬಾರದಿತ್ತು
ವಾದ ದುರ್ಬಲವಿದ್ದಾಗಲೇ ದನಿ ಜೋರು
ಪ್ರಶ್ನಿಸುವ ಬಾಯಿಗಳ ಮುಚ್ಚಿಸಬಾರದಿತ್ತು
ಖಾಲಿ ಕೊಡಗಳಿಗೂ ಉತ್ತರಿಸಬೇಕಾಗುತ್ತದೆ
ನಿರುತ್ತರದ ಈ ದುರವಸ್ಥೆ ಬರಬಾರದಿತ್ತು
ವ್ಯಕ್ತಿತ್ವಕ್ಕೊಂದು ಘನತೆ ಇದೆ ಜಂಗಮ
ಅದನ್ನು ಮರೆತಂತೆ ವರ್ತಿಸಬಾರದಿತ್ತು
ನಿಜ, ಹದ್ದಾಗಿ ಕುಕ್ಕಬಹುದು ಪಾರಿವಾಳ
ಗಿಡುಗನಾಗಿ ಎರಗಬಹುದು ಪಾರಿವಾಳ
ಏನೆಲ್ಲ ರೂಪಾಂತರಕ್ಕೆ ಎಡೆಯಿದೆ ಇಲ್ಲಿ
ಡೇಗೆಯಾಗಿ ಸೊಕ್ಕಬಹುದು ಪಾರಿವಾಳ
ಇಂದಿನ ಈ ಮೃದುತ್ವ ಕಳೆದೇಹೋದೀತು
ಡ್ರ್ಯಾಗನ್ ಆಗಿ ಮುತ್ತಬಹುದು ಪಾರಿವಾಳ
ಕಾಲನೂ ಉರುಳಿಸಬಹುದು ತನ್ನ ದಾಳ
ರಣಹದ್ದಾಗಿ ಬದಲಬಹುದು ಪಾರಿವಾಳ
ಮುಖಬೆಲೆಯನ್ನು ನಂಬದಿರು ಜಂಗಮ
ಕಟುಕನಾಗಿ ಕುಟುಕಬಹುದು ಪಾರಿವಾಳ

**- ಡಾ. ಗೋವಿಂದ** ಹೆಗಡೆ



### ಬೆಚ್ಚಿ ಬಿದ್ದಿತ್ತು ಕನಸು

ಹಳೇಯದು..
ಮಮತಾ ಅರಸೀಕೆರೆ
ನಿನ್ನ ಎರಡೂ ಕೈಗಳ ಮಾಲೆಮಾಡಿ
ಕೊರಳ ಹಾರವಾಗಿಸಿ
ಹತ್ತಿರ ಕಿವಿಯ ಬಳಿ ಬಂದು
ಎದೆಯ ಬೆಚ್ಚನೆ ಭಾವವನ್ನೆಲ್ಲ
ತುಟಿಗೆ ತಂದು
ಕೊರಳ ತಿರುವಿಗೆ ಪಿಸುಗುಡುವ
ಕಾವ್ಯದುಡುಗೊರೆಗೆ
ಹಣೆಯ ಮೇಲೆ ಸ್ವೇದ ಬಿಂದು
ಅರೆ ಮುಚ್ಚಿದ ತೇಲು ಕಣ್ಗಳು
ನಸು ನಗೆಯಲೆ ನಡುಗೋ
ತುಟಿಗಳು
ಅಪ್ಪೂಟ ಬೆರಳನ್ನು ಮಡಚಿದ
ಕಾಲ್ಗಳ
ಮುಷ್ಟಿ ಬಿಗಿದ ಕರಗಳ
ಹಗುರ ಎಲೆಯಾಗಿ ನಡುಗೋ
ದೇಹ ಭಾಷೆ,
ಲಘು ಕಂಪನ ತುಡಿದು
ಹೃದಯದಾಸೆ
ಹತೋಟಿ ಮೀರಿದ ಬುದ್ಧಿ ಭಾವ
ಚಿಲ್ಲಚಿಮ್ಮಿಸಿ ಮೈಯ ಕಾವ
ಗಾಳಿ ಪಟವಾದ ಮನ ಮಲ್ಲಿಗೆ
ಚೇರಿ ಮೀರಿದ ಉಸಿರ ಸೊಲ್ಲಿಗೆ
ಬೆಚ್ಚಿ ಬಿದ್ದಿತ್ತು ಕನಸು
ಸೋರುವ ಕುಂಭವಾಗಿತ್ತು
ಮನಸ್ಸು



# ನಮ್ಮೆಲ್ಲರ ಮನೆಯೊಳಗಿರುವ ಟಿಕ್ ಟಿಕ್ ಟೈಮ್ ಬಾಂಬ್!

- ಅಯ್ಯೋ! ನಮ್ಮೆಲ್ಲರ ಮನೆಯಲ್ಲೂ ಒಂದೊಂದು ಟೈಮ್ ಬಾಂಬ್ ಇದೆಯ! ಎಂಬ ಉದ್ಗಾರ ಹೊರಹೊಮ್ಮಿತು. ಮೊಬೈಲ್ ಹಾಗೂ ಸಾಮಾಜಿಕ ಜಾಲತಾಣಗಳೇ ಆ ಸೈಲೆಂಟ್ ಟೈಮ್ ಬಾಂಬ್! ಅಣುಬಾಂಬ್‌ಗಳನ್ನು ಯುದ್ಧದ ಸಮಯದಲ್ಲಿ ಶತ್ರುರಾಷ್ಟ್ರದವರು ಬಳಸುತ್ತಾರೆ. ಆದರೆ ಸಾಮಾಜಿಕ ಜಾಲತಾಣವೆಂಬ ಟೈಮ್ ಬಾಂಬ್ ನಮ್ಮವರೇ ನಮ್ಮ ವಿರುದ್ಧ ಸಿಡಿಸುತ್ತಾರೆ.

ಅಣುಬಾಂಬ್‌ಗಳನ್ನು ಯುದ್ಧದ ಸಮಯದಲ್ಲಿ ಶತ್ರುರಾಷ್ಟ್ರದವರು ಬಳಸುತ್ತಾರೆ. ಆದರೆ ಸಾಮಾಜಿಕ ಜಾಲತಾಣವೆಂಬ ಟೈಮ್ ಬಾಂಬ್ ನಮ್ಮವರೇ ನಮ್ಮ ವಿರುದ್ಧ ಸಿಡಿಸುತ್ತಾರೆ. ಹುಟ್ಟುತ್ತಲೇ ಮಕ್ಕಳು ಅಳುವನ್ನು ನಿಲ್ಲಿಸಲು ಆಟದ ಸಾಮಾನಿನಂತೆ ಅವರ ಕೈಗೆ ಮೊಬೈಲ್ ನೀಡಿ ನಾವೆ ಸುಮ್ಮನಾಗುತ್ತೇವೆ. ಅಲ್ಲಿಂದಲೇ ಮೊಬೈಲ್ ಎಂಬ ಮಾಯ ಲೋಕದ ಪಯಣ ಶುರುವಾಗಿ ಆ ಪ್ರಪಂಚದ ಮುಂದೆ ಸ್ನೇಹ ಸಂಬಂಧಗಳು, ಪ್ರೀತಿ, ನಂಬಿಕೆ, ಮಾನವೀಯತೆ, ಸಂಸ್ಕೃತಿ, ಆಚಾರ ವಿಚಾರ, ದೇಶಪ್ರೇಮ ಎಲ್ಲವೂ ಗೌಣವಾಗಿ ಬಿಡುತ್ತದೆ.

ಅಂದು ಬ್ರಿಟಿಷರು (ಪಾಶ್ಚಾತ್ಯರು ಭಾರತವನ್ನು ಬಿಟ್ಟು ಹೋಗುವ ಮುನ್ನ) ಭಾರತೀಯ ಶ್ರೇಷ್ಠ ಸಂಸ್ಕೃತಿ, ಜ್ಞಾನವನ್ನು ಶಾಶ್ವತವಾಗಿ ಅಳಿಸಿ ಹಾಕಲು ಶಿಕ್ಷಣ ಪದ್ಧತಿಯನ್ನು ಬದಲಾವಣೆ ಮಾಡಿದರು. ಜ್ಞಾನವು ವರ್ಗಾವಣೆಯಾಗುವ ಜ್ಞಾನೇಂದ್ರ, ದೇವಸ್ಥಾನಗಳು ಸೇರಿದಂತೆ ಇನ್ನಿತರ ಎಲ್ಲಾ ಮಾರ್ಗವನ್ನು ಧ್ವಂಸಗೊಳಿಸಿದರು.

ತನ್ಮೂಲಕ ನಮ್ಮೆಲ್ಲರ ಆಲೋಚನಾ ಶಕ್ತಿಯನ್ನು ಅತ್ಯಂತ ಚಾಣಾಕ್ಷತನದಿಂದ ನಮ್ಮಿಂದ ಕಿತ್ತುಕೊಂಡರು. ಮತ್ತೊಂದೆಡೆ ಪಾಶ್ಚಾತ್ಯರು ಬಿತ್ತಿದ ಒಡೆದು ಆಳುವ ನೀತಿಯ ವಿಷ ಬೀಜವು ಹೆಮ್ಮರವಾಗಿ ಬೆಳೆಯುತ್ತಾ ಸಾಗಿತ್ತು. ಇವುಗಳ ಮಧ್ಯೆ ಯಾವುದು ಸರಿ ತಪ್ಪು ಎಂಬ ಸ್ಪಷ್ಟವಾದ ಪರಿಕಲ್ಪನೆ ಹೊರಹೊಮ್ಮಲು ಅನೇಕ್ ಶತಮಾನಗಳೇ ಬೇಕಾಯಿತು.



ಮೂರಾ ಬಟ್ಟೆಯಂತಾದ ಬದುಕನ್ನು ನಿಧಾನವಾಗಿ, ಸಾವರಿಸಿಕೊಂಡು ಪಾಶ್ಚಾತ್ಯರ ಕುತಂತ್ರವನ್ನು ನಿಧಾನವಾಗಿ ಅರಿಯುವಷ್ಟರಲ್ಲಿ ಕಾಲ ಮೀರೋಗಿತ್ತು. ಮೊನ್ನೆಯಷ್ಟೇ ನಡೆದ ನೇಪಾಳದ ಘಟನೆಗಳು ಮತ್ತೊಮ್ಮೆ ಇವೆಲ್ಲವನ್ನೂ ನೆನಪಿಸುವ, ಅವಲೋಕಿಸುವ, ಚಿಂತಿಸುವ ಅನಿವಾರ್ಯತೆಯನ್ನು ಒತ್ತಿ ಹೇಳುತ್ತದೆ.

ಯಾವ ಒಡೆದು ಆಳುವ ವಿಷ ಬೀಜವೆಂಬ ಬೆಂಕಿಯನ್ನು ಹೊತ್ತಿಸಿ ಪಾಶ್ಚಾತ್ಯರು ಹೋಗಿದ್ದರೋ ಅದು ಇಂದಿಗೂ ನಮ್ಮಲ್ಲಿ ಉರಿಯುತ್ತಿದೆ. ಅಷ್ಟು ಸಾಲದೆಂಬಂತೆ ಆಧುನಿಕ ಯುಗಕ್ಕೆ ತಕ್ಕಂತೆ ಕೃತಕ ಬುದ್ಧಿಮತ್ತೆ, ಸಾಮಾಜಿಕ ಜಾಲತಾಣಗಳೆಂಬ ಬಗೆ ಬಗೆಯ ತಂತ್ರಜ್ಞಾನದ ಆಮಿಷ ಒಡ್ಡಿ, ವಾಸ್ತವದಿಂದ ಬಹುದೂರ ಇರುವ ಮಾಯಾಲೋಕದಲ್ಲಿ, ಯುವ ಪೀಳಿಗೆಯವರು ವಿಹರಿಸುವಂತೆ ಮಾಡುವಲ್ಲಿ ಯಶಸ್ವಿಯು ಆಗಿದ್ದಾರೆ.

ಮೊನ್ನೆ ಮೊನ್ನೆಯಷ್ಟೇ ಇಸ್ರೇಲ್ -ಇರಾನ್ ಯುದ್ಧದ ಸಮಯದಲ್ಲಿ ಅಣುಶಕ್ತಿ ಬಳಕೆಯಿಂದಾಗುವ ಅನಾಹುತಗಳ ಬಗ್ಗೆ ಬಹಳಷ್ಟು ಚರ್ಚೆ ನಡೆದವು. ಈ ನಿಟ್ಟಿನಲ್ಲಿ ಪ್ರತಿಯೊಂದು ರಾಷ್ಟ್ರದ ಬಳಿಯಿರುವ ಅಣುಬಾಂಬ್‌ಗಳಿಂದ ಮನುಕುಲಕ್ಕೆ ಒದಗಬಹುದಾದ ಅಪಾಯದ ಬಗ್ಗೆ ಮುನ್ನೆಚ್ಚರಿಕೆ ನೀಡಿದವು.

ಆಗ ಅಣುಬಾಂಬ್ ಎಲ್ಲದಕ್ಕಿಂತಲೂ ದೊಡ್ಡದ್ದು, ಒಂದು ಅಣುಬಾಂಬ್‌ನಿಂದ ಕೋಟ್ಯಂತರ ಜನರು ಒಮ್ಮೆಲೇ ನಾಶವಾಗುತ್ತಾರೆ ಎಂದಷ್ಟೇ ಗೊತ್ತಿತ್ತು. ಆದರೆ ನೇಪಾಳದಲ್ಲಿ ನಡೆದ ಘಟನೆಯು ನಮ್ಮ ಆಲೋಚನೆಯನ್ನು ಬುಡಮೇಲಾಗಿಸಿತು.

ಅಯ್ಯೋ! ನಮ್ಮೆಲ್ಲರ ಮನೆಯಲ್ಲೂ ಒಂದೊಂದು ಟೈಮ್ ಬಾಂಬ್ ಇದೆಯ! ಎಂಬ ಉದ್ಗಾರ ಹೊರಹೊಮ್ಮಿತು. ಮೊಬೈಲ್ ಹಾಗೂ ಸಾಮಾಜಿಕ ಜಾಲತಾಣಗಳೇ ಆ ಸೈಲೆಂಟ್ ಟೈಮ್ ಬಾಂಬ್!

ಅಣುಬಾಂಬ್‌ಗಳನ್ನು ಯುದ್ಧದ ಸಮಯದಲ್ಲಿ ಶತ್ರುರಾಷ್ಟ್ರದವರು ಬಳಸುತ್ತಾರೆ. ಆದರೆ ಸಾಮಾಜಿಕ ಜಾಲತಾಣವೆಂಬ ಟೈಮ್ ಬಾಂಬ್ ನಮ್ಮವರೇ ನಮ್ಮ ವಿರುದ್ಧ ಸಿಡಿಸುತ್ತಾರೆ.

ಹುಟ್ಟುತ್ತಲೇ ಮಕ್ಕಳು ಅಳುವನ್ನು ನಿಲ್ಲಿಸಲು ಆಟದ ಸಾಮಾನಿನಂತೆ ಅವರ ಕೈಗೆ ಮೊಬೈಲ್ ನೀಡಿ ನಾವೆ ಸುಮ್ಮನಾಗುತ್ತೇವೆ. ಅಲ್ಲಿಂದಲೇ ಮೊಬೈಲ್ ಎಂಬ ಮಾಯಲೋಕದ ಪಯಣ ಶುರುವಾಗಿ ಆ ಪ್ರಪಂಚದ ಮುಂದೆ ಸ್ನೇಹ ಸಂಬಂಧಗಳು, ಪ್ರೀತಿ, ನಂಬಿಕೆ, ಮಾನವೀಯತೆ, ಸಂಸ್ಕೃತಿ, ಆಚಾರ ವಿಚಾರ, ದೇಶಪ್ರೇಮ ಎಲ್ಲವೂ ಗೌಣವಾಗಿ ಬಿಡುತ್ತದೆ.

ಒಂದು ಮನೆಯಲ್ಲಿ ಕನಿಷ್ಠ ಎಂದರೂ ಐದು ಅತ್ಯಾಧುನಿಕ ಸೌಲಭ್ಯಗಳಿಂದ ಕೂಡಿರುವ ಮೊಬೈಲ್ ಫೋನ್ ಇದ್ದೇ ಇರುತ್ತದೆ. ಊಟ ಮಾಡದೇ ಬೇಕಾದರೂ ನಾಲ್ಕಾರು ದಿನ ಹೇಗೂ ಕಳೆಯುತ್ತಾರೆ ಆದರೆ ಮೊಬೈಲ್, ಸಾಮಾಜಿಕ ಜಾಲತಾಣ ಎಲ್ಲದಕ್ಕೂ ಮಿಗಿಲಾಗಿ ನೆಟ್‌ವರ್ಕ್ ಇಲ್ಲದೇ ಅವರ ಜೀವನವೇ ಸಾಗದು.

ನಿಮಗೆ ನೆನಪಿರಬಹುದು, ಕಳೆದ ತಿಂಗಳ ಕೊನೆಯ ಭಾನುವಾರ ಕರ್ನಾಟಕ, ಚೆನ್ನೈ, ಹೈದ್ರಾಬಾದ್‌ನಲ್ಲಿ ಒಂದು ಗಂಟೆಯ ಕಾಲ ಏರ್ ಟೆಲ್ ನೆಟ್‌ವರ್ಕ್ ವ್ಯತ್ಯಯ ಆದಾಗ ಇಂದಿನ ಯುವ ಪೀಳಿಗೆಯವರು ಬಾಲ ಸುಟ್ಟ ಬೆಕ್ಕಿನಂತೆ ಅತ್ತಿಂದಿತ್ತ ಓಡಾಡತೊಡಗಿದರು. ನೆಟ್‌ವರ್ಕ್ ಇಲ್ಲದೇ ಕಂಗಾಲಾದ ಜನರು ದಿಕ್ಕುತೋಚದೆ ನಾಲ್ಕೈದು ಬಾರಿ ಫ್ಲೈಟ್ ಮೋಡ್‌ಗೆ ಹಾಕಿ ತೆಗೆದರು. ಆಗಲು ನೆಟ್‌ವರ್ಕ್ ಬಾರದ ಕಾರಣ ರಿ-ಸ್ಟಾರ್ಟ್ ಮಾಡಿದರು. ಆಗಲೂ ಒಂದೇ ಒಂದು ಚಿಕ್ಕ ನೆಟ್‌ವರ್ಕ್ ಕಡ್ಡಿ ಕಾಣಿಸದಿದ್ದಾಗ ಮೊಬೈಲ್ ಸ್ವಿಚ್ ಆಫ್ ಮಾಡಿ ನೋಡೋಣ ಎಂದು ನೋಡಿದರು.

ಹೀಗೆ ನೆಟ್‌ವರ್ಕ್ ಹುಡುಕಾಟದಲ್ಲಿ ಮಾಡಿದ ಒಂದೊಂದೇ ಪ್ರಯತ್ನಗಳು ವಿಫಲವಾದಾಗ ಮತ್ತಷ್ಟು ಆತಂಕ ಹೆಚ್ಚುತ್ತಲೇ ಹೋಯಿತು. ಕೊನೆಯದಾಗಿ ಸಿಮ್ ಕಾರ್ಡ್ ತೆಗೆದು ಮತ್ತೆ ಹಾಕಿ ನೋಡಿದರೂ ಆಗಲೂ ನೆಟ್ವರ್ಕ್ ನ ಪತ್ತೆ ಇಲ್ಲ. ಆಗ ಸಹನೆಯ ಕಟ್ಟೆ ಒಡೆದು ಅಕ್ಕ ಪಕ್ಕದವರ ಬಳಿ ನಿಮ್ಮ ಮೊಬೈಲ್ ನೆಟ್‌ವರ್ಕ್ ಇದೆಯೇ, ನಿಮ್ಮ ಏರ್‌ಟೆಲ್ ನೆಟ್‌ವರ್ಕ್ ಸರಿಯಾಗಿದೆಯೇ ಎಂದು ಕೇಳತೊಡಗಿದರು.

ನಾವು ತಂತ್ರಜ್ಞಾನಕ್ಕೆ ಎಷ್ಟು ಅಂಟುಕೊಂಡಿದ್ದೇವೆ ಎಂಬುದಕ್ಕೆ ಇದಕ್ಕಿಂತ ಒಳ್ಳೆಯ ನಿದರ್ಶನ ಮತ್ತೊಂದಿರಲಿಲ್ಲ. ಆಗ ಅವರು ನಡೆದುಕೊಂಡ ರೀತಿ ನೋಡಿದಾಗಲೇ ನಮಗೆ ತಂತ್ರಜ್ಞಾನ ಎಂಬ ಮಾಯಾಲೋಕ ಏನೇ ಅನಾಹುತ ಮಾಡಬಹುದೆಂಬ ಚಿತ್ರಣ ಸಿಕ್ಕಿತ್ತು. ಆದರೆ ಅದ್ಯಾವುದನ್ನೂ ನಾವು ನಾವು ಗಂಭೀರವಾಗಿ ಪರಿಗಣಿಸಲಿಲ್ಲ.

ಇಂದು ಕುಟುಂಬದ ಚಿತ್ರಣ ಬದಲಾಗಿದೆ. ಮನೆಯಲ್ಲಿ ಅಪ್ಪ, ಅಮ್ಮ ಮಕ್ಕಳು ಮಾತ್ರ ಇದ್ದರೂ, ಒಬ್ಬರೊಂದಿಗೆ ಇನ್ನೊಬ್ಬರ ಮಾತುಕತೆಯಿಲ್ಲ. ಪಾಲಕರು ಮಕ್ಕಳ ಬಳಿ ಮಾತನಾಡಲು ಹೆದರಬೇಕಾದ ವಾತಾವರಣವಿದೆ. ಊಟ ಮಾಡಲು ಬಾರೋ, ಎಷ್ಟೊತ್ತು ಕಾಯೊದು, ಎಲ್ಲರೂ ಕಾಯುತ್ತಿರೆ ಎಂದು ಅಮ್ಮ ಹೇಳಿದರೆ ಮಕ್ಕಳು ಅದನ್ನೇ ಅಪಮಾನ ಎಂದು ತಿಳಿದು ಸಿಟ್ಟಿನಿಂದ ರೊಚ್ಚಿಗೆದ್ದು ರಂಪಾಟ ಮಾಡಿ ಮನೆಯನ್ನೇ ರಣರಂಗವನ್ನಾಗಿಸುತ್ತಾರೆ.

ಇನ್ನು ಕೆಲವು ಮಕ್ಕಳು ಮತ್ತೊಮ್ಮೆ ಕಿರಿಕಿರಿ ಮಾಡಿದರೆ ಆತ್ಮಹತ್ಯೆ ಮಾಡಿಕೊಳ್ಳುವೆ ಎಂದು ರೂಮ್ ಒಳಗೆ ಹೋಗಿ ದಬ್ಬನೇ ಬಾಗಿಲಹಾಕಿಕೊಳ್ಳುತ್ತಾರೆ. ಇದು ಎಲ್ಲರ ಮನೆಯ ಸಾಮಾನ್ಯ ದೃಶ್ಯ. ಅಷ್ಟರ ಮಟ್ಟಿಗೆ ಸಾಮಾಜಿಕ ಜಾಲತಾಣ ನಮ್ಮ ಯುವ ಪೀಳಿಗೆಯವರನ್ನು ಸಂಪೂರ್ಣವಾಗಿ ವಶೀಕರಣ ಮಾಡಿ ಬಿಟ್ಟಿದೆ.

ಇಂದು ನೇಪಾಳದಲ್ಲಿ ಆಗಿದ್ದು ಇದುವೇ. ನಮ್ಮ ಮಕ್ಕಳು ಪಾಶ್ಚಾತ್ಯರ ತಂತ್ರಜ್ಞಾನಕ್ಕೆ ಬಲಿಯಾಗಿ , ಅದರ ವ್ಯಾಮೋಹಕ್ಕೆ ಒಳಗಾಗಿ ಹುಚ್ಚೆದ್ದು ನಮ್ಮ ತಾಯ್ನಾಡನ್ನೇ ಸುಟ್ಟು ಹಾಕುವ ಮಟ್ಟಿಗೆ ಮದಭರಿತ ಆನೆಯಂತೆ ವರ್ತಿಸುತ್ತಿದ್ದಾರೆ. ಅಂದು ಪ್ರತಿಯೊಬ್ಬರ ಮನೆಯಲ್ಲೂ ಒಬ್ಬ ದೇಶಪ್ರೇಮಿ, ಸ್ವಾತಂತ್ರ್ಯ ಸಂಗ್ರಾಮಿ ಇದ್ದರೆ ಇಂದು ನಮ್ಮ ನಮ್ಮ ಮನೆಯಲ್ಲಿ ನಮ್ಮ ಮಕ್ಕಳ ಬಳಿ ಜೀವಂತ ಟೈಮ್ ಬಾಂಬ್ ಮಾದರಿಯ ತಂತ್ರಜ್ಞಾನವೊಂದು ತಣ್ಣನೇ ಅತ್ತಿಂದಿತ್ತ ಓಡಾಡುತ್ತಿದೆ.



ಪುಸ್ತಕಗಳನ್ನು ಓದುತ್ತಾ, ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳುತ್ತಾ ಸರಿಯಾದ ನವನ್ನು ಪಡೆದುಕೊಳ್ಳಬೇಕಾದ ಯುವಪೀಳಿಗೆ ಇಂದು ಪಾಶ್ಚಾತ್ಯರು ಹೆಣೆಯ ಜಾಲದಲ್ಲಿ ಸಿಲುಕಿ ವಿಲವಿಲ ಎಂದು ಒಡುತ್ತಿದೆ. ಅದಕ್ಕೆ ಅಲ್ಲವೇ ಚೀನಾದ ಟಿಕ್ ಟಾಕ್ ಆಪ್ ನ ನಶೆಯಲ್ಲಿ ನಮ್ಮ ಗಡಿಯಲ್ಲಿ ಭದ್ರತಾಪಡೆಗಳ ಮೇಲೆ ದಾಳಿಯಾಗಿದ್ದು.

ಅಲ್ಲಿಂದಲೇ ಅಲ್ಲವೇ ಭಾರತ ಸರಕಾರ ಇದರ ತೀವ್ರತೆ ಅರಿತು ಹತ್ತಾರು ಆಪ್‌ಗಳನ್ನು ಬಹಿಷ್ಕರಿಸಿದ್ದು. ಬಾಲ್ಯದ ಮಕ್ಕಳಿಗೆ ಸಂಸ್ಕಾರಯುತ ನೈತಿಕ ಶಿಕ್ಷಣ ನೀಡಿ ಪ್ರೀತಿಯಿಂದ ತಪ್ಪನ್ನು ತಿದ್ದಿ ತೀಡಬೇಕಾದ ನಾವು ಮಕ್ಕಳು ಅಳುತ್ತಾರೆ. ಅವರ ಕಣ್ಣಲ್ಲಿ ನೀರು ಬಂದರೆ ನಮ್ಮ ಕರುಳು ಹಿಚುಕಿದಂತಾಗುತ್ತದೆ ಎಂದು ಮಕ್ಕಳ ಮೇಲಿನ ವ್ಯಾಮೋಹದಿಂದ ಸುಮ್ಮನಾದೆವು. ಅದೇ ಮಕ್ಕಳು ಇಂದು ಕ್ಷಣಕ್ಷಣಕ್ಕೂ ಸಣ್ಣ ಸಣ್ಣ ವಿಷಯಕ್ಕೂ ತಾಳ್ಮೆ ಕಳೆದುಕೊಂಡು ರೊಚ್ಚಿಗೇಳುತ್ತಿದ್ದಾರೆ.

ಮಕ್ಕಳ ಕೈಯಲ್ಲಿರುವ ಮೊಬೈಲ್, ಸಾಮಾಜಿಕ ಜಾಲತಾಣವೆಂಬ ಸೂಪರ್ ಫಾಸ್ಟ್ ಸೈಲೆಂಟ್ ಟೈಮ್ ಬಾಂಬ್ ಎಷ್ಟೊತ್ತಿಗೆ, ಎಲ್ಲಿ ಸಿಡಿಯುತ್ತದೆ ಎಂಬ ಆತಂಕ ಸದಾ ನಮ್ಮೆಲ್ಲರನ್ನು ಕಾಡಲಿದೆ. ಇದು ಕೇವಲ ಜೆನ್ ಝೀ ಪೀಳಿಗೆಗೆ ಮಾತ್ರ ಸೀಮಿತವಲ್ಲ, ಮುಂದೆ ಬರಲಿರುವ ಜೆನ್ ಅಲ್ಫಾ ಪೀಳಿಗೆಯನ್ನು ಈ ನಶೆಯಿಂದ ಹೊರ ತರುವ ಸವಾಲಿನ ಬಗ್ಗೆಯೂ ಎಚ್ಚರಿಕೆಯನ್ನು ನೀಡುತ್ತದೆ.

ಸಾಮಾಜಿಕ ಜಾಲತಾಣದ ಮೇಲಿರುವ ಕೌತುಕತೆ ತಮ್ಮದೇ ಮನೆಯ ಸದಸ್ಯರೋ, ಆಪ್ತರೊಬ್ಬರು ಜೀವನ್ಮರಣದ ಹೋರಾಟದಲ್ಲಿ ಐಸಿಯುನಲ್ಲಿ ಇದ್ದಿದ್ದರೂ ಅಷ್ಟು ಟೆನ್ಷನ್ ಆಗುವುದು ನಮಗೆ ಕಾಣಸಿಗುವುದಿಲ್ಲ. ಅಷ್ಟರ ಮಟ್ಟಿಗೆ ಸಾಮಾಜಿಕ ಜಾಲ ತಾಣ ನಮ್ಮ ಮಿದುಳನ್ನು ನಿಯಂತ್ರಿಸುತ್ತಿದೆ. ಇದುವೇ ತಂತ್ರಜ್ಞಾನ ಯುದ್ಧ.

ಇದನ್ನೇ ಪಾಶ್ಚಾತ್ಯ ರಾಷ್ಟ್ರಗಳು ಎದುರು ನೋಡುತ್ತಿರುವುದು. ಅವರ ಆರ್ಥಿಕ ಮುಂದುವರಿಕೆಗೆ ನಮ್ಮ ಮಕ್ಕಳು, ಯುವಲರು ಕಚ್ಚಾವಸ್ತುಗಳಂತೆ ಬಳಸಿಕೊಳ್ಳುತ್ತಿದ್ದಾರೆ. ಬಹುಶಃ ಇಂದಿನ ಈ ಬೆಳವಣಿಗೆಯನ್ನು ಈಗಾಗಲೇ ನಿರೀಕ್ಷಿಸಿದ ಚೈನಾ, ಉತ್ತರ ಕೊರಿಯಾ, ರಷ್ಯಾ, ತುರ್ಕ್‌ಮೆನಿಸ್ತಾನ್, ಇರಾನ್ ದೇಶಗಳು ತಮ್ಮ ದೇಶದಲ್ಲಿ ತಮ್ಮದೇ ಆದ ಸರ್ಚ್ ಎಂಜಿನ್, ಸ್ವದೇಶಿ ಆಪ್‌ಗಳನ್ನು ಮಾತ್ರ ಬಳಸಲು ಅನುಮತಿ ನೀಡಿವೆ.

ಈ ದೇಶಗಳಲ್ಲಿ ಗೂಗಲ್ ಸೇರಿದಂತೆ ಇನ್ನಿತರ ಆಪ್‌ಗಳ ಮೇಲೆ ನಿರ್ಬಂಧವಿದೆ. ಕೇವಲ ಆಪ್ ಮೇಲೆ ಮಾತ್ರವಲ್ಲ, ಆಮದು ಮಾಡಿಕೊಳ್ಳುವ ಪ್ರತಿಯೊಂದು ಸಾಮಗ್ರಿಯ ಮೇಲೂ ಬಿಗಿಯಾದ ಹದ್ದಿನ ಕಣ್ಣು ಇಡಲಾಗುತ್ತದೆ. ಮೇಲ್ನೋಟಕ್ಕೆ ನೋಡುವಾಗ ಇದು ಮಾನವನ ಸ್ವಾತಂತ್ರ್ಯದ ಹಕ್ಕನ್ನು ಕಸಿದುಕೊಳ್ಳಲಿದೆ ಎಂದೆನಿಸಿದರೂ ಸಹ, ಇಂದಿನ ವಿದ್ಯಮಾನವನ್ನು ಅವಲೋಕಿಸಿದಾಗ ದೇಶದ ಆಂತರಿಕ ಭದ್ರತೆ ವಿಷಯದಲ್ಲಿ ಆ ನಿರ್ಣಯ ಸೂಕ್ತವೆನಿಸುತ್ತದೆ.

ಇನ್ನಾದರೂ ನಾವು ನಮ್ಮ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿಭಾಯಿಸಬೇಕಾದ ಸಮಯ ಇದಾಗಿದೆ. ಇಲ್ಲದಿದ್ದರೆ ಸಾಮಾಜಿಕ ಜಾಲತಾಣವೆಂಬ ಬ್ರಹ್ಮರಾಕ್ಷಸ ಮೊಬೈಲ್ ನೊಳಗಿನಿಂದ ನಮ್ಮೆಲ್ಲರನ್ನೂ ಆಹುತಿ ತೆಗೆದುಕೊಳ್ಳುವ ಕಾಲ ದೂರವಿಲ್ಲ.

**- ಸುರೇಂದ್ರ** ಪೈ

# ತಿಂಗಳ ಮೊದಲ ಶನಿವಾರ ಕುಂದು ಕೊರತೆ ಸಭೆ ನಡೆಸಿ

## ಸಮಸ್ಯೆ ಪರಿಹರಿಸಲು ಸ್ಥಳ ಪರಿಶೀಲನೆಗೆ ನಿರ್ದೇಶನ | ತಹಶೀಲ್ದಾರ್‌ಗಳಿಗೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಸೂಚನೆ

• ಪ್ರಜೋದಯ ವರದಿ

**ಹಾಸನ:** ಪ್ರತಿ ತಾಲ್ಲೂಕಿನಲ್ಲಿ ತಿಂಗಳ ಮೊದಲ ಶನಿವಾರ ಸಾರ್ವಜನಿಕರ ಕುಂದುಕೊರತೆ ಅಹವಾಲು ಸ್ವೀಕಾರ ಮಾಡುವುದರ ಜೊತೆಗೆ ಸಮಸ್ಯೆ ಬಗೆಹರಿಸಲು ಖುದ್ದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ತಹಶೀಲ್ದಾರ್‌ಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶನಿವಾರ ನಡೆದ ಜನಸ್ಪಂದನ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕಾರ ಮಾಡಿ ಮಾತನಾಡಿದ ಅವರು, ಸಾರ್ವಜನಿಕರಿಗೆ ತೊಂದರೆ ಆಗದಂತೆ ಕೆಲಸ ಮಾಡುವ ಸಂದರ್ಭದಲ್ಲಿ ಉದಾಸೀನ ಮಾಡಿದೆ ಕರ್ತವ್ಯ ನಿರ್ವಹಿಸ ಬೇಕು. ಸಮಸ್ಯೆಗೆ ಪರಿಹಾರ ಮಾಡಲು ಪರಿಶೀಲನೆ ಮಾಡಿ ಬಗೆಹರಿಸಲು ಸಾಧ್ಯವಾಗದಿದ್ದಲ್ಲಿ ನಿರ್ದಿಷ್ಟ ಕಾರಣ ನೀಡಿ, ಸ್ಪಷ್ಟವಾಗಿ ಹಿಂಬರಹ ನೀಡಲು ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಸ್ವೀಕೃತವಾದ ಅರ್ಜಿಗಳ ಶೀಘ್ರ ವಿಲೇವಾರಿಗೆ ಕ್ರಮ ವಹಿಸುವುದರ ಜೊತೆಗೆ ಬಡಜನರ ಸಮಸ್ಯೆ ಬಗೆಹರಿಸಲು ಖುದ್ದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕೆಂದರು.



### 134 ಅರ್ಜಿ ಸ್ವೀಕಾರ

ರಸ್ತೆ, ದುರಸ್ತಿ, ಭೂ ಪರಿಹಾರ, ವಿದ್ಯುತ್ ಸಂಪರ್ಕ, ಖಾತೆ , ಆಶ್ರಯ ಮನೆ, ಹಕ್ಕು ಪತ್ರ, ಪಹಣಿ ತಿದ್ದುಪಡಿ, ಸ್ಮಶಾನ ಹಾಗು ಮತ್ತಿತರ ವಿಷಯಗಳ ಕುರಿತು ಒಟ್ಟು 134 ಅರ್ಜಿಗಳು ಸ್ವೀಕರಿಸಲಾಯಿತು. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಬಿ.ಆರ್.ಪೂರ್ಣಿಮಾ, ಉಪ ಕಾರ್ಯದರ್ಶಿ ಕೃಷ್ಣಮೂರ್ತಿ, ಅಪರ ಜಿಲ್ಲಾಧಿಕಾರಿ ಮಂಜುನಾಥ್, ಸಕಲೇಶಪುರ ಉಪ ವಿಭಾಗಾಧಿಕಾರಿ ರಾಜೇಶ್ ಹಾಗು ವಿವಿಧ ಇಲಾಖೆಗಳ ಅಧಿಕಾರಿಗಳಿದ್ದರು.

**ಹಿಮ್ಸ್ ಆಸ್ಪತ್ರೆ ಸಮಸ್ಯೆ ಸರಿಪಡಿಸಿ**

ಕ್ಯಾನ್ಸರ್ ಪೀಡಿತರಿಗೆ ರೇಡಿಯೋ ತೆರಪಿಗಾಗಿ ಹಿಮ್ಸ್‌ನಲ್ಲಿ ಸ್ಥಾಪಿಸಿರುವ ಯಂತ್ರೋಪಕರಣ ಬಳಕೆ ಕುರಿತು ಮನವಿ ಬಂದ ಹಿನ್ನಲೆ ಪರಿಶೀಲನೆ ಮಾಡಿ ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರಲ್ಲದೆ, 2024 ಮಾರ್ಚ್‌ನಲ್ಲಿ ಸ್ಥಾಪಿಸಲಾಗಿದೆ. ಜುಲೈನಲ್ಲಿ ನಿಂತು ಹೋಗಿದೆ ಅದರಿಂದ ರೋಗಿಗಳಿಗೆ ತೊಂದರೆ ಆಗುತ್ತಿದೆ ಇದರ ಬಗ್ಗೆ ಗಮನಹರಿಸಿ ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

**ಮಾರ್ಗಸೂಚಿ ಪ್ರಕಾರ ನೇಮಕಾತಿ ಮಾಡಿ:** ಜಾತಿ ಪ್ರಮಾಣ ಪತ್ರ ಕುರಿತು ಬಂದಂತಹ ಮನವಿ ಸ್ವೀಕರಿಸಿದ ಜಿಲ್ಲಾಧಿಕಾರಿ ಅವರು 2007 ರಲ್ಲಿ ಶಿಳ್ಳೆಕ್ಯಾತ ಎಂದು ಜಾತಿಪ್ರಮಾಣ ಪತ್ರ ಇದೆ. ಈಗ ಬುಡಬುಡಿಕೆ ಎಂದು ಬರುತ್ತಿದೆ. ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ಅನ್ಯಾಯ ಆಗಬಾರದು ಪರಿಶೀಲನೆ ಮಾಡಬೇಕು. ಸರ್ಕಾರದ ಮಾರ್ಗಸೂಚಿ ಅನ್ವಯ ಯಾವುದೇ ಇಲಾಖೆ ಗುತ್ತಿಗೆ ಆಧಾರದಲ್ಲಿ, ಹೊರಗುತ್ತಿಗೆಯಲ್ಲಿ ಹುದ್ದೆಗಳ ಭರ್ತಿ ಮಾಡುವ ಸಂದರ್ಭದಲ್ಲಿ ಕಡ್ಡಾಯವಾಗಿ ಶೇ.2 ರಷ್ಟು ವಿಶೇಷ ಚೇತನರನ್ನು ತೆಗೆದು ಕೊಳ್ಳಬೇಕು. ಸರ್ಕಾರದ ಮಾರ್ಗಸೂಚಿ ಅನುಸರಿಸಿ ನೇಮಕಾತಿ ಮಾಡಿರುವ ಬಗ್ಗೆ ಪ್ರತಿ ಇಲಾಖೆಯಿಂದ ಮಾಹಿತಿ ಪಡೆದು ವರದಿ ನೀಡುವಂತೆ ಹಿರಿಯ ನಾಗರಿಕರ ಮತ್ತು ವಿಕಲ ಚೇತನರ ಇಲಾಖೆ ಅಧಿಕಾರಿಗೆ ಸೂಚಿಸಿದರು.

**ರಸ್ತೆ ಅಪಘಾತ ತಡೆಗೆ ಕ್ರಮ ಅಗತ್ಯ**

ತಹಶೀಲ್ದಾರ್‌ಗಳು ರಸ್ತೆ ಸುರಕ್ಷತಾ ದೃಷ್ಟಿಯಿಂದ ತಾಲ್ಲೂಕು ಮಟ್ಟದಲ್ಲಿ ಟಾಸ್ಕ್ ಫೋರ್ಸ್ ಸಮಿತಿ ರಚನೆ ಮಾಡಿ ಪಾದಚಾರಿಗಳ ಸುಗಮ ಸಂಚಾರಕ್ಕೆ ಅನುವಾಗುವಂತೆ ಫುಟ್ ಪಾತ್ ಕ್ಲಿಯರೆನ್ಸ್ ಡ್ರೈವ್ ಮಾಡಲು ತಿಳಿಸಿದರು. ಘಟನೆ ಸಂಭವಿಸಿದ ನಂತರ ಕ್ರಮ ವಹಿಸುವುದಲ್ಲ, ಮುನ್ನೆಚ್ಚರಿಕೆ ವಹಿಸಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು ಈ ನಿಟ್ಟಿನಲ್ಲಿ ತಾಲ್ಲೂಕು ಮಟ್ಟದಲ್ಲಿ ಕೂಡಲೇ ಸಭೆ ನಡೆಸಿ ಸಂಚಾರಿ ನಿಯಮಗಳ ಪಾಲನೆ ಮತ್ತು ರಸ್ತೆ ಅಪಘಾತಗಳ ತಡೆಗಟ್ಟುವ ನಿಟ್ಟಿನಲ್ಲಿ ತಹಶೀಲ್ದಾರ್‌ಗಳು ಕ್ರಮ ಕೈಗೊಳ್ಳಲು ಸೂಚಿಸಿದರು.

**ಟ್ರಕ್ ಟರ್ಮಿನಲ್‌ಗೆ ಜಾಗ ಗುರುತಿಸಿ**

ಟ್ರಕ್ ಟರ್ಮಿನಲ್ ನಿರ್ಮಾಣಕ್ಕೆ ನಗರದ ಹೊರವಲಯದಲ್ಲಿ ಜಾಗವನ್ನು ಗುರುತಿಸುವಂತೆ ಸೂಚಿಸಿದರಲ್ಲದೆ, ಶಾಲಾ ವಾಹನ ಚಾಲಕರು ಸಮವಸ್ತ್ರವನ್ನು ಕಡ್ಡಾಯವಾಗಿ ಧರಿಸಬೇಕು. ವಾಹನ ಪರವಾನಗಿ ಹೊಂದಿರಬೇಕು. ಸಂಚಾರಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಕ್ರಮವಹಿಸಲು ಸೂಚಿಸಿದರಲ್ಲದೆ, ವಾಹನಗಳನ್ನು ಶಿಸ್ತುಬದ್ಧವಾಗಿ ನಿಲುಗಡೆ ಮಾಡಲು ತಿಳಿಸಿದರು. ರಸ್ತೆ ಬದಿಗಳಲ್ಲಿ ಎಲ್ಲೆಂದರಲ್ಲಿ ಕಸವನ್ನು ಹಾಕುತ್ತಿದ್ದಾರೆ ಇದನ್ನು ತಡೆಯುವ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

### ಪ್ರತ್ಯೇಕ ಸಭೆ ನಡೆಸಲು ನಿರ್ದೇಶನ

ಭೂ ಸ್ವಾಧೀನದಲ್ಲಿ ಕೈ ಬಿಟ್ಟು ಹೋಗಿರುವ ಪ್ರಕರಣಗಳನ್ನು ಪಟ್ಟಿ ಮಾಡಿ ಪರಿಶೀಲನೆ ಮಾಡಲು ಪ್ರತ್ಯೇಕ ಸಭೆ ಕರೆಯುವಂತೆ ಸೂಚಿಸಿದ ಅವರು, ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟಿರುವ ಜಮೀನುಗಳ ಖಾತೆಗೆ ಸಂಬಂಧಿಸಿದಂತೆ ಅಹವಾಲು ಬರುತ್ತಿದ್ದು, ನಗರಾಭಿವೃದ್ಧಿ ಕೋಶ ಹಾಗೂ ಮಹಾನಗರ ಪಾಲಿಕೆ ಅಧಿಕಾರಿಗಳು ಪ್ರತ್ಯೇಕ ಸಭೆ ನಡೆಸಬೇಕು. ವಾಣಿಜ್ಯ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡುವ ಸಂದರ್ಭದಲ್ಲಿ ಖುದ್ದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ವಾಹನ ನಿಲುಗಡೆಗೆ ಸ್ಥಳಾವಕಾಶ ಇದೆಯೇ ಎಂಬುದನ್ನು ಪರಿಶೀಲಿಸಿ ನಂತರ ಅನುಮತಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.ಅರಣ್ಯ ಇಲಾಖೆಯಿಂದ ರೈಲ್ವೆ ಬ್ಯಾರಿಕೇಡ್ ಸರಿಯಾಗಿ ಅಳವಡಿಸಿಲ್ಲ ಎಂಬ ದೂರಿನ ಕುರಿತಂತೆ ಅರಣ್ಯ ಇಲಾಖೆ ಅಧಿಕಾರಿ ಗಳೊಂದಿಗೆ ಸಭೆ ನಡೆಸುವಂತೆ ಉಪ ವಿಭಾಗಾಧಿಕಾರಿಗೆ ನಿರ್ದೇಶನ ನೀಡಿದರು.

# ಪೆಂಡಾಲ್ ಗಣಪತಿ ವಿಸರ್ಜನೆ



» ಮೊದಲನೇ ಪುಟದಿಂದ

**ಶಾಂತಿ, ಸಮೃದ್ಧಿ, ಸಂತೋಷ ಸುಭಿಕ್ಷವಾಗಲಿ: ಸಂಸದ**

ಹಾಸನ: ಪರಸ್ಪರ ಸ್ನೇಹ, ಏಕತೆ, ಸಾಮರಸ್ಯ, ಭ್ರಾತೃತ್ವದ ಸಂಕೇತವಾದ ಗಣೇಶ ಎಲ್ಲರಿಗೂ ಒಳಿತು ಮಾಡಲಿ, ಗಣೇಶನ ಆಶೀರ್ವಾದದಿಂದ ನಾಡಿನಲ್ಲಿ ಶಾಂತಿ, ಸಮೃದ್ಧಿ, ಸಂತೋಷ ಸುಭಿಕ್ಷವಾಗಿರಲಿ ಎಂದು ಸಂಸದ ಶ್ರೇಯಸ್ ಪಟೇಲ್ ಅವರು ತಿಳಿಸಿದರು.

ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದ ಅವರು, ಕಳೆದ ಏಳೂವರೆ ದಶಕಗಳಿಂದ ಗಣಪತಿ ಸೇವಾ ಸಮಿತಿ ಅರ್ಥಪೂರ್ಣ ಕಾರ್ಯಕ್ರಮ ಹಮ್ಮಿಕೊಂಡು ಬರುತ್ತಿದೆ. ಗಣೇಶ ಚತುರ್ಥಿ ಆರಂಭ ದಿನದಿಂದ ವಿಸರ್ಜನೆವರೆಗೆ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಿಕೊಂಡು ಬರುತ್ತಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಶಾಸಕ ಹೆಚ್.ಪಿ.ಸ್ವರೂಪ್ ಅವರು ಮಾತನಾಡಿ, ನಗರದ ಪೆಂಡಾಲ್ ಗಣಪತಿಯ ವಿಸರ್ಜನಾ ಮೆರವಣಿಗೆಯನ್ನು ಬಹಳ ವಿಜೃಂಭಣೆಯಿಂದ ನಡೆಸಲಾಗುತ್ತಿದೆ. ಗಣಪತಿ ಸೇವಾ ಸಂಸ್ಥೆಯಿಂದ ಪ್ರತಿ ವರ್ಷ ಆಕರ್ಷಕವಾಗಿ ಗಣಪತಿ ಮೆರವಣಿಗೆ ನಗರದ ರಾಜ ಬೀದಿಗಳಲ್ಲಿ ಸಾಗುತ್ತಿದೆ. ಗಣೇಶ ಎಲ್ಲರಿಗೂ ಒಳಿತನ್ನು ಮಾಡಲಿ. ಸಮಿತಿ ಅಧ್ಯಕ್ಷ ಡಾ.ಹೆಚ್.ನಾಗರಾಜು ಮತ್ತು ಪದಾಧಿಕಾರಿಗಳು ಅಚ್ಚುಕಟ್ಟಾಗಿ ಮೆರವಣಿಗೆ ಆಯೋಜನೆ ಮಾಡಿದ್ದಾರೆ. ಯಾವುದೇ ಗೊಂದಲಕ್ಕೆ ಅವಕಾಶ ಮಾಡಿಕೊಡದೆ ಶಾಂತಿಯುತವಾಗಿ ಉತ್ಸವ ನಡೆಯಲಿ ಎಂದರು.

ಮಹಾನಗರ ಪಾಲಿಕೆ ಉಪ ಮೇಯರ್ ಹೇಮಲತಾ ಕಮಲ್ ಕುಮಾರ್, ಧರ್ಮದರ್ಶಿಗಳಾದ ಲಲಾಟ್ ಮೂರ್ತಿ, ಬೂದೇಶ್, ಕಸಾಪ ಗೌರವ ಕಾರ್ಯದರ್ಶಿ ಅಧ್ಯಕ್ಷ ಹೆಚ್.ಬಿ. ಮದನಗೌಡ, ಪತ್ರಕರ್ತರಾದ ಜೆ.ಆರ್.ಕೆಂಚೇಗೌಡ, ರವಿ ನಾಕಲಗೂಡು, ಕೆ.ಪಿ.ಎಸ್. ಪ್ರಮೋದ್, ಹೆಚ್.ಟಿ.ಶೇಖರ್, ಹೆಚ್.ಎಸ್.ಅನಂತನಾರಾಯಣ, ಎನ್.ಎಸ್. ಶಂಕರ ರಾವ್, ಹೆಚ್.ಎಂ.ಟಿ.ಸುರೇಶ್ ಕುಮಾರ್, ಎಂ.ಕೆ. ಕಮಲ್ ಕುಮಾರ್, ಹೆಚ್.ಡಿ.ದೀಪಕ್, ಲೀಲಾಕುಮಾರ್, ಗಿರೀಗೌಡ, ಸಿ. ರಾಮಚಂದ್ರಯ್ಯ, ಹೆಚ್.ಪಿ.ಕಿರಣ್, ಪಿ.ಆರ್.ನಾಗೇಂದ್ರ ಇದ್ದರು.

## ಸರ್ಕಾರಿ ಶಾಲೆಯಲ್ಲಿ ಕಳ್ಳತನ

**ಚನ್ನರಾಯಪಟ್ಟಣ:** ಶಾಲೆಯ ಬೀಗ ಮುರಿದು 1.85 ಲಕ್ಷ ರೂ. ಮೌಲ್ಯದ ವಿವಿಧ ಸಾಮಗ್ರಿ ಕಳವು ಮಾಡಿರುವ ಘಟನೆ ತಾಲ್ಲೂಕಿನ ಬಳದರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದಿದೆ.

ಸೆ.18ರ ರಾತ್ರಿ ಮುಖ್ಯ ಶಿಕ್ಷಕರ ಕೊಠಡಿಯ ಪಕ್ಕದ ತರಗತಿ ಕೋಣೆಯ ಬೀಗ ಮುರಿದು ಒಂದು ಎಲ್‌ಇಡಿ ಟಿವಿ, ಸಿಪಿಯು ಮತ್ತು ಒಂದು ಯುಪಿಎಸ್ ಅನ್ನು ಕಳವು ಮಾಡಲಾಗಿದೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಗೂಡ್ಸ್ ವಾಹನಕ್ಕೆ ಬೈಕ್ ಡಿಕ್ಕಿ: ವೃದ್ಧ ಸಾವು

**ಹೊಳೆನರಸೀಪುರ:** ಟಾಟಾ ಏಸ್ ವಾಹನ ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ಪಟ್ಟಣದ ಅಗ್ನಿಶಾಮಕ ಕಚೇರಿ ಸಮೀಪ ನಡೆದಿದೆ.

ತಾಲ್ಲೂಕಿನ ಸಂಕನಹಳ್ಳಿ ಗ್ರಾಮದ ರಂಗೇಗೌಡ (71) ಮೃತರು. ಪಟ್ಟಣದಿಂದ ಬೈಕ್‌ನಲ್ಲಿ ಊರಿಗೆ ತೆರಳುತ್ತಿದ್ದಾಗ ರಸ್ತೆ ಮಧ್ಯೆ ನಿಲ್ಲಿಸಿದ್ದ ಗೂಡ್ಸ್ ವಾಹನಕ್ಕೆ ಡಿಕ್ಕಿಯಾಗಿದೆ. ವಾಹನ ಚಾಲಕ ಸಂಚಾರಿ ನಿಯಮ ಪಾಲಿಸದೆ ಹಾಗು ಇಂಡಿಕೇಟರ್ ಹಾಕದೇ ನಿರ್ಲಕ್ಷ್ಯದಿಂದ ರಸ್ತೆ ಮಧ್ಯೆಯೇ ನಿಲ್ಲಿಸಿದ್ದ. ವೇಗವಾಗಿ ಬೈಕ್‌ನಲ್ಲಿ ಬಂದ ರಂಗೇಗೌಡ ಅವರು ಡಿಕ್ಕಿ ಮಾಡಿದ್ದರಿಂದ ನೆಲಕ್ಕೆ ಬಿದ್ದು ಗಂಭೀರ ಗಾಯಗೊಂಡಿದ್ದರು. ಗಂಭೀರ ಗಾಯಗೊಂಡಿದ್ದ ಅವರನ್ನು ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಹಳೆಯ ವೈಷಮ್ಯದಿಂದ ವ್ಯಕ್ತಿ ಮೇಲೆ ಹಲ್ಲೆ

**ಹೊಳೆನರಸೀಪುರ:** ಹಣಕಾಸಿನ ವೈಷಮ್ಯದಿಂದ ನಾಲ್ವರು ಸೇರಿ ವ್ಯಕ್ತಿ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ತಾಲ್ಲೂಕಿನ ಜೋಡುಗುಬ್ಬಿ ಗ್ರಾಮದಲ್ಲಿ ನಡೆದಿದೆ.

ಹಳ್ಳಿಮೈಸೂರು ಹೋಬಳಿ ಒಡನಹಳ್ಳಿ ಗ್ರಾಮದ ರೂಪೇಶ್ ಗಾಯಾಳು. ಜೋಡಿಗುಬ್ಬಿಯ ಮಂಜೇಗೌಡ, ಸುರೇಶ್, ಗಣೇಶ ಹಾಗು ಚಂದ್ರೇಗೌಡ ಎಂಬುವವರು ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ.

ರೂಪೇಶ್ ಎಂಆರ್ ಸರ್ವಿಸ್ ಸ್ಟೇಷನ್ ಹೆಸರಿನಲ್ಲಿ ಪೆಟ್ರೋಲ್ ಬಂಕ್ ಹೊಂದಿದ್ದು ಅದರ ನಿರ್ವಹಣೆ ಜವಾಬ್ದಾರಿಯನ್ನು ಮಂಜೇಗೌಡ ಅವರಿಗೆ ವಹಿಸಿದ್ದರು. ಆದರೆ ಹಣಕಾಸಿನ ವಿಚಾರ ವಾಗಿ ಇಬ್ಬರ ನಡುವೆ ವೈಮನಸ್ಸು ಏರ್ಪಟ್ಟಿತ್ತು.

ಸೆ.18ರ ರಾತ್ರಿ 10ರ ಸಮಯದಲ್ಲಿ ರೂಪೇಶ್ ದುಮ್ಮಿಗೆ ಗ್ರಾಮಕ್ಕೆ ಕಾರಿನಲ್ಲಿ ತೆರಳುತ್ತಿದ್ದಾಗ ಮಾರ್ಗಮಧ್ಯೆ, ಜೋಡಿಗುಬ್ಬಿಯಲ್ಲಿ ವಾಹನ ನಿಲ್ಲಿಸಿ ಸಿಗರೇಟ್ ತೆಗೆದುಕೊಳ್ಳಲು ಅಂಗಡಿಗೆ ತೆರಳಿದ್ದರು. ಅಲ್ಲೇ ಇದ್ದ ಮಂಜೇಗೌಡ ಏಕಾಏಕಿ ನುಗ್ಗಿಬಂದು ರೂಪೇಶ್ ಮೇಲೆ ಹಲ್ಲೆ ನಡೆಸಿ ದ್ದಾನೆ. ನಂತರ ಸುರೇಶ್, ಗಣೇಶ, ಚಂದ್ರೇಗೌಡ ಎಂಬುವರು ಒಟ್ಟಾಗಿ ಮಚ್ಚು, ದೊಣ್ಣೆಯಿಂದ ಮನಬಂದಂತೆ ಹಲ್ಲೆ ನಡೆಸಿದ್ದಾರೆ. ಹಳ್ಳಿಮೈಸೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಹಣಕಾಸು ಸೇರ್ಪಡೆ ಪರಿಪೂರ್ಣತೆ ಅಭಿಯಾನ

• ಪ್ರಜೋದಯ ವರದಿ

**ಆಲೂರು:** ಪ್ರತಿಯೊಬ್ಬ ವ್ಯಕ್ತಿಯನ್ನು ಆರ್ಥಿಕ ವ್ಯವಸ್ಥೆಯಡಿ ತರುವ ಮೂಲಕ ಸಾರ್ವಜನಿಕರಿಗೆ ಸಾಮಾಜಿಕ ಭದ್ರತಾ ಯೋಜನೆಗಳನ್ನು ತಲುಪಿಸಲು ಹಣಕಾಸು ಸೇರ್ಪಡೆ ಪರಿಪೂರ್ಣತೆ ಅಭಿಯಾನದ ಮುಖ್ಯ ಉದ್ದೇಶವಾಗಿದೆ ಎಂದು ಬೆಂಗಳೂರು ಆರ್‌ಬಿಐ ಬ್ಯಾಂಕ್ ಪ್ರಾದೇಶಿಕ ನಿರ್ದೇಶಕಿ ಸೋನಾಲಿ ಸೇನ್ ಗುಪ್ತಾ ತಿಳಿಸಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಜಿಲ್ಲಾ ಲೀಡ್ ಬ್ಯಾಂಕ್ ಹಾಗೂ ಪಂಚಾಯಿತಿ ಸಹಯೋಗದಲ್ಲಿ ಏರ್ಪಡಿಸಲಾಗಿದ್ದ ಕಣತೂರು ಹಾಗೂ ಹುಣಸವಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಹಕರಿಗೆ 3 ತಿಂಗಳ ಹಣಕಾಸು ಸೇರ್ಪಡೆ ಪರಿಪೂರ್ಣತೆ ಅಭಿಯಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಹಣಕಾಸು ಸೇರ್ಪಡೆ ಪರಿಪೂರ್ಣತೆ ಅಭಿಯಾನ ವನ್ನು ಭಾರತ ಸರ್ಕಾರವು 2025 ರ ಜು 1 ರಿಂದ ಅ 30 ರವರೆಗೆ 3 ತಿಂಗಳು ರಾಷ್ಟ್ರವ್ಯಾಪಿಯಾಗಿ ನಡೆಸಲಾಗುತ್ತಿದೆ. ಪ್ರಧಾನಮಂತ್ರಿ ಜನಧನ್ ಯೋಜನೆ, ಪ್ರಧಾನ ಮಂತ್ರಿ ಜೀವನ್‌ಜ್ಯೋತಿ ಬಿಮಾ ಯೋಜನೆ,



ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ ಮತ್ತು ಅಟಲ್ ಪಿಂಚಣಿ ಯೋಜನೆಗಳಂತಹ ಹಣ ಕಾಸು ಸೇವೆಗಳನ್ನು ಎಲ್ಲ ಅರ್ಹ ವ್ಯಕ್ತಿಗಳಿಗೆ ತಲುಪಿಸುವ ಮೂಲಕ ಆರ್ಥಿಕ ಸೇರ್ಪಡೆಯನ್ನು ಸಂಪೂರ್ಣಗೊಳಿಸುವುದು ಇದರ ಮುಖ್ಯ ಉದ್ದೇಶವಾಗಿದೆ. ಈ ಅಭಿಯಾನದ ಅಂಗವಾಗಿ ದೇಶದಾದ್ಯಂತ ಶಿಬಿರಗಳನ್ನು ಆಯೋಜಿಸಿ, ಹಣ ಉಳಿತಾಯ, ಡಿಜಿಟಲ್ ಸಾಕ್ಷರತೆ ಮತ್ತು ಆನ್‌ಲೈನ್ ವಂಚನೆಗಳ ಬಗ್ಗೆ ಗ್ರಾಹಕರಿಗೆ ಮಾಹಿತಿ ನೀಡಲಾಗುವುದು ಎಂದರು.

ಬೆಂಗಳೂರು ಆರ್ ಬಿ ಐ ಬ್ಯಾಂಕ್‌ನ ಡೆಪ್ಯೂಟಿ ಜನರಲ್ ಮ್ಯಾನೇಜರ್ ಶೈಲೇಂದ್ರನಾಥ್ ಮಾತನಾಡಿ, ಬ್ಯಾಂಕ್‌ನಲ್ಲಿ ಖಾತೆ ಹೊಂದಿರುವ ಪ್ರತಿಯೊಬ್ಬರು ತಪ್ಪದೇ ಕೆವೈಸಿ ಮಾಡುವ ಮೂಲಕ ಖಾತೆಯನ್ನು ಸಕ್ರಿಯಗೊಳಿಸುವಂತೆ ತಿಳಿಸಿದರು.

ಹಾಸನ ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕಿ ಸರಸ್ವತಿ ರವರು, ಸರ್ಕಾರದ ಈ ಅಭಿಯಾನದಲ್ಲಿ ದೇಶಾದ್ಯಂತ ಪ್ರತಿಯೊಬ್ಬ ನಾಗರಿಕರು ಬ್ಯಾಂಕ್ ಖಾತೆ ಹೊಂದಿದ್ದಾರೆ. 18 ವರ್ಷ ಮೇಲ್ಪಟ್ಟ ಇನ್ಶೂರೆನ್ಸ್ ಪಾಲಿಸಿಗಳನ್ನು ಹೊಂದಬೇಕು. ದೇಶದಾದ್ಯಂತ 2.3 ಲಕ್ಷಕ್ಕೂ ಹೆಚ್ಚು ಶಿಬಿರಗಳನ್ನು ಆಯೋಜಿಸಲಾಗುತ್ತಿದೆ, ಈ ಶಿಬಿರಗಳಲ್ಲಿ ಬ್ಯಾಂಕ್ ಅಧಿಕಾರಿಗಳು ಹಣ ಉಳಿತಾಯ, ಡಿಜಿಟಲ್ ಸಾಕ್ಷರತೆ, ವಿದ್ಯಾರ್ಥಿಗಳಿಗೆ ಬ್ಯಾಂಕ್ ಖಾತೆಗಳ ಪ್ರಯೋಜನ, ಮತ್ತು ಆನ್‌ಲೈನ್ ವಂಚನೆಗಳ ಬಗ್ಗೆ ಮಾಹಿತಿ ನೀಡುವ ಮೂಲಕ ಗ್ರಾಹಕರಿಗೆ ಜಾಗೃತಿ ಹಾಗೂ ಅರಿವು ಮೂಡಿಸಲಾಗುತ್ತಿದೆ ಎಂದರು.

ಬೆಂಗಳೂರು ಆರ್‌ಬಿಐ ಪ್ರಾದೇಶಿಕ ನಿರ್ದೇಶಕಿ ಸೋನಾಲಿಸೇನ್ ಗುಪ್ತಾ, ಜನರಲ್ ಮ್ಯಾನೇಜರ್ ಮೀನಾಕ್ಷಿ ಗಂಜು, ಎ ಜಿ ಎಂ ಎಫ್ ಐ ಡಿ ಡಿ ಬುಬುಲ್ ಬಿ. ಲೊಯಿ, ಡೆಪ್ಯೂಟಿ ಜನರಲ್ ಮ್ಯಾನೇಜರ್ ಶೈಲೇಂದ್ರ ನಾಥ ಸೇಠ್, ಎಸ್ ಬಿ ಐ ಬ್ಯಾಂಕ್ ಉಪ ಪ್ರಧಾನ ವ್ಯವಸ್ಥಾಪಕ ಕೃಷ್ಣ ಮೋಹನ್ ಮುಚ್ಚರ್ಲ, ಪ್ರಾದೇಶಿಕ ವ್ಯವಸ್ಥಾಪಕ ಕನಯ್ಯಲಾಲ್ ಗೋಪಾಲಿ, ಡಿವಿಜನಲ್ ಮ್ಯಾನೇಜರ್ ಜಂಬುಲ್ಕರ್, ಬ್ಯಾಂಕ್ ಆಫ್ ಬರೋಡ ಹಾಸನ ಶಾಖೆಯ ಮ್ಯಾನೇಜರ್ ಸುರೇಶ್ ಶೆಟ್ಟಿ, ಮೈಸೂರು ಕರ್ನಾಟಕ ಬ್ಯಾಂಕ್ ಸಹಾಯಕ ಜನರಲ್ ಮ್ಯಾನೇಜರ್ ಡಾ ಅರುಣ್ ಕುಮಾರ್, ಸಂದೀಪ್ ಸಿಂಗ್, ಹಾಸನ ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕಿ ಸರಸ್ವತಿ, ಆಲೂರು ಬ್ಯಾಂಕಿನ ವ್ಯವಸ್ಥಾಪಕರಾದ ಭವ್ಯ, ಪುಷ್ಪಲತಾ ರಾಕೇಶ್, ಪ್ರಕಾಶ್, ಪ್ರಶಾಂತ್, ಆಲೂರು ತಾಲ್ಲೂಕು ಪಂಚಾಯಿತಿ ಎನ್‌ಆರ್ ಎಲ್ ಎಂ ವ್ಯವಸ್ಥಾಪಕಿ ಮಂಗಳ, ಭವ್ಯ ಇನ್ನಿತರರಿದ್ದರು.

# ವಿದ್ಯಾರ್ಥಿ ಜೀವನದಲ್ಲಿ ಕ್ರೀಡೆಗೆ ಮಹತ್ವದ ಸ್ಥಾನ



• ಪ್ರಜೋದಯ ವರದಿ

**ಹಾಸನ:** ವಿದ್ಯಾರ್ಥಿ ಜೀವನದಲ್ಲಿ ಕ್ರೀಡೆಗೆ ಮಹತ್ವದ ಸ್ಥಾನ ನೀಡಲಾಗಿದೆ. ಕ್ರೀಡೆಗಳು ನಮ್ಮನ್ನು ಆರೋಗ್ಯವಾಗಿಡುವುದು ಮಾತ್ರವಲ್ಲದೆ, ಮಾನಸಿಕವಾಗಿ ಸದೃಢರಾಗುವಂತೆ ಮಾಡುತ್ತದೆ ಎಂದು ಸಂಸದ ಶ್ರೇಯಸ್ ಪಟೇಲ್ ಅವರು ತಿಳಿಸಿದರು.

ಜಿಲ್ಲಾ ಕ್ರೀಡಾಂಗಣದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಬಾಲಕ ಮತ್ತು ಬಾಲಕಿಯರ ಕ್ರೀಡಾಕೂಟ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ವ್ಯಕ್ತಿ ಕ್ರಿಯಾಶೀಲವಾಗಿರಬೇಕೆಂದರೆ ಆಟೋಟಗಳಲ್ಲಿ ಪಾಲ್ಗೊಳ್ಳಬೇಕು. ವಿದ್ಯಾರ್ಥಿಗಳು ಸೋಲು-ಗೆಲುವನ್ನು ಸಮಾನವಾಗಿ ಸ್ವೀಕರಿಸಿ ಕ್ರೀಡೆಯಲ್ಲಿ ಪಾಲ್ಗೊಳ್ಳಬೇಕೆಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ದೈಹಿಕ ಶಿಕ್ಷಣ ಶಿಕ್ಷಕರು, ಶಿಕ್ಷಕರು, ಕ್ರೀಡಾಪಟುಗಳು ಹಾಜರಿದ್ದರು.

## ಸೆ.23ಕ್ಕೆ ಕೆ.ಡಿ.ಪಿ. ಸಭೆ

**ಹಾಸನ:** ಜಿಲ್ಲಾ ಉಸ್ತುವಾರಿ ಸಚಿವರ ಕೃಷ್ಣ ಬೈರೇಗೌಡ ಅಧ್ಯಕ್ಷತೆಯಲ್ಲಿ 2025-26ನೇ ಸಾಲಿನ ಆಗಸ್ಟ್-2025ರ ಅಂತ್ಯಕ್ಕೆ ಕೆ.ಡಿ.ಪಿ ಪ್ರಗತಿ ಪರಿಶೀಲನಾ ಸಭೆಯನ್ನು ಸೆ.23 ರಂದು ಬೆ.10.30 ಗಂಟೆಗೆ ನಿಗಧಿಪಡಿಸಲಾಗಿದೆ.

# ಸೆ.23 ರಂದು ರಾಷ್ಟ್ರೀಯ ಆಯುರ್ವೇದ ದಿನಾಚರಣೆ

## ಎಸ್‌ಡಿಎಂ ಕಾಲೇಜಿನಲ್ಲಿ ಆಯೋಜನೆ | ಸೆ.28 ರಂದು ಆರೋಗ್ಯ ಉಚಿತ ತಪಾಸಣೆ

• ಪ್ರಜೋದಯ ವರದಿ

**ಹಾಸನ:** ರಾಷ್ಟ್ರೀಯ ಆಯುರ್ವೇದ ದಿನಾಚರಣೆಯನ್ನು ಸೆ.23 ರಂದು ನಗರದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲರಾದ ಡಾ||ಶೈಲಜಾ ಅವರು ತಿಳಿಸಿದರು.





ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಮೊದಲು ಭಾರತ ಸರ್ಕಾರದ ಆಯುಷ್ ಸಚಿವಾಲಯ ಕಾರ್ತಿಕ ಮಾಸದ ಕೃಷ್ಣ ಪಕ್ಷದ ತ್ರಯೋದಶಿಯನ್ನು ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಎಂದು ಆಚರಿಸಲು ನಿರ್ಧರಿಸಿತು. ಈ ವರ್ಷದಿಂದ ಪ್ರಧಾನಿ ನರೇಂದ್ರ ಮೋದಿ ಅವರೂ ಪ್ರತಿ ವರ್ಷ ಸೆ.23 ರಂದು ಆಯುರ್ವೇದ ದಿನಾಚರಣೆ ಎಂದು ಆಚರಿಸಬೇಕೆಂದು ಘೋಷಿಸಿದ್ದಾರೆ ಎಂದರು.

ಈ ಬಾರಿ 10ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆಯನ್ನು ಅರ್ಥಪೂರ್ಣವಾಗಿ, ವಿಭಿನ್ನ ಚಟುವಟಿಕೆಗಳ ಮೂಲಕ ಆಚರಿಸಲಾಗುತ್ತಿದೆ. ಸೆ.12 ರಿಂದಲೇ ಪ್ರಾರಂಭವಾಗಿರುವ 20ಕ್ಕೂ ಹೆಚ್ಚು ಚಟುವಟಿಕೆ ತಿಂಗಳ ಕೊನೆವರೆಗೂ ನಡೆಯುತ್ತಿವೆ. ಉಚಿತ ಆರೋಗ್ಯ ತಪಾಸಣೆ ಮತ್ತು ಶಿಬಿರ ಸೆ.28 ರಂದು ಬೆಳಿಗ್ಗೆ 10 ರಿಂದ ಸಂಜೆ 4ರ ವರೆಗೂ ಆಸ್ಪತ್ರೆಯಲ್ಲಿ ನಡೆಯಲಿದೆ. ಇದಲ್ಲದೆ ಸೆ.30 ರವರೆಗೆ ಆಸ್ಪತ್ರೆಯ ವಾರ್ಡ್ ದರದಲ್ಲಿ ವಿಶೇಷ ರಿಯಾಯಿತಿ ನೀಡಲಾಗುತ್ತಿದೆ ಎಂದು ಹೇಳಿದರು.

ಯೋಗ ತರಬೇತಿ ಶಿಬಿರ, ವಿದ್ಯಾರ್ಥಿಗಳಿಗಾಗಿ ಆರೋಗ್ಯಕರ ಜೀವನಶೈಲಿ ಕುರಿತು ಪ್ರಾಯೋಗಿಕ ತರಬೇತಿ, ಆಯುರ್ವೇದ ಆಹಾರ ತಯಾರಿಕೆ, ಸಾಂಪ್ರದಾಯಿಕ ಹಾಗೂ ಪೌಷ್ಟಿಕ ಆಹಾರಗಳ ಪರಿಚಯ, ಪ್ರಾತ್ಯಕ್ಷಿಕೆ, ವಿವಿಧ ಚಿಕಿತ್ಸಾ ಕ್ರಮಗಳ ನೇರ ಪ್ರದರ್ಶನ, ವಿಶೇಷ ಉಪನ್ಯಾಸ, ಆಯುರ್ವೇದ ತಜ್ಞರಿಂದ ಉಪಯುಕ್ತ ವಿಷಯಗಳ ಬಗ್ಗೆ ಉಪನ್ಯಾಸ, ಭಿತ್ತಿಪತ್ರ ಸ್ಪರ್ಧೆ, ವಿದ್ಯಾರ್ಥಿಗಳ ಸೃಜನಶೀಲತೆ ಉತ್ತೇಜಿಸುವ ಸಾಂಸ್ಕೃತಿಕ ಚಟುವಟಿಕೆ, ವಸ್ತು ಪ್ರದರ್ಶನ ಸೆ.13 ರಿಂದ 23 ರವರೆಗೆ ಆಯುರ್ವೇದದ ಉಪಯುಕ್ತ ಅಂಶಗಳನ್ನು ಜನಸಾಮಾನ್ಯರಿಗೆ ತಲುಪಿಸಲು ವಿಶಾಲ ವಸ್ತು ಪ್ರದರ್ಶನ ಏರ್ಪಡಿಸಲಾಗಿದೆ ಎಂದು ಮಾಹಿತಿ ನೀಡಿದರು.

ಎಸ್.ಡಿ.ಎಂ. ಆಯುರ್ವೇದ ಆಸ್ಪತ್ರೆ ಕಟ್ಟಡ ಮುಂಭಾಗ ಬೆಳಿಗ್ಗೆ 9 ರಿಂದ ಸಂಜೆ 5 ರ ವರೆಗೆ ಸೆ.13-23ರ ವರೆಗೂ ಲಭ್ಯವಿದೆ. ಇದಲ್ಲದೆ ಸಂಸ್ಥೆಯ ಯುವ ಸಂಶೋಧಕರು ಹಾಗು ಅನುಭವಿ ವೈದ್ಯರಿಂದ ಒಟ್ಟು 50 ಆರೋಗ್ಯ ಲೇಖನ ಸ್ಥಳೀಯ ದಿನಪತ್ರಿಕೆಯಲ್ಲಿ ಪ್ರತಿದಿನ ಪ್ರಕಟವಾಗುತ್ತಿವೆ. ನಗರದ ಸುತ್ತಮುತ್ತಲಿನ ಶಂಕರನಹಳ್ಳಿ, ಕೋರವಂಗಲ, ದೇವೇಗೌಡನಗರ ಗ್ರಾಮಗಳಲ್ಲಿ ಸಂಸ್ಥೆಯ ವೈದ್ಯರು ತೆರಳಿ ಆರೋಗ್ಯ ಸಭೆ ನಡೆಸುತ್ತಿದ್ದಾರೆ. ಗ್ರಾಮಸ್ಥರಿಗೆ ಆಯುರ್ವೇದದ ಸರಳ ಆರೋಗ್ಯ ಸೂತ್ರಗಳ ಪರಿಚಯ, ಶಾಲಾ ಮಕ್ಕಳೊಂದಿಗೆ ಆರೋಗ್ಯ ಸಂವಾದ ಗ್ರಾಮಮಟ್ಟದ ಜಾಗೃತಿ ಕಾರ್ಯಕ್ರಮಗಳು ಜನಸಾಮಾನ್ಯರಿಂದ ಉತ್ತಮ ಸ್ವೀಕಾರ ಪಡೆದಿವೆ ಎಂದು ತಿಳಿಸಿದರು.

ಉಪಪ್ರಾಂಶುಪಾಲ ಡಾ||ಎಂ. ಅಶ್ವಿನಿಕುಮಾರ್, ಡಾ||ಚೇತನ್, ಡಾ||ಗುರು ಬಸವರಾಜು ಯಲಗಚ್ಚಿನ ಉಪಸ್ಥಿತರಿದ್ದರು.

## ಐಸಿಒ ಸಭೆಗೆ ವಿಶೇಷ ಆಹ್ವಾನಿತರಾಗಿ ಮೋಹನ್ ಕುಮಾರ್



**ಹಾಸನ:** ಮಧ್ಯ ಅಮೇರಿಕಾದ ಹೊಂಡು ರಾಸ್‌ನಲ್ಲಿ ಅ.13 ರಿಂದ 17 ರವರೆಗೆ ನಡೆಯಲಿರುವ ಅಂತರರಾಷ್ಟ್ರೀಯ ಕಾಫಿ ಸಂಸ್ಥೆ (ಐಸಿಒ)ಯ ಸಭೆಗೆ ವಿಶೇಷ ಆಹ್ವಾನಿತರಾಗಿ ಕರ್ನಾಟಕ ಬೆಳೆಗಾರರ ಸಂಘದ ವಿಶೇಷ ಪ್ರತಿನಿಧಿಯಾಗಿ ಮಾಜಿ ಅಧ್ಯಕ್ಷ ಡಾ. ಹೆಚ್.ಟಿ.ಮೋಹನ್‌ಕುಮಾರ್ ಅವರು ಭಾಗವಹಿಸಲಿದ್ದಾರೆ.

ಸೆ.26 ರಂದು ಪ್ರಯಾಣ ಬೆಳೆಸಲಿರುವ ಅವರು 7ನೇ ಐಸಿಒ ಹಾಗು ಜಾಗತಿಕ ನಾಯಕರ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಕಾಫಿ ಉತ್ಪಾದಿಸುವ ರಾಷ್ಟ್ರಗಳ ಆರ್ಥಿಕ ಹಾಗು ರಾಜಕೀಯ ಸ್ಥಿತಿಗತಿ, ಬದಲಾಗುತ್ತಿರುವ ವಿದ್ಯಮಾನಗಳು ಕುರಿತು, ಭವಿಷ್ಯದ ಕಾಫಿ ಮಾರುಕಟ್ಟೆ ವಿಚಾರವಾಗಿ ಚರ್ಚೆ ನಡೆಯಲಿದೆ ಯೆಂದು ಸಂಘದ ಅಧ್ಯಕ್ಷ ಹೆಚ್.ಬಿ.ಶಿವಣ್ಣ ಹಾಗು ಪ್ರಧಾನ ಕಾರ್ಯದರ್ಶಿ ಟಿ.ಪಿ.ಸುರೇಂದ್ರ ತಿಳಿಸಿದ್ದಾರೆ.

## ಮೆಳಗೋಡು ಗ್ರಾಮದಲ್ಲಿ ಎನ್‌ಎಸ್‌ಎಸ್ ಶಿಬಿರ: ಮಾಜಿ ಯೋಧರ ಮೆಚ್ಚುಗೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲೇ ಅತಿ ಹೆಚ್ಚು ಸೈನಿಕರನ್ನು ದೇಶಕ್ಕೆ ನೀಡಿರುವ ತಾಲ್ಲೂಕಿನ ಮೆಳಗೋಡು ಗ್ರಾಮದಲ್ಲಿ ಎನ್‌ಎಸ್‌ಎಸ್ ಶಿಬಿರ ಹಮ್ಮಿಕೊಂಡಿರುವುದು ಒಳ್ಳೆಯ ಬೆಳವಣಿಗೆಯೆಂದು ನಿವೃತ್ತ ಯೋಧರ ಕ್ಷೇಮಾಭಿವೃದ್ಧಿ ಸಂಘದ ತಾಲ್ಲೂಕು ಅಧ್ಯಕ್ಷ ಕರಿಗೌಡ ಅವರು ತಿಳಿಸಿದರು.

ತಾಲ್ಲೂಕಿನ ಮೆಳಗೋಡು ಗ್ರಾಮದಲ್ಲಿ ಶನಿವಾರ ನಡೆದ ರಾಷ್ಟ್ರೀಯ ಸೇವಾ ಯೋಜನೆ ವಿಶೇಷ ಶಿಬಿರದಲ್ಲಿ ಮಾತನಾಡಿ, ಗ್ರಾಮದಲ್ಲಿ 60ಕ್ಕೂ ಹೆಚ್ಚು ಯೋಧರು ದೇಶ ಸೇವೆಗೆ ಸೇರಿದ್ದಾರೆ. ಜಿಲ್ಲೆಯಲ್ಲಿ ಮೂರುವರೆ ಸಾವಿರಕ್ಕೂ ಹೆಚ್ಚು ಸೈನಿಕರಿದ್ದು ಒಂದು ಗ್ರಾಮದಲ್ಲೇ 60ಕ್ಕೂ ಹೆಚ್ಚು



ಸೈನಿಕರಿರುವುದು ಹೆಮ್ಮೆಯ ವಿಚಾರ. ದೇಶ ಉಳಿಯಬೇಕೆಂದರೆ ಮನೆಗೊಬ್ಬರಂತೆ ದೇಶ ಸೇವೆ ಮಾಡಲು ಮುಂದೆ ಬರಬೇಕೆಂದು ಕರೆ ನೀಡಿದ ಅವರು, ಎನ್‌ಎಸ್‌ಎಸ್ ಶಿಬಿರಾರ್ಥಿಗಳು ಸಹ ತಾವು ಹೋದಲೆಲ್ಲಾ ದೇಶ ಸೇವೆ ಮಾಡಲು ಯುವಕರನ್ನು ಪ್ರೇರೇಪಿಸುವಂತೆ ತಿಳಿಸಿದರು.

ಶಿಬಿರದ ಕಾರ್ಯಕ್ರಮಾಧಿಕಾರಿ ಸುಬ್ರಾಯ ಪ್ರಭು ಅವರು ಮಾತನಾಡಿ, ಸೈನಿಕರ ಗ್ರಾಮವಾದ ಈ ಪುಣ್ಯ ಭೂಮಿಯಲ್ಲಿ ಎನ್‌ಎಸ್‌ಎಸ್ ಶಿಬಿರ ಆಯೋಜನೆ ಮಾಡಿರುವುದು ನಮಗೆ ಹೆಮ್ಮೆಯ ವಿಷಯ. ಶಿಬಿರಾರ್ಥಿಗಳಿಗೆ ಗ್ರಾಮಸ್ಥರು ಉತ್ತಮ ಸಹಕಾರ ನೀಡುತ್ತಿದ್ದಾರೆಂದರು.

ಶಿಬಿರಾರ್ಥಿಗಳು, ಮಾಜಿ ಯೋಧರು ಹಾಗು ಗ್ರಾಮಸ್ಥರು ಇದ್ದರು.

## ಅ.2ರ ವರೆಗೆ ಶ್ರೀ ಚೌಡೇಶ್ವರಿ ದೇವಿಯ 14ನೇ ನವರಾತ್ರಿ ಉತ್ಸವ

# ನಾಳೆಯಿಂದ ಹಿರೀಸಾವೆಯಲ್ಲಿ ದಸರಾ ಮಹೋತ್ಸವ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಹಿರೀಸಾವೆ ಗ್ರಾಮದಲ್ಲಿ ಸೆ.22 ರಿಂದ ಅ.2 ರ ವರೆಗೆ ಶ್ರೀ ಚೌಡೇಶ್ವರಿ ದೇವಿಯ 14ನೇ ವರ್ಷದ ನವರಾತ್ರಿ ಹಾಗೂ ದಸರಾ ಉತ್ಸವ ವಿಜೃಂಭಣೆಯಿಂದ ನಡೆಯಲಿದೆ.

ಸೆ.22 ಸೋಮವಾರ ಬೆಳಿಗ್ಗೆ 10 ಗಂಟೆಗೆ ಉಯ್ಯಾಲೆ ಕಂಬದ ಹತ್ತಿರ ಶ್ರೀ ಚೌಡೇಶ್ವರಿ ದೇವಿಯ ನವರಾತ್ರಿ ಹಾಗೂ ದಸರಾ ಮಹೋತ್ಸವಕ್ಕೆ ಶಾಸಕ ಸಿ.ಎನ್.ಬಾಲಕೃಷ್ಣ ಚಾಲನೆ ನೀಡಲಿದ್ದಾರೆ. ಮಾಜಿ ಎಂಎಲ್ಸಿ ಗೋಪಾಲಸ್ವಾಮಿ, ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಗಮದ ಅಧ್ಯಕ್ಷ ಹೆಚ್.ಸಿ.ಲಲಿತ್ ರಾಘವ್, ಗ್ರಾಪಂ ಅಧ್ಯಕ್ಷೆ ಜಯಮ್ಮ ಬೋರಯ್ಯ, ಸೊಸೈಟಿ ಅಧ್ಯಕ್ಷ ಮಹೇಶ್, ಗ್ರಾಪಂ ಮಾಜಿ ಅಧ್ಯಕ್ಷ ಹೆಚ್. ಈ.ಬೋರಣ್ಣ ಹಾಗೂ ಗಣ್ಯರು ದೀಪ ಬೆಳಗಿಸಲಿದ್ದಾರೆ.

ಸೆ.23 ಮಂಗಳವಾರ ಮಧ್ಯಾಹ್ನ 12 ಗಂಟೆಗೆ ದಿ.ಹೆಚ್.ಸಿ. ಶ್ರೀಕಂಠಯ್ಯನವರ ಕುಟುಂಬದವರಿಂದ ಚಂಡಿಕಾ ಹೋಮ, ಪೂರ್ಣಾಹುತಿ ಜರುಗಲಿದ್ದು, ಸಂಜೆ 7 ಗಂಟೆಗೆ ಶ್ರೀ ಚೌಡೇಶ್ವರಿ ದೇವಿ ದೀಪೋತ್ಸವ ನೆರವೇರಲಿದೆ.



ಸೆ.24 ಬುಧವಾರ ಮಧ್ಯಾಹ್ನ 12 ಗಂಟೆಗೆ ಧರ್ಮದರ್ಶಿ ಶ್ರೀ ಫಣೀಶ್ ಕುಟುಂಬದವರಿಂದ ಹೋಮ, ಹವನ ಹಾಗೂ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಲಿವೆ. ಸಂಜೆ 7 ಗಂಟೆಗೆ ಶ್ರೀ ಚೌಡೇಶ್ವರಿ ದೇವಿಯ ಅಶ್ವ ವಾಹ ನೋತ್ಸವ ನಡೆಯಲಿದೆ.

ಸೆ.25 ಗುರುವಾರ ಸವಿತಾ ಶಿವನಂಜೇಗೌಡ ಅವರಿಂದ ಹೋಮ ಕಾರ್ಯಕ್ರಮ ಜರುಗಲಿದ್ದು, ಚೌಡೇಶ್ವರಿ ದೇವಿಯ ಸಿಂಹ ವಾಹನೋತ್ಸವ ನೆರವೇರಲಿದೆ.

ಸೆ.26 ಶುಕ್ರವಾರ ಎಸ್‌ಬಿಐ ನಿವೃತ್ತ ವ್ಯವಸ್ಥಾಪಕ ಕೃಷ್ಣನ್ ಅವರಿಂದ ದೇವಿಗೆ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಲಿದ್ದು ಸಂಜೆ 7 ಗಂಟೆಗೆ ಶ್ರೀ ಚೌಡೇಶ್ವರಿ ದೇವಿಯ ಚಿಕ್ಕ ರಥೋತ್ಸವ ನಡೆಯಲಿದೆ.

ಸೆ.27 ಶನಿವಾರ ಶ್ರೀ ಗಂಗಾಮತಸ್ಥರು ಶ್ರೀ ಚೌಡೇಶ್ವರಿ ದೇವಿಯ ಅಶ್ವ ವಾಹನೋತ್ಸವ ಕೈಗೊಳ್ಳಲಿದ್ದು ಸೆ.28 ಭಾನುವಾರ ಶ್ರೀ ಚೌಡೇಶ್ವರಿ ದೇವಿಯ ಸಿಂಹ ವಾಹನೋತ್ಸವ ನಡೆಯಲಿದೆ.

ಸೆ.29 ಸೋಮವಾರ ಮೇಲುಕೋಟೆ ಶ್ರೀ ಚೆಲುವರಾಯಸ್ವಾಮಿ ಒಕ್ಕಲುಗಳಿಂದ ಉಯ್ಯಾಲೆ ಉತ್ಸವ ಹಾಗೂ ಸೆ.30 ರ ಮಂಗಳವಾರ ಶ್ರೀ ಕುಂಭೇಶ್ವರ ಸ್ವಾಮಿ ಸೇವಾ ಸಮಿತಿ ವತಿಯಿಂದ ಅಶ್ವ ವಾಹನೋತ್ಸವ ವೈಭವದಿಂದ ಜರುಗಲಿದೆ.

ಆ.1 ರ ಬುಧವಾರ ವೀರಶೈವ ಸಮಾಜದ ವತಿಯಿಂದ ದೇವಿಯ ಸಿಂಹ ವಾಹನೋತ್ಸವ ಹಾಗೂ ಸೆ.2 ರಂದು ಗುರುವಾರ ಶ್ರೀ ಚೌಡೇಶ್ವರಿ ಸೇವಾ ಸಮಿತಿ ವತಿಯಿಂದ ಶ್ರೀ ಚೌಡೇಶ್ವರಿದೇವಿ ದಸರಾ ಮಹೋತ್ಸವ ವೈಭವದಿಂದ ಆಚರಣೆಗೊಳ್ಳಲಿದೆ.

ಅ.2 ರ ಬುಧವಾರ ರಾತ್ರಿ 8 ಗಂಟೆಗೆ ಶ್ರೀ ವಿದ್ಯಾ ಗಣಪತಿ ಉತ್ಸವ ವೈಭವದಿಂದ ಜುರುಗಲಿದ್ದು ಬೆಳಗ್ಗಿನ ಜಾವ ಹಿರೀಸಾವೆ ದೊಡ್ಡ ಕೆರೆಯಲ್ಲಿ ವಿಸರ್ಜಿಸಲಾಗುವುದು.

ಶ್ರೀ ಗಣೇಶ ಮೂರ್ತಿ, ಶ್ರೀ ಬಸವೇಶ್ವರ, ಶ್ರೀ ಸಿದ್ದಲಿಂಗೇಶ್ವರ, ಶ್ರೀ ಸಿದ್ದೇಶ್ವರ, ಶ್ರೀ ಕಾಳಿಕಾಂಬ ದೇವತೆ, ಶ್ರೀ ಉಡಿಸಲಮ್ಮದೇವಿ, ಶ್ರೀ ಲಕ್ಷ್ಮಿದೇವಿ, ಶ್ರೀ ಮುದ್ರೆಕಲ್ ಆಂಜನೇಯ ಸ್ವಾಮಿ ಹಾಗೂ ಶ್ರೀ ಚನ್ನಕೇಶ್ವರ ಸ್ವಾಮಿ ಪಾಲ್ಗೊಳ್ಳುವುದು ವಿಶೇಷವಾಗಿದೆ.

ದಸರಾ ಮಹೋತ್ಸವದಲ್ಲಿ ವಿವಿಧ ಕಲಾತಂಡಗಳು ಮೇಳೈಸಲಿವೆ ಎಂದು ಶ್ರೀ ಚೌಡೇಶ್ವರಿ ದೇವಿಯ ದೇಗುಲದ ಧರ್ಮದರ್ಶಿ ಫಣೀಶ್ ತಿಳಿಸಿದ್ದಾರೆ.

# ಬೆಳೆ ಸಮೀಕ್ಷಾ ಸಿಬ್ಬಂದಿಗೆ ಸುರಕ್ಷತಾ ಸೌಲಭ್ಯ ಕಲ್ಪಿಸಿ

## ಗುರುತಿನ ಚೀಟಿ, ಆರೋಗ್ಯ ವಿಮೆಗೆ ಬೇಡಿಕೆ | ಸಕಲೇಶಪುರದಲ್ಲಿ ಕಾರ್ಯಾಗಾರ

• ಪ್ರಜೋದಯ ವರದಿ

**ಸಕಲೇಶಪುರ:** ಸರ್ಕಾರದಿಂದ ಕೈಗೊಳ್ಳುವ ಖಾಸಗಿ ಬೆಳೆ ಸಮೀಕ್ಷೆ ಸಿಬ್ಬಂದಿಗೆ ಅಗತ್ಯ ಸೌಕರ್ಯ ಕಲ್ಪಿಸಬೇಕೆಂದು ಸಮೀಕ್ಷೆದಾರರು ಅಧಿಕಾರಿಗಳ ಗಮನ ಸೆಳೆದರು.

ತಾಪಂ ಸಭಾಂಗಣದಲ್ಲಿ ಶನಿವಾರ 2025-26ನೇ ಸಾಲಿನ ಮುಂಗಾರು ಬೆಳೆ ಸಮೀಕ್ಷೆ ಕೈಗೊಳ್ಳುವ ಬಗ್ಗೆ ಕೃಷಿ, ಕಂದಾಯ ಮತ್ತು ತೋಟಗಾರಿಕೆ ಇಲಾಖೆ ವತಿಯಿಂದ ನಡೆದ ಖಾಸಗಿ ಬೆಳೆ ಸಮೀಕ್ಷೆದಾರರಿಗೆ ಕಾರ್ಯಾಗಾರದಲ್ಲಿ ಸಮಸ್ಯೆ ಹೇಳಿಕೊಂಡರು.

ಸಮೀಕ್ಷೆದಾರರ ತಾಲ್ಲೂಕು ಪ್ರತಿನಿಧಿ ಈಶ್ವರಹಳ್ಳಿ ಬಸವರಾಜು ಅವರು ಮಾತನಾಡಿ, ಬೆಳೆ ಸಮೀಕ್ಷೆಗೆಂದು ತೋಟದೊಳಗೆ ಹೋದರೆ ಮಾಲೀಕರು ಗುರುತಿನ ಚೀಟಿ ಕೇಳುತ್ತಾರೆ. ಇಲಾಖೆಯಿಂದ ಚೀಟಿ ನೀಡಬೇಕು. ಮಲೆನಾಡು ಭಾಗದಲ್ಲಿ ಕಾಡಾನೆ, ಕಾಡು ಪ್ರಾಣಿ ಹಾವಳಿ, ಹೆಚ್ಚಿದೆ. ಹಾವು, ಚೇಳು ಕಚ್ಚಿರುವ ಪ್ರಸಂಗಗಳು ಇವೆ. ಆದ್ದರಿಂದ ಸಮೀಕ್ಷಾ ಸಿಬ್ಬಂದಿಗೆ ಆರೋಗ್ಯ ವಿಮೆ ಮಾಡಿಸಬೇಕೆಂದರು.

ನಿತ್ಯ ಜಿಗಣೆ ಕಚ್ಚಿ ಕಾಲುಗಳಿಂದ





ರಕ್ತ ಸುರಿಯುವುದು ಸಾಮಾನ್ಯವಾಗಿದೆ. ಈ ಸಮಸ್ಯೆಗೆ ಇಲಾಖೆಯವರು ಗಮ್ ಬೂಟ್ ಒದಗಿಸಿ ಎಂದು ಎಷ್ಟೇ ಮನವಿ ಮಾಡಿದರೂ ಪ್ರಯೋಜನವಾಗಿಲ್ಲವೆಂದರು.

ತಾಲ್ಲೂಕು ಕೃಷಿಕ ಸಮಾಜದ ಅಧ್ಯಕ್ಷ ಹೆತ್ತೂರು ದೇವರಾಜು ಮಾತನಾಡಿ, ತಾಲ್ಲೂಕಿನಲ್ಲಿ ಈ ವರ್ಷವೂ ವಾಡಿಕೆಗಿಂತ ಎರಡು ಪಟ್ಟು ಅಧಿಕ ಮಳೆಯಾಗಿದೆ. ಕಾಫಿ ಮತ್ತು ಕರಿಮೆಣಸು ಹಾಳಾಗಿದೆ. ವೈಜ್ಞಾನಿಕವಾಗಿ ಸರ್ಕಾರ ತಾಲ್ಲೂಕಿನಾದ್ಯಂತ ಬೆಳೆ ವಿಮೆ ಘೋಷಣೆ ಮಾಡಬೇಕು. ಬೆಳೆ ಸಮೀಕ್ಷೆದಾರರು ರೈತರನ್ನು ಸಂಪರ್ಕಿಸಿ ಸಮೀಕ್ಷೆ ಕೈಗೊಳ್ಳಬೇಕೆಂದರು.

**ಸಿಬ್ಬಂದಿ ಗೌರವಧನ ಹೆಚ್ಚಿಸಿ**

ಹೋಬಳಿ ಕಾಫಿ ಬೆಳೆಗಾರರ ಸಂಘದ ಅಧ್ಯಕ್ಷ ಮೇಘರಾಜು ಅವರು ಮಾತನಾಡಿ, ಪ್ರತಿವರ್ಷ ಕಾಫಿ, ಮೆಣಸು, ಅಡಿಕೆ ಸೇರಿ ಯಾವುದೇ ಬಹುವಾರ್ಷಿಕ ಬೆಳೆಗಳ ಬೆಳೆ ಸಮೀಕ್ಷೆ ವೈಜ್ಞಾನಿಕವಾಗಿ ಅಗತ್ಯವಿಲ್ಲವಾದರೂ ಒತ್ತಾಯವಾಗಿ ಸರ್ಕಾರ ಪ್ರತೀ ವರ್ಷ ಬೆಳೆ ಸಮೀಕ್ಷೆ ಯನ್ನು ಈ ಬಹುವಾರ್ಷಿಕ ಬೆಳೆಗಳಲ್ಲಿ ಕೈಗೊಳ್ಳಲು ಕಡ್ಡಾಯ ಮಾಡಿ ಎಲ್ಲರ ಸಮಯ ಮತ್ತು ಹಣ ವ್ಯಯ ಮಾಡುತ್ತಿದೆ. ಮಲೆನಾಡು ಭಾಗಗಳಲ್ಲಿ ನಮ್ಮದೇ ತೋಟಗಳ ಮಧ್ಯೆ ನಿಂತರೂ ಬೆಳೆ ಸಮೀಕ್ಷೆ ಕೈಗೊಳ್ಳಲು ನೀವು ಗಡಿ ರೇಖೆಯೊಳಗೆ ಇಲ್ಲ, ಜಿಪಿಎಸ್ ಇಲ್ಲವೆಂದು ತೋರಿಸುತ್ತದೆ. ಇಂತಹ ಬಹುತೇಕ ಸಮಸ್ಯೆಗಳಿಂದ ವಿದ್ಯಾವಂತ ಬೆಳೆಗಾರರಿಗೂ ಬೆಳೆ ಸಮೀಕ್ಷೆ ಕೈಗೊಳ್ಳಲು ಕಷ್ಟವಾಗಿದೆ. ಹೀಗೆಯೇ ಬೆಳೆ ಸಮೀಕ್ಷೆದಾರರಿಗೂ ಜಿಪಿಎಸ್ ಹೊಂದಲು ಅನಾವಶ್ಯಕವಾಗಿ ತೋಟವೆಲ್ಲಾ ಅಲೆಯುವಂತಾಗಿರುವುದನ್ನು ಗಮನಿಸಿದ್ದೇವೆ. ಸರ್ಕಾರ ಅವರಿಗೆ ಒಂದು ತಾಕಿಗೆ ನೀಡುವ 11 ರಿಂದ 20 ರೂ. ಗೌರವಧನ ಪೆಟ್ರೋಲ್ ವೆಚ್ಚಕ್ಕೆ ಸಾಲುವುದಿಲ್ಲವೆಂದರು.

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಗಂಗಾಧರನ್ ಮಾತನಾಡಿ, ಬೆಳೆ ಸಮೀಕ್ಷೆ ಯೋಜನೆಯಿಂದ ರೈತರು ಜಮೀನಿನಲ್ಲಿ ಬೆಳೆದ ಬೆಳೆಯನ್ನು ಖಾತರಿಪಡಿಸಿ ಕೊಂಡು, ಬೆಳೆ ವಿಮೆ ಮತ್ತು ಬೆಳೆ ಪರಿಹಾರ ಪ್ರಯೋಜನ ಪಡೆಯಬೇಕೆಂದರು.

ತಾಂತ್ರಿಕ ವ್ಯವಸ್ಥಾಪಕ ಶ್ರವಣ್ ಕುಮಾರ್, ರೈತರು ಮತ್ತು ಬೆಳೆ ಸಮೀಕ್ಷೆದಾರರಿಗೆ ಅಂಚೆ ಕಚೇರಿ ಹಾಗು ಬ್ಯಾಂಕ್‌ಗಳಲ್ಲಿರುವ ವಿಮಾ ಯೋಜನೆಗಳ ಬಗ್ಗೆ ಅರಿವು ಮೂಡಿಸಿದರು.

ಸಹಾಯಕ ಕೃಷಿ ನಿರ್ದೇಶಕ ಯು.ಎಂ.ಪ್ರಕಾಶ್‌ಕುಮಾರ್, ರಾಜಸ್ವ ನಿರೀಕ್ಷಕ ಧನುಪ್ರಕಾಶ್, ಕೃಷಿ ಅಧಿಕಾರಿ ಕೇಶವಮೂರ್ತಿ, ತಾಂತ್ರಿಕ ಅಧಿಕಾರಿ ಅಜಿತ್ ಪ್ರಸಾದ್ ಇದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

C M Y K C M Y K C M Y K C M Y K